ಸೋಮವಾರ, ನವೆಂಬರ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 312 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಒಂಟೆ ಅಲಂಕಾರ
ರಾಜಸ್ಥಾನದ ಪುಷ್ಕರ್ ನಗರದಲ್ಲಿ ನಡೆದ ವಾರ್ಷಿಕ ಒಂಟೆ ಜಾತ್ರೆಯಲ್ಲಿ 'ಒಂಟೆಗೆ ಅಲಂಕಾರ ಸ್ಪರ್ಧೆ' ನಡೆಸಲಾಯಿತು

ಮಹಾರಾಷ್ಟ್ರ: 'ಸಂವಿಧಾನ ಉಳಿಸಿ' ನೆಚ್ಚಿಕೊಂಡ ಕಾಂಗ್ರೆಸ್: 'ಹಿಂದುತ್ವ'ದಿಂದ ಎನ್‌ಸಿಪಿ ದೂರ

ಬಿಜೆಪಿ 'ಉಗ್ರ ಹಿಂದುತ್ವ'ದ ಮೊರೆ

• ಸುಮಿತ್ ಪಾಂಡೆ

ಮುಂಬೈ: ರಾಜಕೀಯವಾಗಿ ವಿಭಜಿತವಾಗಿರುವಂತೆ ಕಾಣಿಸುತ್ತಿರುವ ಮಹಾರಾಷ್ಟ್ರದಲ್ಲಿ ಹತ್ತಕ್ಕೂ ಹೆಚ್ಚು ಸಣ್ಣ ಹಾಗೂ ದೊಡ್ಡ ಪಕ್ಷಗಳು ಅಧಿಕಾರದ ಗದ್ದುಗೆ ಹಿಡಿಯಲು ಹೋರಾಟ ನಡೆಸುತ್ತಿವೆ.

ವಿಧಾನಸಭಾ ಚುನಾವಣೆಯ ಪ್ರಚಾರದ ಕಾವು ಏರುತ್ತಿದ್ದು, ಕಾಂಗ್ರೆಸ್‌ನ 'ಸಂವಿಧಾನ ಉಳಿಸಿ' ಅಭಿಯಾನಕ್ಕೆ ಪ್ರತಿಯಾಗಿ ಬಿಜೆಪಿಯು 'ಬಟೇಂಗೆ ತೊ ಕಟೇಂಗೆ' (ಒಗ್ಗಟ್ಟು ಇಲ್ಲದಿದ್ದರೆ ನಮ್ಮನ್ನು ಮುಗಿಸುತ್ತಾರೆ) ನಿರೂಪಣೆಯನ್ನು ಮುಂದಿಟ್ಟು ಮತಗಳಿಕೆಗೆ ಕಸರತ್ತು ನಡೆಸಿದೆ.

ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದಲ್ಲಿ ಬಿಜೆಪಿಯ ಮಿತ್ರಪಕ್ಷಗಳಾದ ಶಿವಸೇನಾ (ಶಿಂದೆ ಬಣ) ಮತ್ತು ಎನ್‌ಸಿಪಿಯು (ಅಜಿತ್ ಪವಾರ್ ಬಣ), ಸರ್ಕಾರ ಜಾರಿಗೊಳಿಸಿರುವ ಸಾಮಾಜಿಕ ಅಭಿವೃದ್ಧಿ ಯೋಜನೆಗಳ ಮೇಲೆ ಒತ್ತು ನೀಡಿ ಪ್ರಚಾರ ಅಭಿಯಾನ ನಡೆಸುತ್ತಿವೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನೀಡಿರುವ 'ಬಟೇಂಗೆ' ಹೇಳಿಕೆಯಿಂದ ಎನ್‌ಸಿಪಿ ಅಂತರ ಕಾಯ್ದುಕೊಂಡಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಕೂಡ ಬಿಜೆಪಿಯ 'ಉಗ್ರ ಹಿಂದುತ್ವ'ದ ಪ್ರಚಾರ ಶೈಲಿಯು, ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ತಾನು ನಡೆಸುತ್ತಿರುವ ಪ್ರಚಾರ ಅಭಿಯಾನವನ್ನು ಮಂಕಾಗಿಸುವುದೇ ಎಂಬ ಅವಲೋಕನ ನಡೆಸುತ್ತಿದೆ.


'ಮಹಾಯುತಿ' ಮೈತ್ರಿಕೂಟದಲ್ಲಿ ಎನ್‌ಸಿಪಿ ಗರಿಷ್ಠ ಸಂಖ್ಯೆಯ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಪಕ್ಷವು ಯೋಗಿ ಹೇಳಿಕೆಯಿಂದ ಅಂತರ ಕಾಯ್ದುಕೊಳ್ಳಲು ಇದು ಪ್ರಮುಖ ಕಾರಣ. 'ಎನ್‌ಸಿಪಿ 57 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದು, ಮುಸ್ಲಿಂ ಅಭ್ಯರ್ಥಿಗಳು ಸುಮಾರು ಶೇ 10ರಷ್ಟಿದ್ದಾರೆ' ಎಂದು ಮುಖಂಡರೊಬ್ಬರು ಹೇಳಿದ್ದಾರೆ.

7ನೇ ಪುಟ ನೋಡಿ

ಪ್ರಜಾ ಮತ
ಜನತಂತ್ರದ ಹಬ್ಬ

ಚುನಾವಣಾ ಕಾರ್ಯತಂತ್ರ

- 'ಮಹಾಯುತಿ' ಮೈತ್ರಿಕೂಟದಲ್ಲಿ ಗರಿಷ್ಠ ಸಂಖ್ಯೆಯ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಕಾರಣ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯು ಯೋಗಿ ಆದಿತ್ಯನಾಥ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ
- ಕಾಂಗ್ರೆಸ್‌ನ 'ಸಂವಿಧಾನ ಉಳಿಸಿ' ಅಭಿಯಾನದ ಪ್ರಭಾವವು ಕಳೆದ ನಾಲ್ಕು ತಿಂಗಳುಗಳಲ್ಲಿ ಬಹಳ ಕಡಿಮೆಯಾಗಿದೆ ಎಂಬುದು ಬಿಜೆಪಿಯ ಭಾವನೆ
- ಲೋಕಸಭಾ ಚುನಾವಣೆ ವೇಳೆ ವಿದರ್ಭ ಮತ್ತು ಮರಾಠವಾಡ ಭಾಗದಲ್ಲಿ ಅಲ್ಪಸಂಖ್ಯಾತರ ಧ್ರುವೀಕರಣ ಹಾಗೂ ಜಾತಿ ಸಮೀಕರಣವು ಎದ್ದುಕಂಡಿದ್ದವು



ಏಕನಾಥ ಶಿಂದೆ | ಅಜಿತ್ ಪವಾರ್

ರೈತರು, ಮಹಿಳೆಯರಿಗೆ ಭರಪೂರ ಭರವಸೆ

ಮಹಾರಾಷ್ಟ್ರದಲ್ಲಿ ಬಿಜೆಪಿ ಮತ್ತು ಮಹಾ ವಿಕಾಸ ಆಘಾಡಿ (ಎಂವಿಎ) ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದ್ದು, ದೊಡ್ಡ ಮತದಾರ ವರ್ಗವಾಗಿರುವ ಮಹಿಳೆಯರಿಗೆ ಮತ್ತು ರೈತರಿಗೆ ಹಲವು ಭರವಸೆಗಳನ್ನು ನೀಡಲಾಗಿದೆ.

ರೈತರ ಸಾಲ ಮನ್ನಾ ಮತ್ತು ಮತಾಂತರ ವಿರೋಧಿ ಕಾನೂನೂ ರೂಪಿಸುವುದಾಗಿ ಬಿಜೆಪಿ ಹೇಳಿದೆ. ಜಾತಿ ಗಣತಿ ನಡೆಸಲು ಬದ್ಧವಾಗಿರುವುದಾಗಿ ಘೋಷಿಸಿರುವ ಎಂವಿಎ, ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಮತ್ತು ತಿಂಗಳಿಗೆ ₹3,000 ನೆರವು ನೀಡುವುದಾಗಿ ತಿಳಿಸಿದೆ.

ಉಪ ಚುನಾವಣೆ ಬಹಿರಂಗ ಪ್ರಚಾರ ಇಂದು ಅಂತ್ಯ

ರಾಮನಗರ: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ 6 ಗಂಟೆಗೆ ತೆರೆ ಬೀಳಲಿದೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣ, ಹಾವೇರಿ ಜಿಲ್ಲೆಯ ಶಿಗ್ಗಾವಿ ಹಾಗೂ ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ನ. 13ರಂದು ಮತದಾನ ನಡೆಯಲಿದೆ. ಬಹಿರಂಗ ಪ್ರಚಾರ ಅಂತ್ಯಗೊಂಡ ನಂತರ ಮನೆ, ಮನೆಗೆ ತೆರಳಿ ಪ್ರಚಾರ ನಡೆಸಲು ಅವಕಾಶ ಇದೆ.

ಬಹಿರಂಗ ಪ್ರಚಾರದ ಕೊನೆಯ ದಿನವಾದ ಸೋಮವಾರ ಮೂರೂ ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳು ಬೃಹತ್ ಸಮಾವೇಶ ಹಮ್ಮಿಕೊಂಡು ಶಕ್ತಿ ಪ್ರದರ್ಶನಕ್ಕೆ ಮುಂದಾಗಿವೆ. ಚನ್ನಪಟ್ಟಣದಲ್ಲಿ ಬೆಳಿಗ್ಗೆ ಕಾಂಗ್ರೆಸ್ ಮತ್ತು ಮಧ್ಯಾಹ್ನ ಜೆಡಿಎಸ್ ಸಮಾವೇಶ ಹಮ್ಮಿಕೊಂಡಿವೆ.

ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮತದಾರರಲ್ಲದವರು ನ.11ರ ಸಂಜೆ 5.30ರ ನಂತರ ಕ್ಷೇತ್ರ ಬಿಟ್ಟು ಹೊರ ಹೋಗಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಮೂರೂ ವಿಧಾನಸಭಾ ಕ್ಷೇತ್ರಗಳ ಫಲಿತಾಂಶ ನ.23ರಂದು ಹೊರಬೀಳಲಿದೆ. ಅದೇ ದಿನ ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆ ಫಲಿತಾಂಶ ಕೂಡ ಪ್ರಕಟವಾಗಲಿದೆ.

ಜಮೀರ್ ವಿರುದ್ಧ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ



ಜಮೀರ್

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅರ್ಜಿಯನ್ನು ತಿರಸ್ಕರಿಸಿದ 'ಹೈಕೋರ್ಟ್‌ನದು ರಾಜಕೀಯ ತೀರ್ಪು' ಎಂದಿದ್ದ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸೂಚಿಸಿದ್ದಾರೆ.

ಅಡ್ವೊಕೇಟ್ ಜನರಲ್ ಅವರಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಇದೇ 6ರಂದು ಪತ್ರ ಬರೆದಿದ್ದಾರೆ. 'ಹೈಕೋರ್ಟ್ ಆದೇಶದ ವಿರುದ್ಧ ಗಂಭೀರ ಆರೋಪ ಮಾಡಿದ ಮತ್ತು ನ್ಯಾಯಾಲಯದ ಸಮಗ್ರತೆಯನ್ನು ಪ್ರಶ್ನಿಸಿದ ಆಪಾದನೆ ಅವರ ಮೇಲಿದೆ. ಈ ಸಂಬಂಧ ಕಾನೂನಿನ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ' ಎಂದು ಸೂಚಿಸಿದ್ದಾರೆ.

ತಮ್ಮ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಯನ್ನು ತಿರಸ್ಕರಿಸಿದ್ದ ಹೈಕೋರ್ಟ್, ರಾಜ್ಯಪಾಲರ ಕ್ರಮವನ್ನು ಎತ್ತಿಹಿಡಿದಿತ್ತು. ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅವರು ಜಮೀರ್ ಅಹಮದ್ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದರು. ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿದ್ದರು.



'ಮೋದಿ ಆರೋಪ ಸಾಬೀತುಪಡಿಸಿದರೆ ಶಿಕ್ಷೆಗೆ ಗುರಿಯಾಗಲು ಸಿದ್ಧ'

ಬೆಂಗಳೂರು: 'ಮಹಾರಾಷ್ಟ್ರ ಚುನಾವಣೆಗಾಗಿ ಕರ್ನಾಟಕ ಕಾಂಗ್ರೆಸ್ ಸರ್ಕಾರ ಅಬಕಾರಿ ಇಲಾಖೆಯಲ್ಲಿ ₹ 700 ಕೋಟಿ ವಸೂಲಿ ಮಾಡಿದೆ ಎಂಬ ತಮ್ಮ ಆರೋಪವನ್ನು ಪ್ರಧಾನಿ ನರೇಂದ್ರ ಮೋದಿ ಸಾಬೀತುಪಡಿಸಲಿ. ನಾವು ಯಾವುದೇ ಶಿಕ್ಷೆಗೆ ಬೇಕಾದರೂ ಗುರಿಯಾಗುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. 7



ನಿಷೇಧಿತ ಖಾಲಿಸ್ತಾನ ಟೈಗರ್ ಫೋರ್ಸ್‌ನೊಂದಿಗೆ (ಕೆಟಿಎಫ್) ನಂಟು

ಕೆನಡಾದಲ್ಲಿ ಉಗ್ರ ದಲ್ಲಾ ಬಂಧನ?

ನವದೆಹಲಿ (ಪಿಟಿಐ): ಭಾರತವು ಉಗ್ರ ಎಂದು ಘೋಷಿಸಿರುವ ಅರ್ಶ್‌ದೀಪ ಸಿಂಗ್ ಗಿಲ್ ಅಲಿಯಾಸ್ ಅರ್ಶ್ ದಲ್ಲಾ ಹಾಗೂ ಮತ್ತೊಬ್ಬನನ್ನು ಕೆನಡಾದಲ್ಲಿ ನಡೆದ ಶೂಟಿಂಗ್ ನಂತರ ಬಂಧಿಸಿರುವ ಸಾಧ್ಯತೆ ಇದೆ ಎಂದು ಮೂಲಗಳು ಭಾನುವಾರ ಹೇಳಿವೆ.

ಈ ಘಟನೆಯು ಒಂಟಾರಿಯೊ ಪ್ರಾಂತ್ಯದ ಮಿಲ್ಟನ್‌ನಲ್ಲಿ ಅಕ್ಟೋಬರ್ 28ರಂದು ನಡೆದಿದೆ. ದಲ್ಲಾ, ನಿಷೇಧಿತ ಖಾಲಿಸ್ತಾನ ಟೈಗರ್ ಫೋರ್ಸ್‌ನೊಂದಿಗೆ (ಕೆಟಿಎಫ್) ನಂಟು ಹೊಂದಿದ್ದಾನೆ ಎಂದು ಹೇಳಿವೆ.

'ಉದ್ದೇಶಪೂರ್ವಕವಾಗಿ ಗುಂಡು ಹಾರಿಸಿದ' ಆರೋಪದ ಮೇಲೆ 25 ವರ್ಷದ ಹಾಲ್ಟನ್ ಹಿಲ್ಸ್ ನಿವಾಸಿ ಹಾಗೂ 28 ವರ್ಷದ ಸರ್ರೆ ಬಿ.ಸಿ ನಿವಾಸಿಯನ್ನು ಬಂಧಿಸಲಾಗಿದ್ದು, ತನಿಖೆ ನಡೆಯುತ್ತಿದೆ' ಎಂದು ಹಾಲ್ಟನ್ ಪ್ರಾದೇಶಿಕ ಪೊಲೀಸ್ ಸೇವೆಗಳ ಅಧಿಕಾರಿಗಳು ಅಕ್ಟೋಬರ್ 29ರಂದು ಹೇಳಿದ್ದರು.

'ಈ ಇಬ್ಬರು ಆಸ್ಪತ್ರೆಗೆ ದಾಖಲಾಗಿದ್ದರು. ಈ ಪೈಕಿ ಒಬ್ಬಾತನಿಗೆ ಗುಂಡೇಟು ತಗುಲಿತ್ತು. ಚಿಕಿತ್ಸೆ ನೀಡಿದ ನಂತರ ಇಬ್ಬರನ್ನೂ ಮನೆಗೆ ಕಳುಹಿಸಲಾಗಿತ್ತು. ಗುಂಡು ಹಾರಿಸಿದ ಪ್ರಕರಣ ಕುರಿತು ತನಿಖೆ ನಡೆಸುತ್ತಿದ್ದ ಪೊಲೀಸರು, ಇಬ್ಬರನ್ನೂ ಬಂಧಿಸಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ. ಕೆನಡಾ ಪೊಲೀಸರು ಬಂಧಿತರಿಬ್ಬರ ಗುರುತನ್ನು ಬಹಿರಂಗಪಡಿಸಿಲ್ಲ. ಅವರ ಜಾಮೀನು ಅರ್ಜಿ ವಿಚಾರಣೆ ಬಾಕಿ ಇದ್ದು, ಇಬ್ಬರೂ ಕಸ್ಟಡಿಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

'ಕೆನಡಾ ಪೊಲೀಸರು ಬಂಧಿಸಿರುವ ಇಬ್ಬರ ಪೈಕಿ ಒಬ್ಬಾತ ಅರ್ಶ್ ದಲ್ಲಾ ಎಂದು ನಂಬಲಾಗಿದೆ. ಈತ, ಕಳೆದ ವರ್ಷ ಹತ್ಯೆಯಾದ ಮತ್ತೊಬ್ಬ ಘೋಷಿತ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಪರವಾಗಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದ' ಎಂದು ಇಲ್ಲಿನ ಮೂಲಗಳು ಹೇಳಿವೆ.

11ನೇ ಪುಟ ನೋಡಿ

ದಲ್ಲಾ ಗ್ಯಾಂಗ್‌ನ ಇಬ್ಬರು ಶೂಟರ್‌ಗಳ ಸೆರೆ

ಚಂಡೀಗಢ: ಕೆನಡಾ ಮೂಲದ ಗ್ಯಾಂಗ್‌ಸ್ಟರ್ ಹಾಗೂ ಉಗ್ರ ಅರ್ಶ್ ದಲ್ಲಾ ಗ್ಯಾಂಗ್‌ನ ಇಬ್ಬರು ಶೂಟರ್‌ಗಳನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಬರ್ನಾಲದ ಭದೋರ್ದ ನಿವಾಸಿ ಅನ್ಮೋಲ್‌ಪ್ರೀತ್ ಸಿಂಗ್ ಅಲಿಯಾಸ್ ವಿಶಾಲ್ ಹಾಗೂ ಖರಾರ್ ನಿವಾಸಿ ನವಜೋತ್ ಸಿಂಗ್ ಅಲಿಯಾಸ್ ನೀತು ಬಂಧಿತರು.

ಕಳೆದ ತಿಂಗಳು ನಡೆದಿದ್ದ ಸಿಖ್ ಹೋರಾಟಗಾರ ಗುರ್‌ಪ್ರೀತ್ ಸಿಂಗ್ ಹರಿ ನೌ ಅಲಿಯಾಸ್ ಭೋದಿ ಅವರ ಹತ್ಯೆಯಲ್ಲಿ ಈ ಇಬ್ಬರೂ ಭಾಗಿಯಾಗಿದ್ದರು ಎಂಬ ಆರೋಪದಡಿ ಬಂಧಿಸಲಾಗಿದೆ ಎಂದು ಡಿಜಿಪಿ ಗೌರವ ಯಾದವ್ ತಿಳಿಸಿದ್ದಾರೆ.

ರಾಜ್ಯದ ಗೂಂಡಾ ನಿಗ್ರಹ ಕಾರ್ಯಪಡೆಯ ವಿಶೇಷ ಕಾರ್ಯಾಚರಣೆ ಘಟಕ ಹಾಗೂ ಫರೀದ್‌ಕೋಟ್ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಇವರನ್ನು ಬಂಧಿಸಿದ್ದಾರೆ ಎಂದು ಯಾದವ್ ತಿಳಿಸಿದ್ದಾರೆ.

ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಇತ್ತೀಚೆಗೆ ನಡೆದಿದ್ದ ವ್ಯಕ್ತಿಯ ಕೊಲೆಯಲ್ಲಿ ಬಂಧಿತರ ಪಾತ್ರ ಇದೆ ಎಂದು ಆರೋಪಿಸಲಾಗಿದೆ.

11ನೇ ಪುಟ ನೋಡಿ



ಬ್ರಹ್ಮಾವರ: ಕಸ್ಟಡಿಯಲ್ಲಿದ್ದ ಆರೋಪಿ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಘಟನೆ ಕುರಿತು ಮಾಹಿತಿ ಪಡೆದ ಪೊಲೀಸ್ ವರಿಷ್ಠಾಧಿಕಾರಿ ಅರುಣ್
- ಮಣಿಪಾಲದ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ

ಬ್ರಹ್ಮಾವರ (ಉಡುಪಿ): ಮಹಿಳೆಯೊಬ್ಬರ ಮನೆಗೆ ನುಗ್ಗಿ ಅವರನ್ನು ಚುಡಾಯಿಸಿದ ಆರೋಪದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದ ಕೇರಳದ ಕಾರ್ಮಿಕರೊಬ್ಬರು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಕೇರಳದ ಕೊಲ್ಲಂನ ಬಿಜು ಮೋಹನ್ (42) ಮೃತ ವ್ಯಕ್ತಿ.

ಚೇರ್ಕಾಡಿ ಸೂರೆಬೆಟ್ಟಿನಲ್ಲಿ ಶನಿವಾರ ರಾತ್ರಿ ಮದ್ಯ ಕುಡಿದು ಮನೆಗೆ ನುಗ್ಗಿ ಮಹಿಳೆಯೊಬ್ಬರನ್ನು ಚುಡಾಯಿಸಿದ ಆರೋಪದ ಮೇಲೆ ಪೊಲೀಸರು ಅವರನ್ನು ಠಾಣೆಗೆ ಕರೆತಂದಿದ್ದರು. ಈ ಬಗ್ಗೆ ಮಹಿಳೆ ಬ್ರಹ್ಮಾವರ ಠಾಣೆಗೆ ದೂರು ನೀಡಿದ್ದರು.

'ಮಹಿಳೆಯನ್ನು ಚುಡಾಯಿಸಿದ ಬಗ್ಗೆ ಠಾಣೆಗೆ ದೂರವಾಣಿ ಕರೆ ಬಂದಿತ್ತು. ಅದರಂತೆ ಪೊಲೀಸರು ಬಿಜು ಮೋಹನ್ ಎಂಬಾತನನ್ನು ಠಾಣೆಗೆ ಕರೆತಂದಿದ್ದರು. ಲಾಕಪ್‌ನಲ್ಲಿದ್ದ ಆತ ಶನಿವಾರ ರಾತ್ರಿ 3.45ರ ಸುಮಾರಿಗೆ ಗೋಡೆಗೆ ತಲೆ ಬಡಿದುಕೊಂಡಿರುವುದು ಪೊಲೀಸರ ಗಮನಕ್ಕೆ ಬಂದಿದೆ. ಆತನನ್ನು ಕೂಡಲೇ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಗಿತ್ತು. ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕುಮಾರ್ ಹೇಳಿದ್ದಾರೆ.

'ಮೃತ ವ್ಯಕ್ತಿಯು ಕೂಲಿ ಕೆಲಸಕ್ಕಾಗಿ ಇಲ್ಲಿಗೆ ಬಂದಿದ್ದು, ಆತನ ಕುಟುಂಬದವರಿಗೆ ಮಾಹಿತಿ ನೀಡಿದ್ದೇವೆ. ಅವರು ಏನು ದೂರು ನೀಡುತ್ತಾರೆ ಎಂಬುದನ್ನು ಆಧರಿಸಿ ಮುಂದಿನ ತನಿಖೆ ನಡೆಯಲಿದೆ. ಇದು ಲಾಕಪ್ ಡೆತ್ ಪ್ರಕರಣವಾಗಿರುವುದರಿಂದ ಸಿಐಡಿ ತನಿಖೆ ನಡೆಯಲಿದೆ' ಎಂದು ಅರುಣ್ ಕುಮಾರ್ ಮಾಹಿತಿ ನೀಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ





ಪದ ಕಟ್ಟುವ ಸ್ಪರ್ಧೆ 30ಕ್ಕೆ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಇಂಗ್ಲಿಷ್ ಪದಗಳಿಗೆ ಕನ್ನಡದಲ್ಲೇ ಸುಲಭವಾಗಿ ಪದ ಕಟ್ಟುವ ಸ್ಪರ್ಧೆಯನ್ನು ಮುನ್ನೋಟ ಟ್ರಸ್ಟ್ ಇದೇ 30ರಂದು ಹಮ್ಮಿಕೊಂಡಿದೆ.

ಮೊದಲ ಮೂರು ವಿಜೇತರಿಗೆ ಕ್ರಮವಾಗಿ ₹10 ಸಾವಿರ, ₹7 ಸಾವಿರ ಹಾಗೂ ₹5 ಸಾವಿರ ನಗದು ಬಹುಮಾನ ದೊರೆಯಲಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವೇಗದ ಬದಲಾವಣೆ ಅರಗಿಸಿಕೊಂಡು, ಹೊಸ ಕಾಲದ ಎಲ್ಲ ಅರಿವಿನ ಕವಲುಗಳನ್ನು ಕನ್ನಡದಲ್ಲೂ ಕಟ್ಟಿಕೊಳ್ಳಲು ಕನ್ನಡವು ಶಕ್ತಿ ಪಡೆದುಕೊಳ್ಳಬೇಕು. ಕನ್ನಡದ ಪರಿಸರಕ್ಕೆ ಒಗ್ಗುವ ರೂಪದಲ್ಲಿ ಪದ ಕಟ್ಟಣೆಯ ಒಂದು ದೊಡ್ಡ ಅಭಿಯಾನ ರೂಪುಗೊಳ್ಳಬೇಕು ಎಂದು ಟ್ರಸ್ಟ್‌ನ ಪ್ರಶಾಂತ ಸೊರಟೂರ ಹಾಗೂ ವಸಂತ ಶೆಟ್ಟಿ ತಿಳಿಸಿದ್ದಾರೆ.

ಈ ಸ್ಪರ್ಧೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಓದುತ್ತಿರುವ, ಕೆಲಸ ಮಾಡುತ್ತಿರುವವರೂ ಪಾಲ್ಗೊಳ್ಳಬಹುದು. ವಿವರಕ್ಕೆ www.tilipada.org ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಪಿಆರ್‌ಆರ್ ಭೂಸ್ವಾಧೀನದ ಪರಿಹಾರಕ್ಕೆ ಬೀಳಲಿದೆ ಆದಾಯ ತೆರಿಗೆ ಹೊರೆ

ಜಮೀನು ಕಳೆದುಕೊಳ್ಳುವವರಿಗೆ ತೆರಿಗೆ ಭೀತಿ

• ನವೀನ್ ಮಿನೇಜಸ್

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣಕ್ಕೆ ಅಗತ್ಯವಿರುವ 2,650 ಎಕರೆ ಜಮೀನನ್ನು 1894ರ ಭೂಸ್ವಾಧೀನ ಕಾಯ್ದೆಯಡಿ ಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಕ್ರಿಯೆ ಆರಂಭಿಸಿದೆ. ಪರಿಣಾಮವಾಗಿ ಈ ಯೋಜನೆಯಿಂದ ಜಮೀನು ಕಳೆದುಕೊಳ್ಳಲಿರುವ ಸಾವಿರಾರು ರೈತರು, ಬಿಡಿಎ ನೀಡುವ ಪರಿಹಾರದ ಮೊತ್ತಕ್ಕೂ ಆದಾಯ ತೆರಿಗೆ ಪಾವತಿಸಬೇಕಾದ ಬಿಕ್ಕಟ್ಟಿಗೆ ಸಿಲುಕಲಿದ್ದಾರೆ.

ಸದ್ಯ, 'ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಕಾಯ್ದೆ-2013'ರ ಅಡಿಯಲ್ಲಿ ನಡೆಯುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನು ಮಾಲೀಕರಿಗೆ ನೀಡುವ ಪರಿಹಾರದ ಮೊತ್ತಕ್ಕೆ ಮಾತ್ರ ಆದಾಯ ತೆರಿಗೆಯಿಂದ ವಿನಾಯಿತಿ ಇದೆ. ಆದರೆ, ಉಳಿದ ಯಾವುದೇ ಕಾಯ್ದೆಗಳ ಅಡಿಯಲ್ಲಿ ನಡೆಯುವ ಭೂಸ್ವಾಧೀನ ಪ್ರಕ್ರಿಯೆ ನಡೆದರೂ, ರೈತರು ಪಡೆಯುವ ಪರಿಹಾರದ ಮೊತ್ತಕ್ಕೆ ಆದಾಯ ತೆರಿಗೆ ಪಾವತಿಸಬೇಕಾಗಿದೆ.

ಪಿಆರ್‌ಆರ್ ನಿರ್ಮಾಣಕ್ಕೆ 1894ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲೇ ಭೂಸ್ವಾಧೀನ ಪ್ರಕ್ರಿಯೆ ನಡೆಯಲಿದೆ ಎಂದು ರಾಜ್ಯ ಸರ್ಕಾರ ಸೆಪ್ಟೆಂಬರ್ 21ರಂದು ಆದೇಶ ಹೊರಡಿಸಿದೆ. ಆಯಾ ಗ್ರಾಮಗಳಲ್ಲಿನ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳ ಆಧಾರದಲ್ಲಿ ಪರಿಹಾರದ ಮೊತ್ತ ನಿಗದಿಪಡಿಸಲಿದ್ದು, ಸಮ್ಮತಿ ಆಧಾರದ ಭೂಸ್ವಾಧೀನ ಪ್ರಕ್ರಿಯೆ ಮುಕ್ತವಾಗಿ ನಡೆಯಲಿದೆ ಎಂದೂ ಆದೇಶದಲ್ಲಿ ಹೇಳಲಾಗಿದೆ.

'ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಕಾಯ್ದೆ-2013'ರ ಸೆಕ್ಷನ್ 96 ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿತರಿಸುವ ಪರಿಹಾರದ ಮೊತ್ತಕ್ಕೆ ಆದಾಯ ತೆರಿಗೆ ವಿಧಿಸುವುದರಿಂದ ವಿನಾಯ್ತಿ ನೀಡುತ್ತದೆ. ಆದರೆ, 1894ರ ಕಾಯ್ದೆಯಲ್ಲಿ ಅಂತಹ ಯಾವುದೇ ಸೆಕ್ಷನ್ ಇಲ್ಲ. ಆದಾಯ ತೆರಿಗೆ ವಿನಾಯ್ತಿಯು 2013ರ ಕಾಯ್ದೆಯಡಿ ನಡೆಯುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಪರಿಹಾರಕ್ಕೆ ಮಾತ್ರ ಸೀಮಿತವಾಗಿದೆ ಎಂದು ರಾಜ್ಯ ಹೈಕೋರ್ಟ್‌ನ ವಿಭಾಗೀಯ ಪೀಠವು ಅಕ್ಟೋಬರ್ 29ರಂದು ನೀಡಿರುವ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

ಬಿಡಿಎ ಸುದ್ದಿ

ರೈತರಲ್ಲಿ ಆತಂಕ: ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ರೈತರಲ್ಲಿ ಆತಂಕ ಮೂಡಿದೆ. 'ಬೆಂಗಳೂರು ಬಿಸಿನೆಸ್ ಕಾರಿಡಾರ್' ಹೆಸರಿನ 73 ಕಿ.ಮೀ. ಉದ್ದದ ಪಿಆರ್‌ಆರ್ ನಿರ್ಮಾಣಕ್ಕೆ ಜಮೀನು ಕಳೆದುಕೊಳ್ಳುವ ತಮಗೆ 2013ರ ಕಾಯ್ದೆಯಡಿ ಪರಿಹಾರ ನೀಡುತ್ತಿಲ್ಲ ಎಂಬ ಅಸಮಾಧಾನದ ಜತೆಯಲ್ಲೇ, ಪರಿಹಾರದ ಮೊತ್ತಕ್ಕೆ ಆದಾಯ ತೆರಿಗೆಯೂ ಬೀಳಲಿದೆ ಎಂಬುದು ಅವರ ಆತಂಕಕ್ಕೆ ಕಾರಣ.

ಕನಿಷ್ಠ ಶೇ 12.5ರಷ್ಟು ತೆರಿಗೆ ಮತ್ತು ಆದಾಯ ತೆರಿಗೆ ಹಿಂಬಾಕಿಯನ್ನೂ ಕಡಿತ ಮಾಡಿಕೊಳ್ಳಬಹುದು ಎಂಬ ಚರ್ಚೆ ರೈತರೊಳಗೆ ಆರಂಭವಾಗಿದೆ.

ಪಿಆರ್‌ಆರ್ ಭೂಸ್ವಾಧೀನ ವೆಚ್ಚ ತಗ್ಗಿಸುವ ಉದ್ದೇಶದಿಂದ ಯೋಜನೆ ಹಾದುಹೋಗುವ ಮಾರ್ಗದಲ್ಲಿನ ಗ್ರಾಮಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಕಡಿಮೆ ಮಾಡಲಾಗಿತ್ತು. ಅದಾದ ಕೆಲವೇ ತಿಂಗಳಲ್ಲಿ ತೆರಿಗೆ ಭಾರದ ಭೀತಿಯೂ ರೈತರನ್ನು ಆವರಿಸಿದೆ.

ಬಿಡಿಎ ಮಾತ್ರವಲ್ಲ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ), ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಕೂಡ 2013ರ ಕಾಯ್ದೆಯಡಿ ಭೂಸ್ವಾಧೀನ ಪ್ರಕ್ರಿಯೆ ನಡೆಸುತ್ತಿಲ್ಲ. ಈ ಸಂಸ್ಥೆಗಳ ಯೋಜನೆಗಳಿಗೆ ಜಮೀನು ಕಳೆದುಕೊಳ್ಳುವ ರೈತರಿಗೂ ತೆರಿಗೆ ಹೊರೆ ಬೀಳುವುದು ಖಚಿತವಾಗಿದೆ.

'ರಾಜ್ಯ ಸರ್ಕಾರವು ರೈತರ ಜೀವನದ ಜತೆ ಚೆಲ್ಲಾಟ ಆಡಬಾರದು. ರೈತರು ಜಮೀನು ಕಳೆದುಕೊಂಡು ಪಡೆಯುವ ಪರಿಹಾರಕ್ಕೆ ತೆರಿಗೆ ವಿಧಿಸುವುದು ಸರಿಯಲ್ಲ. ಬಿಡಿಎ 2013ರ ಕಾಯ್ದೆಯ ಅಡಿಯಲ್ಲೇ ಭೂಸ್ವಾಧೀನ ಪ್ರಕ್ರಿಯೆ ನಡೆಸುವುದಾಗಿ ಘೋಷಿಸಬೇಕು. ರೈತರ ಹಿತರಕ್ಷಣೆಗೆ ಇರುವ ಮಾರ್ಗ ಇದೊಂದೆ' ಎನ್ನುತ್ತಾರೆ ಕಾನೂನು ತಜ್ಞರೊಬ್ಬರು.

'ಕಾನೂನು ತಜ್ಞರ ಜತೆ ಚರ್ಚೆ'

'ಹೈಕೋರ್ಟ್ ತೀರ್ಪಿನಿಂದ ಪೆರಿಫೆರಲ್ ವರ್ತುಲ ರಸ್ತೆ ಯೋಜನೆ ಮೇಲೆ ಆಗಬಹುದಾದ ಪರಿಣಾಮಗಳ ಕುರಿತು ಕಾನೂನು ತಜ್ಞರ ಜತೆ ಚರ್ಚಿಸುತ್ತೇನೆ' ಎಂದು ಬೆಂಗಳೂರು ಬಿಸಿನೆಸ್ ಕಾರಿಡಾರ್ ಲಿಮಿಟೆಡ್ ಅಧ್ಯಕ್ಷರೂ ಆಗಿರುವ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ನಿಮ್ಮೊಂದಿಗೆ ನಿಲ್ಲುತ್ತೇವೆ: ಸಿ.ಟಿ.ರವಿ

ಬೆಂಗಳೂರು: 'ನಿಮ್ಮ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾದರೆ ಹೆದರಬೇಡಿ. ನಿಮ್ಮ ಜೊತೆ ನಾವು ನಿಲ್ಲುತ್ತೇವೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ.

'ವಕ್ಫ್ ಬೋರ್ಡಿನ ಅನಾಚಾರವನ್ನು ಎದುರಿಸಲು ನಿಮ್ಮ ಜೊತೆಗೆ ಬಿಜೆಪಿ ನಿಲ್ಲಲಿದೆ. ಕಾಂಗ್ರೆಸ್ ಅವರ ಜೊತೆಗೆ ನಿಂತಿದೆ. ಹೆದರದಿರಿ ನಾವು ನಿಮ್ಮೊಂದಿಗೆ ನಿಲ್ಲುತ್ತೇವೆ. ಅವರು ಅನಾಚಾರ ಆರಂಭಿಸಿದ್ದಾರೆ. ನಾವು ಈ ಅನಾಚಾರಕ್ಕೆ ಅಂತ್ಯ ಹಾಡುತ್ತೇವೆ' ಎಂದು ಅವರು ಹೇಳಿದ್ದಾರೆ.

ಪುನೀತ್ ಹೆಸರಲ್ಲಿ ಆರೋಗ್ಯ ಶಿಬಿರ



ಕೆ.ಆರ್.ಪುರ: ನಟ ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ಆರೋಗ್ಯ ಶಿಬಿರ ಆಯೋಜನೆ ಮಾಡಿರುವುದು ಶ್ಲಾಘನೀಯ ಕಾರ್ಯ ಎಂದು ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ತಿಳಿಸಿದರು.

ಕೆ.ಆರ್.ಪುರ ಸಮೀಪದ ದೇವಸಂದ್ರದ ಭಾರತೀಯ ವಿದ್ಯಾನಿಕೇತನ್ ಕಾಲೇಜು ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ನಟ ಪುನೀತ್ ರಾಜ್‌ಕುಮಾರ್ ಸವಿ ನೆನಪಿನಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಮೋಹನ್ ಹಾಗೂ ಕಾಂಗ್ರೆಸ್ ಮುಖಂಡ ಡಿ.ಕೆ. ರಮೇಶ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕಣ್ಣಿನ ಉಚಿತ ತಪಾಸಣೆ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಾನವೀಯ ಮೌಲ್ಯ ಅಳವಡಿಸಿಕೊಂಡಿದ್ದ ಕಲಾವಿದ ಪುನೀತ್ ಅವರು ಯಾರಿಗೂ ಗೊತ್ತಾಗದಂತೆ ಸಾಕಷ್ಟು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅವರ ನಿಜ ಜೀವನದಲ್ಲಿ ಸರಳ ವ್ಯಕ್ತಿತ್ವ ಸಾಮಾಜಿಕ ಕಾರ್ಯಗಳು ಸಾವಿನ ಬಳಿಕವೂ ಜೀವಂತವಾಗಿಸಿದೆ ಎಂದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಮೋಹನ್ ಮಾತನಾಡಿದರು. ರಾಜ್ಯಸಭೆಯ ಮಾಜಿ ಸದಸ್ಯ ರಾಜೀವ್ ಗೌಡ, ಆಯೋಜಕ ಡಿ.ಕೆ.ರಮೇಶ್, ಸಿವಿ.ರಾಮನ್ ಆಸ್ಪತ್ರೆ ಅಧೀಕ್ಷಕ ರಾಜೇಶ್, ಮುಖಂಡರಾದ ಡಿ.ಕೆ.ದೇವೇಂದ್ರ ಮೊದಲಾದವರು ಇದ್ದರು.

ಮದ್ಯದಂಗಡಿ ಪರವಾನಗಿ ಹರಾಜಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಜಾತಿ ಮತ್ತು ಸಮುದಾಯಗಳ ಜನರಿಗೂ ಮದ್ಯ ದಂಗಡಿಗಳನ್ನು ನಡೆಸಲು ಅವಕಾಶವಾಗುವಂತೆ ಮದ್ಯದಂಗಡಿಗಳ ಪರವಾನಗಿಯನ್ನು ಹರಾಜಿನ ಮೂಲಕ ಹಂಚಿಕೆ ಮಾಡಬೇಕು ಎಂದು ಭೀಮ್ ಆರ್ಮಿ ಆಗ್ರಹಿಸಿದೆ.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಅಧ್ಯಕ್ಷ ರಾಜ್‌ಗೋಪಾಲ್ ಡಿ., '25 ವರ್ಷಗಳಿಂದ ರಾಜ್ಯದಲ್ಲಿ ಮದ್ಯದಂಗಡಿಗಳ ಪರವಾನಗಿಗಳ ಹರಾಜು ನಡೆಸಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಮತ್ತು ಬಂಡವಾಳಶಾಹಿಗಳು ಸೇರಿಕೊಂಡು ತಮಗೆ ಬೇಕಾದವರಿಗೆ ಪರವಾನಗಿ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

ಕಾನೂನು, ನಿಯಮಗಳನ್ನು ತಮಗೆ ಬೇಕಾದಂತೆ ಬದಲಾವಣೆ ಮಾಡಿಕೊಂಡು ಮದ್ಯದಂಗಡಿ ತೆರೆಯಲು ಪರವಾನಗಿ ಮಂಜೂರಾತಿಯಲ್ಲಿ ಅಕ್ರಮ ನಡೆಸಲಾಗುತ್ತಿದೆ. ಕೆಲವೇ ವ್ಯಕ್ತಿಗಳ ಕುಟುಂಬದವರು ಹೆಚ್ಚು ಪರವಾನಗಿಗಳನ್ನು ಪಡೆಯುತ್ತಿದ್ದಾರೆ. ಪ್ರತಿ ಹತ್ತು ವರ್ಷಕ್ಕೊಮ್ಮೆ ಹರಾಜು ನಡೆಸುವ ವ್ಯವಸ್ಥೆಯನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಭೀಮ್ ಆರ್ಮಿಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಪ್ರದೀಪ್ ಸಾಮ್ರಾಟ್, ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಅಬ್ದುಲ್ ಸಾಬ್, ಬಸವನಗುಡಿ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಮಹಾದೇವ ಪ್ರಸಾದ್ ಕೆ. ಉಪಸ್ಥಿತರಿದ್ದರು.

ಆರ್‌ಆರ್‌ಬಿ (ಪಿಒ) ಪರೀಕ್ಷೆಗೆ ತರಬೇತಿ

ಬೆಂಗಳೂರು: ಆರ್‌ಆರ್‌ಬಿ (ಪಿಒ) ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ನವೆಂಬರ್ 12ರ ಬೆಳಿಗ್ಗೆ 11.30ಕ್ಕೆ ಉಚಿತ ಮೌಖಿಕ ಪರೀಕ್ಷೆಗೆ ತರಬೇತಿ ನೀಡಲಾಗುವುದು ಎಂದು ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷೆ ಸಂಸ್ಥೆ ತಿಳಿಸಿದೆ. ಅಭ್ಯರ್ಥಿಗಳು ಸೋಮವಾರದೊಳಗೆ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ನಂ.15, 2ನೇ ಹಂತ, ಹಳೇ ವಿಮಾನ ನಿಲ್ದಾಣ ರಸ್ತೆ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ ಬೆಂಗಳೂರು, ಇ ಮೇಲ್: ksfbangalore@gmail.com. ದೂ. 080-25202299, ಮೊ. 7625000990 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು-560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)-22685088, 5193, 5093, 5086, ಫ್ಯಾಕ್ಸ್: (080)-28392310]

ಸಂಕ್ಷಿಪ್ತ ಇ-ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು-58 ರಲ್ಲಿ 500kVA ಡೀಸೆಲ್ ಜನರೇಟರ್ ಸೆಟ್‌ಗಳ 4 ಸಂಖ್ಯೆಗಳ ಪೂರೈಕೆ, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ. ಎನ್‌ಐಇಟಿ: LEOS/CMG/EMW-12/2024-25, ದಿನಾಂಕ: 06.11.2024, ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 323.48 ಲಕ್ಷಗಳು, ಇಎಂಡಿ: ರೂ. 6,46,960/-, ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ: 08 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: ತೆರೆಯುವ ದಿನಾಂಕ: 11.11.2024, ಮುಕ್ತಾಯವಾಗುವ ದಿನಾಂಕ : 28.11.2024

ಆಸಕ್ತ ಟೆಂಡರುದಾರರು ಇ-ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/- ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ
ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ-ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ-ಹರಾಜು ಮಾರಾಟವನ್ನು "ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 21.11.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX06629	ಬಾಸುದೇವ್ ಪ್ರಮಾಣಿಕ್	669711	15-Feb-24	222.800	164.600
ಬನಶಂಕರಿ, ಬೆಂಗಳೂರು [ಕ]	XXXXXXXXXXX49521	ಸುರೇಶ್ ಆರ್	197625	07-Sep-24	47.400	41.000
ಬನಶಂಕರಿ, ಬೆಂಗಳೂರು [ಕ]	XXXXXXXXXXX93117	ಎಸ್ ಹೇಮಲತಾ	132794.65	15-Feb-24	36.700	32.400
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX93757	ಅಜಿತ್‌ಕುಮಾರ್ ಎಂ ಕೆ	148669	27-Sep-24	30.000	29.100
ಭಟ್ಟರಹಳ್ಳಿ ಬೆಂಗಳೂರು [ಕ]	XXXXXXXXXXX67044	ಅಂಬರೀಶ ವಿ	127894	07-Oct-24	32.800	32.400
ಭಟ್ಟರಹಳ್ಳಿ ಬೆಂಗಳೂರು [ಕ]	XXXXXXXXXXX92538	ಜಾಸ್ತಿ ನಾಗೇಂದ್ರ ಬಾಬು	32624	08-May-24	9.300	7.200
ಬಿಡದಿ, ಬೆಂಗಳೂರು [ಕ]	XXXXXXXXXXX74169	ಲಕ್ಷ್ಮೀ	145588	07-Sep-24	34.100	33.800
ಬಿಡದಿ, ಬೆಂಗಳೂರು [ಕ]	XXXXXXXXXXX78260	ಮಧುಶ್ರೀ ಎ	73612	07-Sep-24	17.200	17.000
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX20465	ಬಾಲರಾಜ್ ಎಸ್ ಎಂ	601486.58	04-Aug-24	153.300	150.600
ಚನ್ನಪಟ್ಟಣ [ಕ]	XXXXXXXXXXX28790	ಎಂ ಆರ್ ಶ್ರೀನಿವಾಸ್	368668	08-May-24	71.200	70.100
ಚನ್ನಪಟ್ಟಣ [ಕ]	XXXXXXXXXXX73089	ಮಂಗೀಲಾಲ್	124857	07-Sep-24	33.500	29.800
ಚನ್ನಪಟ್ಟಣ [ಕ]	XXXXXXXXXXX22575	ಬೇಬಿ ನಾಜ್	117575	07-Sep-24	31.900	29.300
ದೇವನಹಳ್ಳಿ, ಬೆಂಗಳೂರು [ಕ]	XXXXXXXXXXX88356	ಮಹೇಶ್ ಎನ್	26418	07-Sep-24	7.100	6.100
ದೊಡ್ಡಬಳ್ಳಾಪುರ, ಬೆಂಗಳೂರು [ಕ]	XXXXXXXXXXX13416	ಗಾಯತ್ರಿ	181286	07-Oct-24	45.160	42.160
ದೊಡ್ಡಬಳ್ಳಾಪುರ, ಬೆಂಗಳೂರು [ಕ]	XXXXXXXXXXX34642	ಮನುಶ್ರೀ ಟಿ ಎ	179645.8	04-Aug-24	43.160	41.160
ದೊಡ್ಡಬಳ್ಳಾಪುರ, ಬೆಂಗಳೂರು [ಕ]	XXXXXXXXXXX87330	ಚಾಂದ್ ಪಾಶಾ	88839	26-Jul-24	23.100	23.100
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX54325	ರಘುನಾಥ ರಾವ್ ಜಿ	402104.51	27-Sep-24	112.800	112.100
ಗೋವಿಂದರಾಜನಗರ ಬೆಂಗಳೂರು [ಕ]	XXXXXXXXXXX80566	ಅಶ್ವಿನ್ ಬಿ ಆರ್	97293	07-Sep-24	25.400	24.900
ಹೊಸಕೋಟೆ, ಬೆಂಗಳೂರು [ಕ]	XXXXXXXXXXX36114	ನಾಸೀರ್	252039	27-Sep-24	67.200	64.500
ಹೊಸಕೋಟೆ, ಬೆಂಗಳೂರು [ಕ]	XXXXXXXXXXX18021	ಪೂಜಾರಿ ಯರ್ರಿ ಸ್ವಾಮಿ	107802	07-Sep-24	23.200	22.900
ಹೊಸಕೋಟೆ, ಬೆಂಗಳೂರು [ಕ]	XXXXXXXXXXX05051	ವರದರಾಜು ಎಂ ಕೆ	74978	04-Aug-24	15.800	15.600
ಹೊಸಕೋಟೆ, ಬೆಂಗಳೂರು [ಕ]	XXXXXXXXXXX56375	ವಿನೋದಾ	62352	08-May-24	15.600	14.600
ಹೊಸಕೋಟೆ, ಬೆಂಗಳೂರು [ಕ]	XXXXXXXXXXX78277	ರಾಹುಲ್ ಸಿಂಗ್	40286	08-May-24	10.600	10.500
ಹೊಸಕೋಟೆ, ಬೆಂಗಳೂರು [ಕ]	XXXXXXXXXXX45943	ನಾಗೇಶ್ ಸಿ	31973	06-Sep-24	7.900	7.700
ಹೊಸಕೋಟೆ, ಬೆಂಗಳೂರು [ಕ]	XXXXXXXXXXX78358	ರಾಹುಲ್ ಸಿಂಗ್	28313	07-Sep-24	6.900	6.700
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	XXXXXXXXXXX81991	ಕಾಕೆ ರಾಜಮ್ಮ	900389	02-Apr-24	286.500	250.000
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	XXXXXXXXXXX87777	ಪಿ ಎನ್ ಪ್ರಸಾದ್ ಮಡ್ಡಿಸೆಟ್ಟಿ	235037	07-Oct-24	66.400	56.000
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	XXXXXXXXXXX86305	ಪಿ ಎನ್ ಪ್ರಸಾದ್ ಮಡ್ಡಿಸೆಟ್ಟಿ	36608	07-Oct-24	10.300	9.000
ಐಟಿಐ ಲೇಔಟ್ ಬೆಂಗಳೂರು [ಕ]	XXXXXXXXXXX40007	ಕೇಶರ್ ದೇವಿ	93187	10-Oct-23	39.600	23.900
ಕಲ್ಯಾಣ್ ನಗರ, ಬೆಂಗಳೂರು [ಕ]	XXXXXXXXXXX99337	ಮಂಜುನಾಥ ಬಿ	2836867.48	27-Sep-24	667.800	607.000
ಕಸ್ತೂರಿ ನಗರ, ಬೆಂಗಳೂರು [ಕ]	XXXXXXXXXXX05275	ಕಮಲೇಶ್ ಸಿಂಗ್	557384.27	27-Sep-24	130.400	122.000
ಕಸ್ತೂರಿ ನಗರ, ಬೆಂಗಳೂರು [ಕ]	XXXXXXXXXXX44591	ಲಕ್ಷ್ಮೀ ಪ್ರಿಯಾ ಪೋಲಿ	506086	07-Sep-24	168.700	142.900
ಕಸ್ತೂರಿ ನಗರ, ಬೆಂಗಳೂರು [ಕ]	XXXXXXXXXXX28709	ತೌಫಿರ್ ಅಹಮ್ಮದ್	31522	07-Jun-24	6.600	6.400
ಕೋರಮಂಗಲ, ಬೆಂಗಳೂರು [ಕ]	XXXXXXXXXXX68690	ಸಮ್ಯಕ್ ದಾಶ್	111256	15-Feb-24	28.100	26.800
ಮಹದೇವಪುರ ಬೆಂಗಳೂರು [ಕ]	XXXXXXXXXXX55614	ಯರ್ರಬಾಲೆ ಚಿನ್ನ ಓಬುಲಮ್ಮ	162124	27-Sep-24	48.500	40.000
ಮಹಾಲಕ್ಷ್ಮೀ ಲೇಔಟ್ ಬೆಂಗಳೂರು [ಕ]	XXXXXXXXXXX61793	ದೀಪಾ ಎಸ್ ಆರ್	63942	05-Aug-24	18.500	15.800
ಮಹಾಲಕ್ಷ್ಮೀ ಲೇಔಟ್ ಬೆಂಗಳೂರು [ಕ]	XXXXXXXXXXX59468	ಶೋಭಾ ಬಿ	58859	07-Jun-24	13.100	13.100
ಮಹಾಲಕ್ಷ್ಮೀ ಲೇಔಟ್ ಬೆಂಗಳೂರು [ಕ]	XXXXXXXXXXX99300	ಐಶ್ವರ್ಯ ವಿ	51905	07-Sep-24	17.100	17.000
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX24966	ಮೊಹಮ್ಮದ್ ಅಜರ್	202832	20-Jul-24	50.600	50.000
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX61594	ಅಶ್ರಫ್	76268	02-Apr-24	25.600	20.700
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX81374	ಲೋಕೇಶ ಪಿ	76326	04-Aug-24	23.700	23.000
ಹಳೆಯ ಮದ್ರಾಸ್ ರಸ್ತೆ ಬೆಂಗಳೂರು [ಕ]	XXXXXXXXXXX05082	ಮುಜಾಹಿದ್	59286	27-Sep-24	15.100	14.800
ಪೀಣ್ಯ, ಬೆಂಗಳೂರು [ಕ]	XXXXXXXXXXX93716	ವುಂಡಾಲ ಹರಿನಾಥ ರೆಡ್ಡಿ	589943	04-Aug-24	136.700	130.800
ಪೀಣ್ಯ, ಬೆಂಗಳೂರು [ಕ]	XXXXXXXXXXX79546	ಸುನಿಲ್ ಎಂ ಪಗಡ	104979	26-Aug-24	25.700	25.700
ಪ್ರಶಾಂತ್ ನಗರ	XXXXXXXXXXX64187	ಗುರುಶಂಕರ್ ಹೆಚ್ ಎ	54326	07-Sep-24	11.700	11.700
ರಾಜರಾಜೇಶ್ವರಿ ನಗರ, ಬೆಂಗಳೂರು	XXXXXXXXXXX01989	ಭಾರತಿ ಎಸ್	111695	27-Sep-24	35.680	32.180
ರಾಜರಾಜೇಶ್ವರಿ ನಗರ, ಬೆಂಗಳೂರು	XXXXXXXXXXX86913	ದಕ್ಷ ಎಂ ಕೊಠಾರಿ	35154	27-Sep-24	15.310	11.560
ರಾಮನಗರ [ಕ]	XXXXXXXXXXX70334	ಮಧುಸೂಧನ್ ಡಿ ಎಂ	68616	27-Sep-24	16.800	15.000
ಆರ್‌ಬಿಐ ಲೇಔಟ್, ಬೆಂಗಳೂರು [ಕ]	XXXXXXXXXXX71818	ವಾಣಿಶ್ರೀ ಎಲ್ ಡಿ	93478	07-Sep-24	19.900	19.500
ಸಹಕಾರನಗರ, ಬೆಂಗಳೂರು [ಕ]	XXXXXXXXXXX15961	ಕಿಶೋರ್ ಆರ್	158980	28-Aug-24	42.500	42.000
ಸಹಕಾರನಗರ, ಬೆಂಗಳೂರು [ಕ]	XXXXXXXXXXX49687	ರಾಹುಲ್ ಸಿಂಗ್	76149	07-Sep-24	22.400	22.000
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX34830	ಬುರ್ಹಾನ್ ಪಾಷಾ ಮಾಲಿಕ್	708096	05-Aug-24	177.400	173.200
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX00632	ಪೂಜಾ ಪ್ರಭು	230607.66	04-Aug-24	50.300	49.800
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX11512	ಕರ್ರಾವುಳ ವೆಂಕಟಹರಿಕೃಷ್ಣ	90323.44	07-Sep-24	23.200	22.300
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX38554	ಶಂಕರ್ ಎಸ್ ಎಸ್.	56439	06-Sep-24	12.500	12.500
ಶಾಂತಿನಗರ, ಬೆಂಗಳೂರು [ಕ]	XXXXXXXXXXX29077	ಭರತ್ ಓ ಎಂ	36178	08-May-24	9.800	9.700
ವಿಜಯನಗರ, ಬೆಂಗಳೂರು [ಕ]	XXXXXXXXXXX75928	ಕಾರ್ತಿಕಾ ಎಂ	168943	07-Sep-24	35.300	35.300
ವಿಜಯನಗರ, ಬೆಂಗಳೂರು [ಕ]	XXXXXXXXXXX13012	ಅಬ್ದುಲ್ಲಾ ಯಾಫಾಯಿ	116217	06-Sep-24	31.500	31.500
ವಿಜಯನಗರ, ಬೆಂಗಳೂರು [ಕ]	XXXXXXXXXXX96460	ಸೈಯದ್ ಜೈನುಲ್ಲಾಬುದ್ದೀನ್	70210.51	06-Sep-24	20.500	18.000
ಯಲಹಂಕ, ಬೆಂಗಳೂರು [ಕ]	XXXXXXXXXXX82509	ಕೆ ಸುಜಾತಾ	548695	27-Sep-24	116.900	114.200
ಯಲಹಂಕ, ಬೆಂಗಳೂರು [ಕ]	XXXXXXXXXXX01241	ಪ್ರಭಾಕರ ಸಿ ಜಿ	107576	20-Jul-24	26.100	25.700
ಯಲಹಂಕ, ಬೆಂಗಳೂರು [ಕ]	XXXXXXXXXXX26168	ಕಿರಣ್ ಕುಮಾರ್ ಎಂ ಎಸ್	77233.18	07-Sep-24	16.400	16.200

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ https://gold.samil.in ನಲ್ಲಿ ದಿನಾಂಕ : 21.11.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ https://gold.samil.in ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Wanted

WANTED FEMALE Office Assistant Qulification any Degree, Good Communication Skills English, Hindi in around Rajajinagar: 9108458798/ 9845579620

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN *Conditions apply
www.dhclassifieds.com
BOOK NOW
For more details contact: 9901641752 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

'ಅಶಕ್ತರ ಸಹಾಯಕ್ಕೆ ಸರ್ಕಾರ ಧಾವಿಸಲಿ'

'ಸಂಸ್ಕೃತಿ ಸಿರಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನ್ಯಾ. ಶಿವರಾಜ ವಿ. ಪಾಟೀಲ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿಗಳು, ಕಲಾವಿದರು ಸೇರಿದಂತೆ ಬಹಳಷ್ಟು ಸಾಧಕರು ವಯಸ್ಸಾದ ಮೇಲೆ ಆರ್ಥಿಕ ಸಂಕಷ್ಟ, ಅನಾರೋಗ್ಯಕ್ಕೆ ತುತ್ತಾಗಿ ಕಷ್ಟ ಪಡುತ್ತಿರುತ್ತಾರೆ. ಅಂಥವರ ನೆರವಿಗೆ ಸರ್ಕಾರ ಧಾವಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ತಿಳಿಸಿದರು.

ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನವು ಈಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಏಳು ಮಂದಿ ಸಾಧಕರಿಗೆ 'ಸಂಸ್ಕೃತಿ ಸಿರಿ-2024' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಸಮಾಜ ಮತ್ತು ಸರ್ಕಾರಗಳು ಸಾಧಕರನ್ನು ಗುರುತಿಸಿ ಗೌರವಿಸುವುದರ ಜೊತೆಗೆ ಸಾಧಕರು ನಡೆದು ಬಂದ ಹಾದಿ, ಪಟ್ಟ ಕಷ್ಟಗಳು, ಅವರ ಪರಿಶ್ರಮಗಳ ಬಗ್ಗೆಯೂ ತಿಳಿಸಿಕೊಡಬೇಕು ಎಂದು ಸಲಹೆ ನೀಡಿದರು.

ಅನರ್ಹರಿಗೆ ಪ್ರಶಸ್ತಿ ನೀಡಿದರೆ ಪ್ರಶಸ್ತಿಗೇ ಅವಮಾನ. ಅರ್ಹ ಸಾಧಕರನ್ನು ಗುರುತಿಸುವುದರಿಂದ ಅವರನ್ನು ಗೌರವಿಸಿದಂತಾಗುತ್ತದೆ. ಯುವಸಾಧಕರಿಗೆ ಪ್ರೇರಣೆ ಆಗುತ್ತದೆ ಎಂದು ವಿಶ್ಲೇಷಿಸಿದರು.



ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ನಗರದಲ್ಲಿ 'ಸಂಸ್ಕೃತಿ ಸಿರಿ 2024' ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಸಾಹಿತಿ ದೊಡ್ಡರಂಗೇಗೌಡ, ಪರಿಸರವಾದಿ ಎ.ಎನ್. ಯಲ್ಲಪ್ಪ ರೆಡ್ಡಿ, ಸಂಸ್ಕೃತಿ ಚಿಂತಕ ಮಲ್ಲೇಪುರಂ ಜಿ. ವೆಂಕಟೇಶ್, ಕವಿ ಎಸ್.ಜಿ. ಸಿದ್ಧರಾಮಯ್ಯ, ರಂಗಕರ್ಮಿ ಸಿ. ಬಸವಲಿಂಗಯ್ಯ, ಸುಗಮ ಸಂಗೀತ ವಿದ್ವಾಂಸರಾದ ಜಯಶ್ರೀ ಅರವಿಂದ್ ಹಾಗೂ ಹೊರನಾಡು ಸಾಂಸ್ಕೃತಿಕ ಸಂಘಟಕ ಆರ್.ಕೆ. ಶೆಟ್ಟಿ ಅವರಿಗೆ 2024ನೇ ಸಾಲಿನ 'ಸಂಸ್ಕೃತಿ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲೇಖಕ ಹಂಪ ನಾಗರಾಜಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಆನಂದ ಮಾದಲಗೆರೆ, ಕರ್ನಾಟಕ ಜಾನಪದ ಪರಿಷತ್ತು ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ. ತಿಮ್ಮೇಶ್, ಕಾಡುಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ಭಾಗವಹಿಸಿದ್ದರು.

ಮಯೂರ, ಸುಧಾ ಓದಿರಿ

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: 26/SBC/24
ದಿನಾಂಕ: 30.10.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಬೈಯಪ್ಪನಹಳ್ಳಿ – ಧರ್ಮಾವರಂ ವಿಭಾಗ: ಸತ್ಯ ಸಾಯಿ ಪ್ರಶಾಂತಿ ನಿಲಯಂ (ಎಸ್‌ಎಸ್‌ಪಿಎನ್) – ಕೊತ್ತಚೆರುವು (ಕೆಟಿಸಿಆರ್) ನಿಲ್ದಾಣಗಳ ನಡುವೆ ಕಿಮೀ. 22/600 – 700 ರಲ್ಲಿ ಆರ್‌ಯುಬಿ / ಬ್ರಿಡ್ಜ್ ಸಂ. ಪಿಡಿ-66ಎ ಯಲ್ಲಿ ಹೆಚ್ಚುವರಿ ಅಪ್ರೋಚ್ ರಸ್ತೆಯ ವ್ಯವಸ್ಥೆಗಾಗಿ ಪ್ರಸ್ತಾವನೆ ಮತ್ತು ಸತ್ಯ ಸಾಯಿ ಪ್ರಶಾಂತಿ ನಿಲಯಂ (ಎಸ್‌ಎಸ್‌ಪಿಎನ್) – ಬಸಂಪಲ್ಲಿ (ಬಿಎಸ್‌ಪಿಎಲ್) ನಿಲ್ದಾಣಗಳ ನಡುವೆ ಕಿಮೀ. 22/600–700 ರಲ್ಲಿ ಆರ್‌ಯುಬಿ ಸಂ. ಪಿಡಿ-66 ರಲ್ಲಿ ವಾಟರ್ ಲಾಗಿಂಗ್‌ನ ಉಳಿದಿರುವ ಆರ್‌ಸಿಸಿ ಪೈಪ್ ಡ್ರೈನ್‌ನ ಕಾಮಗಾರಿಗಳ ಪೂರ್ಣಗೊಳಿಸುವಿಕೆ. ನಿರ್ವಹಣೆಯ ಅವಧಿ: 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರ ಬರುವುದೋ ಅದು.	ರೂ. 2,92,83,090
2	ವರಿಷ್ಠ ವಿಭಾಗೀಯ ಇಂಜಿನಿಯರ್ / ಉತ್ತರ ವಿಭಾಗ: ಉಪ ಕಾಮಗಾರಿ-1: ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ ಉಪ-ವಿಭಾಗದಲ್ಲಿ ಯಲಹಂಕ (ವೈಎನ್‌ಕೆ) – ಬಂಗಾರಪೇಟೆ (ಬಿಡಬ್ಲ್ಯೂಟಿ) ವಿಭಾಗದ ನಡುವೆ (ಬ್ರಿಡ್ಜ್ ಸಂ.) ಆರ್‌ಯುಬಿ ಗಳಾದ ನಂ. 244–ಎ, 187–ಎ, 196–ಎ, 182–ಎ, 156, 153, 152–ಬಿ, 152–ಎ, 139–ಎ, 138ಎ, 136–ಎ, 130–ಎ, 122–ಎ, 116–ಎ ಗಳಿಗೆ ಹಾಗೂ ಬೆಂಗಳೂರು (ಎಸ್‌ಬಿಸಿ) – ತುಮಕೂರು (ಟಿಕೆ) ವಿಭಾಗದಲ್ಲಿ 372–ಎ ರಲ್ಲಿ ನಾನ್-ಸ್ಟಾಂಡರ್ಡ್ ಹೈಟ್ ಗೇಜ್‌ಗಳನ್ನು ಯೋಗ್ಯ ರೀತಿಯಲ್ಲಿ ಬದಲಾವಣೆ ಮಾಡಿ ಆರ್‌ಡಿಎಸ್‌ಓ ಮಾದರಿಯ ಹೈಟ್ ಗೇಜ್‌ಗಳ ಪೂರೈಕೆ. – ಒಟ್ಟು 15 ಸೆಟ್‌ಗಳು – 30 ನಂ. ಉಪ ಕಾಮಗಾರಿ-2: ಸಹಾಯಕ ವಿಭಾಗೀಯ ಇಂಜಿನಿಯರ್ / ಹಿಂದೂಪುರ ಉಪ-ವಿಭಾಗದಲ್ಲಿ ಬೈಯಪ್ಪನಹಳ್ಳಿ (ಬಿವೈಪಿಎಲ್) – ಧರ್ಮಾವರಂ (ಡಿಎಂಎಂ) ವಿಭಾಗದ ನಡುವೆ (ಬ್ರಿಡ್ಜ್ ಸಂ.) ಆರ್‌ಯುಬಿ ಗಳಾದ ನಂ. 281–ಎ, 248–ಎ, 150–ಎ, 149–ಎ, 144–ಎ, 125–ಎ ಗಳಿಗೆ ಹಾಗೂ ಪೆಣುಕೊಂಡ (ಪಿಕೆಡಿ) – ಸತ್ಯ ಸಾಯಿ ಪ್ರಶಾಂತಿ ನಿಲಯಂ (ಎಸ್‌ಎಸ್‌ಪಿಎನ್) – ಧರ್ಮಾವರಂ ಜಂ. (ಡಿಎಂಎಂ) ವಿಭಾಗದ ನಡುವೆ ಪಿಡಿ-95ಎ, ಪಿಡಿ-97ಎ, ಪಿಡಿ-118ಎ & ಪಿಡಿ-133ಎ ರಲ್ಲಿ ನಾನ್-ಸ್ಟಾಂಡರ್ಡ್ ಹೈಟ್ ಗೇಜ್‌ಗಳನ್ನು ಯೋಗ್ಯ ರೀತಿಯಲ್ಲಿ ಬದಲಾವಣೆ ಮಾಡಿ ಆರ್‌ಡಿಎಸ್‌ಓ ಮಾದರಿಯ ಹೈಟ್ ಗೇಜ್‌ಗಳ ಪೂರೈಕೆ. – ಒಟ್ಟು 10 ಸೆಟ್‌ಗಳು – 20 ನಂ., ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 4,12,08,991

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.11.2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ ಬೆಂಗಳೂರು
PUB/559/AAMO/PRB/SWR/2024-25
South Western Railway - SWR | SWRRLY | SWRRLY

ಗೃಹಲಕ್ಷ್ಮಿ ಹಣದಿಂದ ಪತಿಗೆ ಸ್ಕೂಟರ್ ಕೊಡಿಸಿದ ಮಹಿಳೆ

ಪುತ್ತೂರು: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಕೂಡಿಟ್ಟ ಮಹಿಳೆಯೊಬ್ಬರು ಆ ಹಣದಿಂದ ಪತಿಗೆ ಸ್ಕೂಟರ್ ಕೊಡಿಸಿದ್ದಾರೆ.

ಕೋಡಿಂಬಾಡಿ ಬಳಿಯ ಶಾಂತಿನಗರ ನಿವಾಸಿ ಮಿಸ್ರಿಯಾ ಎಂಬುವರು ತಮ್ಮ ಖಾತೆಗೆ ಜಮೆಯಾಗಿರುವ ಗೃಹಲಕ್ಷ್ಮಿ ಹಣದಿಂದ ಪೇಂಟಿಂಗ್ ಕೆಲಸ ಮಾಡುವ ಪತಿ ಸಲೀಂ ಅವರಿಗೆ ಸ್ಕೂಟರ್ ಖರೀದಿ ಮಾಡಿದ್ದಾರೆ. ಸಲೀಂ ಅವರು ದೂರದ ಊರುಗಳಿಗೆ ಪೇಂಟಿಂಗ್ ಕೆಲಸಕ್ಕೆ ಹೋಗುತ್ತಿರುತ್ತಾರೆ.

ಸಲೀಂ ಅವರು ಪತ್ನಿ ನೀಡಿದ ಸ್ಕೂಟರ್‌ನಲ್ಲೇ ಬಂದು ಶಾಸಕ ಅಶೋಕ್ ಕುಮಾರ್ ರೈ ಅವರನ್ನು ಭೇಟಿಯಾಗಿ, 'ಗೃಹಲಕ್ಷ್ಮಿ ಹಣದಿಂದ ನನ್ನ ಬಾಳು ಬೆಳಗಿದೆ' ಎಂದು ಸರ್ಕಾರ ಹಾಗೂ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು. ಶಾಸಕ ಅಶೋಕ್ ಕುಮಾರ್ ರೈ ಅವರು ಸಲೀಂ ಅವರನ್ನು ಸನ್ಮಾನಿಸಿದರು. ಸಲೀಂ ಅವರು ಸ್ಕೂಟರ್ ಮೇಲೆ 'ಆರ್ಥಿಕ ನೆರವು ಗೃಹಲಕ್ಷ್ಮಿ' ಎಂಬ ಫಲಕ ಹಾಕಿದ್ದು, ಅದರಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕ ಅಶೋಕ್ ರೈ ಅವರ ಚಿತ್ರ ಹಾಕಿದ್ದಾರೆ.

ನಿಧನವಾರ್ತೆ

ಪ್ರೇಮನಾಥ್ ಕಾಂಗೋವಿ



ಬೆಂಗಳೂರು: ಉದ್ಯಮಿ ಪ್ರೇಮನಾಥ ಕಾಂಗೋವಿ(72) ಅವರು ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ಬೆಳಿಗ್ಗೆ ನಿಧನರಾದರು. ಪಿ.ಆರ್. ಇಂಡಸ್ಟ್ರೀಸ್ ಸ್ಥಾಪಕರಾದ ಅವರು ಅಗರಬತ್ತಿ ಉದ್ಯಮದಲ್ಲಿ ನಿರತರಾಗಿದ್ದರು. ಮೃತರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಮೇಶ್



ಹೆಸರಘಟ್ಟ: ಹೋಬಳಿಯ ಗೋಪಾಲಪುರ ಗ್ರಾಮದ ರಮೇಶ್ (57) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ನಗರದಲ್ಲಿ ಇಂದು

'ಲಂಕೇಶ್ ಬಹುತ್ವಗಳ ಶೋಧ-ಅಧ್ಯಯನ ಶಿಬಿರ'ದ ಉದ್ಘಾಟನೆ: ಸಿ.ಎಚ್. ಹನುಮಂತರಾಯ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಚನ್ನಪ್ಪ ಕಟ್ಟಿ, ಧರಣೇದೇವಿ ಮಾಲಗತ್ತಿ, ಡೊಮಿನಿಕ್, ಪ್ರಾಸ್ತಾವಿಕ ನುಡಿ: ಎಚ್.ಆರ್. ಸುಜಾತಾ, ಉಪಸ್ಥಿತಿ: ಎಂ.ಎಸ್. ಆಶಾದೇವಿ, ಕರಿಯಪ್ಪ ಎನ್., ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 10.30ರಿಂದ

ವೀರವನಿತೆ ಒನಕೆ ಓಬವ್ವ ಜಯಂತಿಯ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ವಿಮಾ ಲೋಕಪಾಲ್ ದಿನ': ಅತಿಥಿ: ರಾಕೇಶ್ ಜೋಶಿ, ಆಯೋಜನೆ: ವಿಮಾ ಒಂಬುಡ್ಸ್‌ಮನ್, ಸ್ಥಳ: ಹೋಟೆಲ್ ಸ್ಯಾಂಕ್ಟಮ್, ಆನಂದರಾವ್ ವೃತ್ತ, ಬೆಳಿಗ್ಗೆ 11.30

'ಕಂಸ ದಿಗ್ವಿಜಯ ಕನಸ ಕಂಡ ಕಂಸ ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಆಯೋಜನೆ: ಬ್ರಾಹ್ಮೀ ದುರ್ಗಾಪರಮೇಶ್ವರಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಶ್ರೀಕ್ಷೇತ್ರ ಕಮಲಶಿಲೆ, ಸ್ಥಳ: ರಾಗ ಔತಣ ಸಭಾಂಗಣ, ಹೋಟೆಲ್ ಉಡುಪಿ ಗಾರ್ಡನ್, ಸಂಜಯನಗರ, ಮಧ್ಯಾಹ್ನ 3ರಿಂದ

ಸರ್ ಸಿ.ವಿ. ರಾಮನ್ ಅವರ ಜನ್ಮ ದಿನಾಚರಣೆ, ವಿಜ್ಞಾನ ಚಿಂತನೆ: ಉದ್ಘಾಟನೆ: ಎ. ಮಧುಸೂದನ್ ಬಾಬು, ಅಧ್ಯಕ್ಷತೆ: ನಾ. ಶ್ರೀಧರ್, ಉಪನ್ಯಾಸ: ಆರ್.ಎಸ್. ರವೀಂದ್ರ, ಪ್ರಾಸ್ತಾವಿಕ ನುಡಿ: ಎಂ. ಶಿವಕುಮಾರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಪೆರುಮಾಳ್ ವಿದ್ಯಾನಿಕೇತನ, ಲಿಟ್ಲ್ ಫ್ಲವರ್ ಪ್ರೌಢ ಶಾಲೆ, ಸುಭಾಷ್‌ನಗರ, ಶ್ರೀರಾಂಪುರ, ಸಂಜೆ 4

ಕನ್ನಡ ರಾಜ್ಯೋತ್ಸವ, ನಾಟಕೋತ್ಸವ: '36 ಅಲ್ಲ 63' ನಾಟಕ ಪ್ರದರ್ಶನ: ರಚನೆ: ಎನ್.ಎನ್. ರಾವ್, ನಿರ್ದೇಶನ: ಗಣಪತಿಗೌಡ, ಆಯೋಜನೆ: ಯಶವಂತಪುರ ವಿಧಾನಸಭೆ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂದಿರಾ ಕ್ಯಾಂಟೀನ್ ಎದುರು, ಕೆಂಗೇರಿ ಉಪನಗರ, ಸಂಜೆ 4

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬಿಐಸಿ ಸಹಯೋಗದಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಉತ್ಸವ ಸಂಪನ್ನ

ಕನ್ನಡೇತರರಿಗೂ ನಾಡಿನ ವೈವಿಧ್ಯತೆ ಪರಿಚಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕರ್ನಾಟಕ, ಕರಾವಳಿ ಒಳಗೊಂಡಂತೆ ನಾಡಿನ ವಿವಿಧ ಭಾಗಗಳ ಆಹಾರ ವೈವಿಧ್ಯತೆ, ಗೋಲಗುಮ್ಮಟ, ಸಾವಿರ ಕಂಬದ ಬಸದಿ, ಪಟ್ಟದಕಲ್ಲು ಸೇರಿ ಕರ್ನಾಟಕದ ಸ್ಮಾರಕಗಳು, ಕುವೆಂಪು, ರಾಜ್‌ಕುಮಾರ್ ಒಳಗೊಂಡು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು, ಕರಕುಶಲ ವಸ್ತುಗಳು ಸೇರಿ ನಾಡಿನ ಸಮಗ್ರ ಚಿತ್ರಣವನ್ನು ಕನ್ನಡೇತರರಿಗೂ ಕಟ್ಟಿಕೊಡುವಲ್ಲಿ 'ಕೃಷ್ಣೆಯಿಂದ ಕಾವೇರಿಯವರೆಗೆ' ಶೀರ್ಷಿಕೆಯಡಿ ನಡೆದ ಉತ್ಸವ ಯಶಸ್ವಿಯಾಯಿತು.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರ-ರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹಮ್ಮಿಕೊಂಡಿದ್ದ ಈ ಉತ್ಸವವು ಭಾನುವಾರ ಸಂಪನ್ನವಾಯಿತು. ಬಿಐಸಿ ಸಹಯೋಗದಲ್ಲಿ ನಡೆದ ಈ ಉತ್ಸವದ ಎರಡನೇ ದಿನವೂ ಕರ್ನಾಟಕದ ವೈವಿಧ್ಯತೆಗಳನ್ನು ಪರಿಚಯಿಸುವ ವಿವಿಧ ಕಾರ್ಯಕ್ರಮಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದವು. ಕನ್ನಡಿಗರ ಜತೆಗೆ ಕನ್ನಡೇತರರೂ ಸಂಭ್ರಮಿಸಿ, ನಾಡಿನ ಕಲೆ ಹಾಗೂ ವೈವಿಧ್ಯಮಯ ಸಂಸ್ಕೃತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗಾನ ಸೌರಭ ತಂಡ ಪ್ರಸ್ತುತ ಪಡಿಸಿದ 'ಅಭಿಮನ್ಯು ಕಾಳಗ' ಯಕ್ಷಗಾನವು ಉತ್ಸವದ ಮೆರಗು ಹೆಚ್ಚಿಸಿತು. ಮಹಾಭಾರತ ಕಥೆ ಆಧರಿಸಿದ ಈ ಪ್ರಸಂಗವು ನೆರೆದಿದ್ದವರನ್ನು ರಂಜಿಸಿತು. ಇದಕ್ಕೂ ಮೊದಲು ವಿದ್ವಾಂಸ ಪ್ರೊ.ಕೆ.ಇ.ರಾಧಾಕೃಷ್ಣ ಅವರು ಯಕ್ಷಗಾನ ಕಲೆಯ ವಿಶಿಷ್ಟತೆ ಪರಿಚಯಿಸಿದರು.

'ಬೆಳೆಯೋಣ ಬೆರೆಯೋಣ' ಶೀರ್ಷಿಕೆಯಡಿ ನಡೆದ ಕಾರ್ಯಕ್ರಮದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಗೌರವ ಪ್ರಾಧ್ಯಾಪಕಿ ಮಾಳವಿಕಾ ಕಪೂರ್ ಅವರು 'ಹದಿಹರೆಯದವರ ಸಬಲೀಕರಣ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. 'ಹದಿಹರೆಯದ ವಯಸ್ಸಿನಲ್ಲಿ, ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಪ್ರಬುದ್ಧತೆಯ ಕೊರತೆಯಿಂದ ಕೆಲವೊಮ್ಮೆ ಈ ಗುಂಪಿನವರು ತಪ್ಪು ನಿರ್ಧಾರಗಳನ್ನು ಕೈಗೊಳ್ಳುವ ಸಾಧ್ಯತೆ ಇರುತ್ತದೆ. ಶೈಕ್ಷಣಿಕ ಹಾಗೂ ವೈಯಕ್ತಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಮಯೋಚಿತ ಮಾರ್ಗದರ್ಶನಗಳನ್ನು ಅವರಿಗೆ ನೀಡಬೇಕು' ಎಂದು ಹೇಳಿದರು.

ಅಡುಗೆಗಳ ಪರಿಚಯ: 'ಕರ್ನಾಟಕದ ಅಡುಗೆಗಳು' ಗೋಷ್ಠಿಯಲ್ಲಿ ಲೇಖಕಿ ಗೀತಾ ರಾವ್ ಅವರು ಇಲ್ಲಿನ ವಿಶಿಷ್ಟ ತಿನಿಸುಗಳು ಹಾಗೂ ಆಹಾರ ಪದ್ಧತಿಗಳನ್ನು ಪರಿಚಯಿಸಿದರು. ದೋಸೆ, ಇಡ್ಲಿ, ವಡೆ, ರೊಟ್ಟಿ, ರಾಗಿ ಮುದ್ದೆ ಸೇರಿ ವಿವಿಧ ತಿನಿಸುಗಳ ಬಗ್ಗೆ ವಿವರಿಸಿದರು. ಉತ್ತರ ಕರ್ನಾಟಕ, ಕರಾವಳಿ ಸೇರಿ ವಿವಿಧ ಭಾಗಗಳಲ್ಲಿನ ವಿಶಿಷ್ಟ ಆಹಾರ ಪದಾರ್ಥಗಳ ಬಗ್ಗೆಯೂ ತಿಳಿಸಿದರು.

'ಕನ್ನಡ ಪ್ರಜ್ಞೆಯ ವಿಕಾಸ ಮತ್ತು ಜ್ಞಾನಪೀಠ ಪುರಸ್ಕೃತರು' ಗೋಷ್ಠಿಯಲ್ಲಿ ಸಾಹಿತ್ಯ ಕ್ಷೇತ್ರದ ಪ್ರಮುಖರಾದ ಬಸವರಾಜ ಕಲ್ಗುಡಿ, ಎಚ್.ಎಲ್. ಪುಷ್ಪಾ, ಕೆ.ಸತ್ಯನಾರಾಯಣ, ಎಂ.ಎಸ್. ಆಶಾದೇವಿ ಹಾಗೂ ದೇವು ಪತ್ತಾರ್ ಅವರು ವಿಷಯ ಮಂಡಿಸಿದರು. ರಾಜ್ಯ ರೂಪುಗೊಳ್ಳುವಲ್ಲಿ ಈ ನೆಲದ ದಾರ್ಶನಿಕರು, ಸಾಹಿತಿಗಳು, ವಿಜ್ಞಾನಿಗಳು, ಕುಶಲಕರ್ಮಿಗಳು ಆಡಳಿತಗಾರರು ನೀಡಿದ ಕೊಡುಗೆಗಳನ್ನು ಸ್ಮರಿಸಿಕೊಂಡರು. ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು ಕರ್ನಾಟಕವನ್ನು ಪರಿಕಲ್ಪಿಸಿಕೊಂಡ ಬಗೆಯನ್ನು ವಿವರಿಸಿದರು.





ಉತ್ಸವದಲ್ಲಿ ಗಾನ ಸೌರಭ ತಂಡದ ಕಲಾವಿದರು 'ಅಭಿಮನ್ಯು ಕಾಳಗ' ಯಕ್ಷಗಾನ ಪ್ರಸ್ತುತಪಡಿಸಿದರು (ಎಡಚಿತ್ರ) ಕರಕುಶಲ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು

ಪ್ರಜಾವಾಣಿ ಚಿತ್ರಗಳು

ಅಜೀಂ ಪ್ರೇಮ್‌ಜಿ ವಿ.ವಿ ಹೊರತಂದ ಆರು ಪುಸ್ತಕಗಳ ಬಿಡುಗಡೆ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ವಿವಿಧ ಪ್ರಕಾಶನ ಸಂಸ್ಥೆಗಳ ಸಹಯೋಗದಲ್ಲಿ ಹೊರತಂದಿರುವ ಆರು ಪುಸ್ತಕಗಳನ್ನು ಉತ್ಸವದಲ್ಲಿ ಬಿಡುಗಡೆ ಮಾಡಲಾಯಿತು. ಭಾಷೆ ಮತ್ತು ಭಾಷಾ ಬೋಧನೆಗೆ ಸಂಬಂಧಿಸಿದ 'ನುಡಿ ಕಲಿಸುವ ನೂರು ದಾರಿ' ಸಂಪುಟ 3 ಮತ್ತು 4, ಮಕ್ಕಳ ಕಲಿಕೆ ಕುರಿತ ಕಮಲ ವಿ. ಮುಕುಂದ ಅವರ 'ಇವತ್ತು ಶಾಲೆಯಲ್ಲಿ ನೀನೇನು ಪ್ರಶ್ನೆ ಕೇಳಿದೆ?', ಮನೋವಿಜ್ಞಾನದ ಇತಿಹಾಸ ಮತ್ತು ಬೆಳವಣಿಗೆ ಕುರಿತ ಇಂದಿರಾ ಜೈಪ್ರಕಾಶ್ ಅವರ 'ಮನೋವಿಜ್ಞಾನ-ಬೇರುಗಳು, ಶಾಖೆಗಳು', ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ರಚನೆ ಮತ್ತು ಬೋಧನೆಯನ್ನು ಕೇಂದ್ರೀಕರಿಸಿ ಅಲೆಕ್ಸ್ ಎಂ.ಜಾರ್ಜ್ ಮತ್ತು ಅಮನ್ ಮದಾನ್ ಅವರು ರಚಿಸಿರುವ 'ಶಾಲೆಗಳಲ್ಲಿ ಸಮಾಜ ವಿಜ್ಞಾನದ ಬೋಧನೆ' ಪುಸ್ತಕಗಳು ಬಿಡುಗಡೆಯಾದವು. ಸಾಹಿತಿಗಳಾದ ಓ.ಎಲ್.ನಾಗಭೂಷಣಸ್ವಾಮಿ, ಮಾಧವ ಪೆರಾಜೆ, ಅರವಿಂದ ಚೊಕ್ಕಾಡಿ ಮತ್ತು ಅಶೋಕ್ ಎಚ್.ಎಸ್. ಈ ಪುಸ್ತಕಗಳ ಬಗ್ಗೆ ಮಾತನಾಡಿದರು.

ರಂಜಿಸಿದ ಕಾರ್ಯಕ್ರಮಗಳು

'ಗಾನ ಮಾಧುರ್ಯದ ಮೂಲ' ಶೀರ್ಷಿಕೆಯಡಿ ನಡೆದ ಗೋಷ್ಠಿಯು ಕರ್ನಾಟಕ ಸಂಗೀತದ ವೈವಿಧ್ಯತೆಯನ್ನು ಪರಿಚಯಿಸಿತು. ಚಿತ್ರಾ ಶ್ರೀಕೃಷ್ಣ ಅವರು ಗಾಯನ ಮತ್ತು ಕಥನದ ಮೂಲಕ ಕರ್ನಾಟಕ ಸಂಗೀತವನ್ನು ಪ್ರಸ್ತುತಪಡಿಸಿದರು. ವಿಶ್ವಜಿತ್ ಮತ್ತೂರು (ವಯೊಲಿನ್) ಮತ್ತು ಫಣೀಂದ್ರ ಭಾಸ್ಕರ (ಮೃದಂಗ) ಸಾಥ್ ನೀಡಿದರು. 'ಸ್ಟಾಂಡ್ ಅಪ್ ಕಾಮಿಡಿಯನ್' ಸೋನು ವೇಣುಗೋಪಾಲ್ ಅವರು ಹಾಸ್ಯ ಭರಿತ ಮಾತುಗಳಿಂದ ರಂಜಿಸಿದರು. 'ಕಾಯಕ' ಶೀರ್ಷಿಕೆಯಡಿ ಎಂ.ಡಿ. ಪಲ್ಲವಿ ಮತ್ತು ಬ್ರೂಸ್ ಲೀ ಮಣಿ ನೇತೃತ್ವದ ತಂಡವು ಸಂಗೀತ ಕಾರ್ಯಕ್ರಮ ನೀಡಿತು.

ಚಿತ್ರಾವಳಿ



ಆರ್‌.ಟಿ. ನಗರದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಶಿವರಾಮ ಕಾರಂತ ವೇದಿಕೆಯ ಸಂಸ್ಥಾಪಕ ಚಂದ್ರಶೇಖರ ಚಡಗ, ವೇದಿಕೆಯ ಅಧ್ಯಕ್ಷೆ ದೀಪಾ ಫಡ್ಕೆ, ಕಾರ್ಯದರ್ಶಿ ಮಂಜುಳಾ ಭಾರ್ಗವಿ, ಉಪಾಧ್ಯಕ್ಷ ವೀರಶೇಖರಸ್ವಾಮಿ, ಪುಟಾಣಿಗಳು ಹಾಜರಿದ್ದರು



ಉಲ್ಲಾಳ ವಾರ್ಡ್ ಹಿರಿಯ ನಾಗರಿಕರ ವೇದಿಕೆ ಹಾಗೂ ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಇಂಡಸ್ಟ್ರಿಯಲ್ ಟೌನ್ ಆಶ್ರಯದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವದಲ್ಲಿ 'ನಗೆ ಮನೆ ಕೂಟ' ಹಾಗೂ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಮಾದಯ್ಯ, ಪ್ರಧಾನ ಕಾರ್ಯದರ್ಶಿ ನಲ್ಲಹಳ್ಳಿ ಪುಟ್ಟಸ್ವಾಮಿ, ಶಿವಲಿಂಗೇಗೌಡ, ಗಂಗಾಧರ್ ಭಾಗವಹಿಸಿದ್ದರು

'ಎಚ್‌ಡಿಕೆಯಿಂದ ₹1000 ಕೋಟಿ ಸಂಗ್ರಹ'

ಮೋದಿ ಹೆಸರಿನಲ್ಲಿ ಉಕ್ಕು ಕಂಪನಿಗಳಿಂದ ವಸೂಲಿ– ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭೆ ಚುನಾವಣೆ ಹಾಗೂ ಕರ್ನಾಟಕದ ಉಪಚುನಾವಣೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಹೆಸರಿನಲ್ಲಿ ಉಕ್ಕು ಕಂಪನಿಗಳಿಂದ ₹1 ಸಾವಿರ ಕೋಟಿಯನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಂಗ್ರಹಿಸಿದ್ದಾರೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಆರೋಪಿಸಿದ್ದಾರೆ.

'ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭೆ ಚುನಾವಣೆಗಳನ್ನು ಶತಾಯಗತಾಯ ಗೆಲ್ಲಲೇಬೇಕು ಎಂದು ಬಿಜೆಪಿ ಮಿತ್ರ ಪಕ್ಷಗಳು ವಾಮಮಾರ್ಗ ಹಿಡಿದಿವೆ. ಅಲ್ಲಿ ಹಣದ ಹೊಳೆಯನ್ನೇ ಹರಿಸಲು ಎಲ್ಲ ತಯಾರಿ ನಡೆಸಿಕೊಂಡಿದೆ. ಮಾತ್ರವಲ್ಲ, ಕರ್ನಾಟಕದ ಉಪಚುನಾವಣೆಯಲ್ಲಿ ಮುಖ್ಯವಾಗಿ ಚನ್ನಪಟ್ಟಣದಲ್ಲಿ ಸೋಲಿನ ಭೀತಿ ಹೊಂದಿರುವ ಬಿಜೆಪಿ ಇಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಹಣ ಸುರಿಯಲು ಮುಂದಾಗಿದೆ. ಚುನಾವಣೆಗಳ ಜವಾಬ್ದಾರಿ ಹೊತ್ತಿರುವ ಕುಮಾರಸ್ವಾಮಿ ಅವರು ಭಾರತದ ವಿವಿಧೆಡೆ ಮತ್ತು ರಾಜ್ಯದ ಉಕ್ಕು ಕಂಪನಿಗಳಿಂದ ಹಣ ಸಂಗ್ರಹಿಸಿದ್ದಾರೆ' ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ದೂರಿದ್ದಾರೆ.

'ಉಕ್ಕಿನ ಕೈಗಾರಿಕೆಗಳಿಂದ ಹಣ ಸಂಗ್ರಹಿಸಿರುವ ಬಗ್ಗೆ ನಮಗೆ ಆಂತರಿಕ ಮಾಹಿತಿ ಬಂದಿದೆ. ಮಾತ್ರವಲ್ಲ ಉಕ್ಕಿನ ಕೈಗಾರಿಕೋದ್ಯಮಿಗಳೂ ಈ ಕುರಿತು ಮಾಹಿತಿ ನೀಡಿದ್ದಾರೆ. ಇದು ರಾಷ್ಟ್ರದ ಬಹು ದೊಡ್ಡ ಹಗರಣವಾಗಿದ್ದು, ಇ.ಡಿ., ಮುಂತಾದ ತನಿಖಾ ಸಂಸ್ಥೆಗಳು ಇಂಥ ವಿಷಯವನ್ನು ತನಿಖೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

'ಮಹಾರಾಷ್ಟ್ರದಲ್ಲಿ, ಕರ್ನಾಟಕದಲ್ಲಿ, ಗೋವಾದಲ್ಲಿ ಆಪರೇಷನ್ ಮಾಡಿ ಎಕ್ಸ್‌ಪರ್ಟ್ ಆಗಿರುವ ಬಿಜೆಪಿ ಚುನಾವಣೆಯ ಪಾವಿತ್ರ್ಯತೆಯನ್ನು ಕೆಡಿಸಲು ಹೊರಟಿದೆ. ಹಣದ ಹೊಳೆ ಹರಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ನೆಲೆಗಟ್ಟನ್ನೇ ಅಲುಗಾಡಿಸಲು ಹೊರಟಿದೆ' ಎಂದು ಆರೋಪಿಸಿರುವ ಅವರು, 'ಚುನಾವಣಾ ಆಯೋಗ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದೂ ಮನವಿ ಮಾಡಿದ್ದಾರೆ.

'ತಮಗೆ ದೇಣಿಗೆ ನೀಡದ ಕಂಪನಿಗಳ ವಿರುದ್ಧ ಇ.ಡಿ., ಐ.ಟಿ ಮುಂತಾದ ತನಿಖಾ ಸಂಸ್ಥೆಗಳಿಂದ ದಾಳಿ ಮಾಡಿಸುವ ತಂತ್ರವನ್ನು ಬಿಜೆಪಿ ಹಿಂದಿನಿಂದಲೂ ನಡೆಸಿಕೊಂಡು ಬಂದಿದೆ. ಈ ಹಿಂದೆ ಬಿಜೆಪಿ ವಿವಿಧ ಕಂಪನಿಗಳಿಂದ ಚುನಾವಣಾ ಬಾಂಡ್ ಹೆಸರಲ್ಲಿ ₹1,751 ಕೋಟಿ ಪಡೆದುಕೊಂಡಿತ್ತು. ಕುಮಾರಸ್ವಾಮಿ ಅವರ ವಿರುದ್ಧ ಅಕ್ರಮ ಗಣಿಗಾರಿಕೆ ಕಿಕ್ ಬ್ಯಾಕ್ ಆರೋಪವೂ ಕೇಳಿ ಬಂದಿತ್ತು. ಅವುಗಳನ್ನೆಲ್ಲ ವ್ಯವಸ್ಥಿತವಾಗಿ ಮುಚ್ಚಿ ಹಾಕಿರುವ ಬಿಜೆಪಿ, ಈಗ ಕಂಪನಿಗಳಿಂದ ಮತ್ತೆ ದೊಡ್ಡ ಪ್ರಮಾಣದಲ್ಲಿ ಹಣ ವಸೂಲಿ ಮಾಡಿ ಅವುಗಳನ್ನು ಮುಚ್ಚಿ ಹಾಕಲು ತಂತ್ರ ರೂಪಿಸಿದೆ. ಆದರೆ, ಈ ಬಾರಿ ಅವರ ತಂತ್ರ ಫಲಿಸದು' ಎಂದು ಅವರು ಹೇಳಿದ್ದಾರೆ.

'ಹೆಣದ ಮೇಲೆ ಹಣ ಮಾಡಿದ ಬಿಜೆಪಿ'

ಪ್ರಜಾವಾಣಿ ವಾರ್ತೆ



ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಕೋವಿಡ್ ಸಮಯದಲ್ಲಿ ಬಿಜೆಪಿಯವರು ಹೆಣದ ಮೇಲೆ ಹಣ ಮಾಡಿದ್ದರು. ಕೋವಿಡ್‌ನಿಂದ ಆಗಿರುವುದು ಸಾವುಗಳಲ್ಲ, ಬಿಜೆಪಿಯಿಂದ ಹತ್ಯೆ. ಅಂದಿನ ಬಿಜೆಪಿ ಸರ್ಕಾರದ ನಿರ್ಲಕ್ಷ್ಯ ಮತ್ತು ದುರಾಸೆಯಿಂದ ಜನರು ಸತ್ತಿದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಕೋವಿಡ್ ನಿರ್ವಹಣೆಯಲ್ಲಿ ₹700 ಕೋಟಿಯ ಹಗರಣ ನಡೆದಿರುವುದಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ಅವರ ಮಧ್ಯಂತರ ವರದಿಯಲ್ಲಿದೆ' ಎಂದರು.

'15 ದಿನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಮುಂದಿನ 15 ದಿನಗಳಲ್ಲಿ ಕೋವಿಡ್ ಹಗರಣ ಯಾವ ಸ್ವರೂಪ ಪಡೆಯಲಿದೆ ಎಂಬುದನ್ನು ಅವರು ಕಾದು ನೋಡಲಿ' ಎಂದು ಪ್ರಿಯಾಂಕ್ ಹೇಳಿದರು.

'ಇಂತಹ ಅಕ್ಷಮ್ಯ ಅಪರಾಧಗಳನ್ನು ಮಾಡಿರುವ ಬಿ.ಎಸ್. ಯಡಿಯೂರಪ್ಪ ಮತ್ತು ಮಾಜಿ ಸಚಿವ ಬಿ. ಶ್ರೀರಾಮುಲು ಅವರನ್ನು ಬಿಜೆಪಿಯಿಂದ ಉಚ್ಚಾಟಿಸಲಿ. ನೈತಿಕ ಹೊಣೆ ಹೊತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಗೆ ವಿಜಯೇಂದ್ರ ರಾಜೀನಾಮೆ ನೀಡಲಿ' ಎಂದು ಅವರು ಹೇಳಿದರು.

ರಾಜ್ಯ ಒಕ್ಕಲಿಗರ ಸಂಘ

ಕೃಷ್ಣರಾಜೇಂದ್ರ ರಸ್ತೆ, ವಿ.ವಿ.ಪುರಂ, ಬೆಂಗಳೂರು–560004

email: vokkaligarasangha-1906@hotmail.com

ಸಂಖ್ಯೆ : ರಾಒಸ:ಆಡಳಿತ/1279/2024–25 ದಿನಾಂಕ: 09–11–2024

ರಾಜ್ಯ ಒಕ್ಕಲಿಗರ ಸಂಘದ ಸರ್ವ ಸದಸ್ಯರ ಗಮನಕ್ಕೆ

ರಾಜ್ಯ ಒಕ್ಕಲಿಗರ ಸಂಘದ ಸರ್ವ ಸದಸ್ಯರುಗಳಿಗೆ ಈ ಮೂಲಕ ತಿಳಿಸಿರುವುದೇನೆಂದರೆ ದಿನಾಂಕ: 06–11–2024ರ ಅರ್ಜಿ ಸಂಖ್ಯೆ MFA:7024/2024, 7025/2024 ರಲ್ಲಿ ಆದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯ ಒಕ್ಕಲಿಗರ ಸಂಘದ ಹಾಲಿ ಪದಾಧಿಕಾರಿಗಳ ವಿರುದ್ಧ ಮಂಡಿಸಲಾಗಿರುವ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚಿಸಲು ದಿನಾಂಕ : 24–11–2024ರಂದು ಭಾನುವಾರ ಮಧ್ಯಾಹ್ನ 2–15 ಗಂಟೆಗೆ, ನಾಡಪ್ರಭು ಕೆಂಪೇಗೌಡ ಭವನದ 2ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 12ರ ಸಭಾಂಗಣದಲ್ಲಿ ಕಾರ್ಯಕಾರಿ ಸಮಿತಿ ಸಭೆಯನ್ನು ಏರ್ಪಡಿಸಲಾಗಿದೆ. ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಸಭೆಯನ್ನು ವೀಕ್ಷಿಸಲು ಅನುಕೂಲವಾಗುವಂತೆ ಈ ಕೆಳಗಿನ ಸಾಮಾಜಿಕ ಮಾಧ್ಯಮ ಚಾನೆಲ್‌ಗಳ ಲಿಂಕ್ ಮೂಲಕ ಕಾರ್ಯಕಾರಿ ಸಮಿತಿ ಸಭೆಯ ನೇರ ಪ್ರಸಾರವನ್ನು ವೀಕ್ಷಿಸಬಹುದು.

ಸಾಮಾಜಿಕ ಮಾಧ್ಯಮಗಳ ಲಿಂಕ್

1. https://youtube.com/live/g__906RlkhQ?feature=share
2. https://www.facebook.com/events/529197006756122/

ಸಹಿ/–
ಸಿ.ದೇವರಾಜು (ಹಾಪ್‌ಕಾಮ್ಸ್)
ಪ್ರಧಾನ ಕಾರ್ಯದರ್ಶಿ





ಚನ್ನಪಟ್ಟಣ ಉಪ ಚುನಾವಣೆ: ನಿಖಿಲ್–ಯೋಗೇಶ್ವರ್ ಹಣಾಹಣಿ • ಗೌಡರು–ಡಿಕೆಶಿ ಕುಟುಂಬದ ಕಾಳಗ

ಗೊಂಬೆಗಳ ನಾಡಲ್ಲಿ ಸಮಬಲದ ಹೋರಾಟ

• ಓದೇಶ ಸಕಲೇಶಪುರ

2023ರ ಚುನಾವಣೆ ಫಲಿತಾಂಶ


ಎಚ್.ಡಿ.ಕುಮಾರಸ್ವಾಮಿ (ಜೆಡಿಎಸ್)
96,592

ಸಿ.ಪಿ.ಯೋಗೇಶ್ವರ್ (ಬಿಜೆಪಿ)
80,677

ಗಂಗಾಧರ್ (ಕಾಂಗ್ರೆಸ್)
15,374




ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಅಭ್ಯರ್ಥಿ



ಸಿ.ಪಿ. ಯೋಗೇಶ್ವರ್,
ಕಾಂಗ್ರೆಸ್ ಅಭ್ಯರ್ಥಿ

ಕ್ಷೇತ್ರ ಮಹಿಮೆ



ರಾಮನಗರ: 'ನಾಮಪತ್ರ ಸಲ್ಲಿಕೆಗೂ ಮುಂಚೆ ಒನ್ ಸೈಡ್ ಮ್ಯಾಚ್‌ನಂತೆ ಕಾಣುತಿತ್ತು. ಚಿತ್ರಣ ಈಗ ಸಂಪೂರ್ಣ ಬದಲಾಗಿದೆ. ಇಬ್ಬರ ನಡುವೆ ತೀವ್ರ ಪೈಪೋಟಿ ಇದೆ...'

– ಇದು ಉಪ ಚುನಾವಣೆ ಎದುರಿಸುತ್ತಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಮತದಾರರ ಅಭಿಪ್ರಾಯದ ಸಾರಾಂಶ.

ತುರುಸಿನ ಪೈಪೋಟಿಗೆ ಸಾಕ್ಷಿಯಾಗುತ್ತಲೇ ಬಂದಿರುವ ಬೊಂಬೆನಾಡಿನ ರಾಜಕೀಯ ಜಿದ್ದಾಜಿದ್ದಿ ಈ ಚುನಾವಣೆಯಲ್ಲೂ ಯಥಾರೀತಿ ಮುಂದುವರಿದಿದೆ.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾಗಿರುವ ಕ್ಷೇತ್ರದಲ್ಲಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಕಣಕ್ಕಿಳಿದಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದ ಸಿ.ಪಿ. ಯೋಗೇಶ್ವರ್ ಕಡೆ ಗಳಿಗೆಯಲ್ಲಿ ನಡೆದ ಅಚ್ಚರಿಯ ಬೆಳವಣಿಗೆಗಳಿಂದಾಗಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ.

ಸತತ ಎರಡು ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡಿರುವ ಇಬ್ಬರಿಗೂ ಇದು ಗೆಲ್ಲಲೇ ಬೇಕಾದ ಅನಿವಾರ್ಯ ಇರುವ ಚುನಾವಣೆ. ಮೂರನೇ ಸಲ ಗೆಲುವು ಕೈ ಹಿಡಿಯಬಹುದು ಎಂಬ ನಿರೀಕ್ಷೆಯಲ್ಲಿರುವ ಇಬ್ಬರೂ ಅಭ್ಯರ್ಥಿಗಳು ರಾಜಕೀಯ ಅಸ್ತಿತ್ವದ ಅಗ್ನಿಪರೀಕ್ಷೆ ಎದುರಿಸುತ್ತಿದ್ದಾರೆ.



ಅಳಿವು– ಉಳಿವಿನ ಪ್ರಶ್ನೆ: 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ ಕ್ಷೇತ್ರ ಗೆದ್ದಿದ್ದ ಜೆಡಿಎಸ್‌ಗೆ ಉಪ ಚುನಾವಣೆಯಲ್ಲಿ ಬಿಜೆಪಿ ಸಖ್ಯವಿದೆ. ಜೆಡಿಎಸ್ ಅಭ್ಯರ್ಥಿ ಕುಮಾರಸ್ವಾಮಿ ಅವರಿಗೆ ಪೈಪೋಟಿ ನೀಡಿದ್ದ ಬಿಜೆಪಿಯ ಯೋಗೇಶ್ವರ್, ಈಗ 'ಕೈ' ಹಿಡಿದು ಕುಮಾರಸ್ವಾಮಿ ಅವರ ಪುತ್ರನಿಗೆ ಸವಾಲೊಡ್ಡಿದ್ದಾರೆ. ಈ ಬಾರಿ ಡಿ.ಕೆ ಸಹೋದರರು ಅವರ ಬೆನ್ನಿಗಿದ್ದಾರೆ.

ಈ ಚುನಾವಣೆ ಸಿ.ಪಿ. ಯೋಗೇಶ್ವರ್ ಅವರಿಗೆ ರಾಜಕೀಯದ ಅಳಿವು, ಉಳಿವಿನ ಪ್ರಶ್ನೆಯಾದರೆ, ಜೆಡಿಎಸ್‌ಗೆ ಜಿಲ್ಲೆಯಲ್ಲಿ ಅಸ್ತಿತ್ವದ ಪ್ರಶ್ನೆಯಾಗಿದೆ.

ಈ ಚುನಾವಣೆ ಎಚ್‌ಡಿಕೆ ಮತ್ತು ಡಿ.ಕೆ ಸಹೋದರರ ನಡುವಣ ಸಮರವೂ ಹೌದು. ಜಿಲ್ಲೆಯಲ್ಲಿ ಪಾರುಪತ್ಯ ಸಾಧಿಸಲು ಇವರಿಬ್ಬರ ನಡುವೆ ನಡೆಯುತ್ತಿರುವ ಪೈಪೋಟಿಗೆ ಉಪ ಸಮರವೂ ವೇದಿಕೆಯಾಗಿದೆ. ನಿಖಿಲ್ ಸೋತರೆ ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಇರುವ ಜೆಡಿಎಸ್ ಪ್ರಾತಿನಿಧ್ಯ ಶೂನ್ಯಕ್ಕೆ ಇಳಿಯಲಿದೆ. ಪಕ್ಷದ ಹಿಡಿತವೂ ಸಡಿಲಗೊಳ್ಳಲಿದೆ ಎಂಬ ಅಭಿಪ್ರಾಯ ಕ್ಷೇತ್ರದಲ್ಲಿ ಕೇಳಿ ಬರುತ್ತಿದೆ.

ಡಿಕೆಶಿ, ಎಚ್‌ಡಿಕೆ ಅಗ್ನಿಪರೀಕ್ಷೆ: 'ಯೋಗೇಶ್ವರ್ ಗೆಲುವಿನ ಮೂಲಕ ಎಚ್‌ಡಿಕೆಗೆ ಎದಿರೇಟು ನೀಡಿ ಜಿಲ್ಲೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಮುಂದಾಗಿರುವ ಡಿ.ಕೆ ಸಹೋದರರ ತಂತ್ರ ಏನಾದರೂ ತಿರುಮಂತ್ರವಾದರೆ ಅದು ಡಿ.ಕೆ. ಶಿವಕುಮಾರ್ ನಾಯಕತ್ವದ ವೈಫಲ್ಯ' ಎನ್ನುತ್ತಾರೆ ಸ್ಥಳೀಯರು.

ಲೋಕಸಭಾ ಚುನಾವಣೆಯಲ್ಲಿ ಸಹೋದರ ಡಿ.ಕೆ. ಸುರೇಶ್ ಅವರಿಗಾದ ಸೋಲಿನ ಸೇಡು ತೀರಿಸಿಕೊಳ್ಳಲು ಕುಮಾರಸ್ವಾಮಿ ಅವರ ನೆಲೆಯಲ್ಲೇ ಸವಾಲು ಹಾಕಿರುವ ಶಿವಕುಮಾರ್ ನಾಯಕತ್ವಕ್ಕೆ ಈ ಚುನಾವಣೆ ಅಗ್ನಿಪರೀಕ್ಷೆ. ಎನ್‌ಡಿಎ ಬೆಂಬಲದೊಂದಿಗೆ ಚನ್ನ ಪಟ್ಟಣದಲ್ಲಿ ಡಿ.ಕೆ ಸಹೋದರರನ್ನು ಹಿಮ್ಮೆಟ್ಟಿಸಿ ತಮ್ಮ ನಾಯಕತ್ವ ಸಾಬೀತು ಪಡಿಸುವ ಜೊತೆಗೆ ಜಿಲ್ಲೆಯಲ್ಲಿ ಪಕ್ಷದ ಅಡಿಪಾಯ ಭದ್ರಪಡಿಸಬೇಕಾದ ಸವಾಲು ಎಚ್‌ಡಿಕೆ ಅವರದ್ದು.

ಕೆರೆಗಳಿಗೆ ನೀರು ತುಂಬಿಸಿ ನೀರಾವರಿ ಸೌಲಭ್ಯ ಕಲ್ಪಿಸಿದ ಕ್ರೆಡಿಟ್ ರಾಜಕೀಯ ಮತ್ತು ಜೆಡಿಎಸ್ ನಾಯಕರ ಕಣ್ಣೀರು ಪ್ರಚಾರದ ಉದ್ದಕ್ಕೂ ಹೆಚ್ಚು ಸದ್ದು ಮಾಡುತ್ತಿದೆ. ಅಭಿವೃದ್ಧಿ ವಿಷಯದ ಜೊತೆಯಲ್ಲಿಯೇ ವೈಯಕ್ತಿಕ ಟೀಕೆ, ಟಿಪ್ಪಣಿ ಸಹ ಎರಡೂ ಪಾಳಯದಲ್ಲಿ ಕೇಳಿ ಬರುತ್ತಿವೆ.

ಪಕ್ಷೇತರರ ಪಾತ್ರವೂ ನಿರ್ಣಾಯಕ: ನಿಖಿಲ್ ಕುಮಾರಸ್ವಾಮಿ, ಸಿ.ಪಿ. ಯೋಗೇಶ್ವರ್ ಅಲ್ಲದೇ ಎಸ್‌ಡಿಪಿಐ ಅಭ್ಯರ್ಥಿ ಮೊಹಮ್ಮದ್ ಫಾಜೀಲ್ ಸೇರಿದಂತೆ 31 ಸ್ಪರ್ಧಿಗಳು ಕಣದಲ್ಲಿ ಇದ್ದಾರೆ. ಈ ಪೈಕಿ 21 ಪಕ್ಷೇತರರಿದ್ದಾರೆ. ಪಕ್ಷೇತರರು ಪಡೆಯುವ ಮತಗಳು ಪ್ರಮುಖ ಹುರಿಯಾಳುಗಳ ಗೆಲುವು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ಒಕ್ಕಲಿಗರ ಮತ ವಿಭಜನೆ; 'ಅಹಿಂದ' ಭಜನೆ

ಕ್ಷೇತ್ರದಲ್ಲಿ ಸುಮಾರು 1.10 ಲಕ್ಷ ಒಕ್ಕಲಿಗರ ಮತಗಳಿವೆ ಎಂದು ಹೇಳಲಾಗುತ್ತಿದೆ. ಎರಡನೇ ಸ್ಥಾನದಲ್ಲಿ ಅಹಿಂದ ಮತಗಳ ಪೈಕಿ ಅಲ್ಪಸಂಖ್ಯಾತರು ಮತ್ತು ದಲಿತ ಮತಗಳೇ ಅಂದಾಜು 70 ಸಾವಿರದಷ್ಟಿವೆ ಎನ್ನಲಾಗಿದೆ.

ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳಿಬ್ಬರೂ ಒಕ್ಕಲಿಗರಾಗಿರುವುದರಿಂದ ಆ ಸಮುದಾಯದ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ.

ದಲಿತ ಮತ್ತು ಹಿಂದುಳಿದ ವರ್ಗಗಳ ಮತಗಳು ಕೂಡ ಎರಡೂ ಕಡೆ ಹಂಚಿಕೆಯಾಗುವುದರಿಂದ ಇಬ್ಬರ ಚಿತ್ತ ಅಲ್ಪಸಂಖ್ಯಾತರತ್ತ ಹರಿದಿದೆ. ಈ ಸಮುದಾಯವನ್ನು ಸೆಳೆಯಲು ಎರಡೂ ಪಕ್ಷದವರು ಕಸರತ್ತು ನಡೆಸಿದ್ದಾರೆ.

ಎಸ್‌ಡಿಪಿಐ ಅಭ್ಯರ್ಥಿ ಮೊಹಮ್ಮದ್ ಫಾಜೀಲ್ ಕಣದಲ್ಲಿರುವುದು ಯಾರಿಗೆ ಪೂರಕ ಮತ್ತು ಮಾರಕ ಎಂಬ ಬಗ್ಗೆ ಕ್ಷೇತ್ರದಲ್ಲಿ ಕುತೂಹಲಕಾರಿ ಚರ್ಚೆ ನಡೆಯುತ್ತಿವೆ. ಒಂದು ವೇಳೆ ಫಾಜೀಲ್ ಹೆಚ್ಚಿನ ಪ್ರಮಾಣದಲ್ಲಿ ಅಲ್ಪಸಂಖ್ಯಾತರ ಮತಗಳನ್ನು ಸೆಳೆದರೆ ಕಾಂಗ್ರೆಸ್‌ಗೆ ಕಷ್ಟವಾಗಲಿದೆ.

'ಗ್ಯಾರಂಟಿ' ಯೋಜನೆಗಳು ಪಕ್ಷಾತೀತ ಮತ ತರುವ ವಿಶ್ವಾಸದಲ್ಲಿ 'ಕೈ' ದಂಡು ಇದ್ದರೆ, ಅಭಿವೃದ್ಧಿ ಕೆಲಸಗಳು ಪುತ್ರನ ಕೈ ಹಿಡಿಯಲಿವೆ ಎಂಬ ನಂಬಿಕೆ ಕುಮಾರಸ್ವಾಮಿ ಅವರದ್ದು.

ಸೈನಿಕನ ಬೆನ್ನಿಗೆ 'ಕೈ' ಪಡೆ

ಪಕ್ಷಾಂತರ ರಾಜಕಾರಣ ಮಾಡಿದರೂ ಯೋಗೇಶ್ವರ್ ಕ್ಷೇತ್ರದಲ್ಲಿ ವೈಯಕ್ತಿಕ ವರ್ಚಸ್ಸಿನ ಮತಬಲ ಹೊಂದಿದ್ದಾರೆ. ರಾಜಕಾರಣ ಶುರು ಮಾಡಿದಾಗಿನಿಂದ ಯೋಗೇಶ್ವರ್ ವೈಯಕ್ತಿಕ ವರ್ಚಸ್ಸಿನ ಮೇಲೆ ರಾಜಕೀಯ ಮಾಡುತ್ತಿದ್ದಾರೆ.

ಇತ್ತೀಚಿನ ಎರಡು ಚುನಾವಣೆಗಳಲ್ಲಿ ಜೆಡಿಎಸ್ ವಿರುದ್ಧ ಮುಗ್ಗರಿಸಿರುವ ಅವರಿಗೆ ಈ ಚುನಾವಣೆಯಲ್ಲಿ 'ಕೈ' ಬಲ ಸಿಕ್ಕಿದೆ. ಆಡಳಿತಾರೂಢ ಸರ್ಕಾರ ಬೆನ್ನಿಗಿದೆ. ಆರಂಭದಿಂದಲೂ ಮಾಜಿ ಸಂಸದ ಡಿ.ಕೆ. ಸುರೇಶ್ ಪ್ರಚಾರಕ್ಕೆ ಸಾಥ್ ನೀಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ಸೇರಿದಂತೆ ಡಜನ್‌ಗೂ ಹೆಚ್ಚು ಸಚಿವರು, ಶಾಸಕರು, ಸಂಸದರು ಅವರ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ.

ಅಪ್ಪ–ಅಜ್ಜನೇ ಆಸರೆ

ಜೆಡಿಎಸ್‌ಗೆ ತನ್ನದೇ ಕಾರ್ಯಕರ್ತರ ಪಡೆ ಇರುವುದು ನಿಖಿಲ್ ಆತ್ಮವಿಶ್ವಾಸ ಹೆಚ್ಚಿಸಿದೆ. ಮೊಮ್ಮಗನ ಗೆಲುವಿಗಾಗಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಇಳಿ ವಯಸ್ಸಿನಲ್ಲೂ ಅಖಾಡಕ್ಕಿಳಿದು ಬಿರುಸಿನಿಂದ ಪ್ರಚಾರ ನಡೆಸುತ್ತಿದ್ದಾರೆ. ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಸೇರಿದಂತೆ ಮೈತ್ರಿ ಶಾಸಕರು, ಮಾಜಿ ಸಚಿವರು ಕ್ಷೇತ್ರದಲ್ಲಿ ಬೀಡುಬಿಟ್ಟು ಮತ ಯಾಚಿಸುತ್ತಿದ್ದಾರೆ.

ನಾಮಪತ್ರ ಸಲ್ಲಿಸಿದ ಮಾರನೇ ದಿನದಿಂದಲೇ ಪ್ರಚಾರಕ್ಕಿಳಿದಿರುವ ಕುಮಾರಸ್ವಾಮಿ ಈ ಬಾರಿ ಶತಾಯಗತಾಯ ಪುತ್ರನನ್ನು ಗೆಲುವಿನ ದಡ ಸೇರಿಸಲು ಪಣ ತೊಟ್ಟಿದ್ದಾರೆ.

ಕವರ್‌ನಲ್ಲಿ ಮತದಾರರಿಗೆ ಹಣ!



ಜೆಡಿಎಸ್ ಅಭ್ಯರ್ಥಿ ಕರಪತ್ರದ ಮೇಲೆ ಉರ್ದು ಭಾಷೆ ಕವರ್‌ನಲ್ಲಿರುವ ₹500ರ ನೋಟು



ಕಾಂಗ್ರೆಸ್ ಅಭ್ಯರ್ಥಿ ಕರಪತ್ರದ ಮೇಲೆ ಉರ್ದು ಭಾಷೆ ಕವರ್‌ನಲ್ಲಿರುವ ₹500ರ ನೋಟು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆ ಮತದಾನಕ್ಕೆ ಇನ್ನೂ ಎರಡು ದಿನ ಬಾಕಿ ಇರುವಾಗಲೇ ಪಟ್ಟಣದ ಅಲ್ಪಸಂಖ್ಯಾತರ ಪ್ರದೇಶದಲ್ಲಿ ಹಣ ಹಂಚಿಕೆ ಆರೋಪ ಕೇಳಿಬಂದಿದೆ.

ಉರ್ದು ಭಾಷೆಯಲ್ಲಿ ಮುದ್ರಿತವಾದ ಕವರ್‌ನಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಕರಪತ್ರದ ಜೊತೆ ₹500 ಮುಖಬೆಲೆಯ ಎರಡು ನೋಟುಗಳಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಎರಡೂ ಪಕ್ಷಗಳ ಕರಪತ್ರಗಳ ಜೊತೆಗಿರುವ ನೋಟಿನ ಚಿತ್ರ, ನೋಟಿನ ಸಂಖ್ಯೆ ಒಂದೇ ಆಗಿದೆ. ಈ ವಿಷಯ ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ಕೆಸರೆರಚಾಟಕ್ಕೂ ಕಾರಣವಾಗಿದೆ.

ಮತ್ತೊಂದೆಡೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಶನಿವಾರ ರಾತ್ರಿ ಪಟ್ಟಣದ ಅಲ್ಪಸಂಖ್ಯಾತರ ಪ್ರದೇಶಗಳಲ್ಲಿ ನಡೆಸಿದ ಪ್ರಚಾರದ ವೇಳೆ ಬಹಿರಂಗವಾಗಿ ಹಣ ನೀಡುವ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಪ್ರಚಾರದ ವೇಳೆ ಜಮೀರ್ ಹಣ ನೀಡುವ ವಿಡಿಯೊವನ್ನು ತನ್ನ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, 'ಕಾಂಗ್ರೆಸ್ ಸರ್ಕಾರ ತನ್ನ ಆಡಳಿತ ಯಂತ್ರ ಮತ್ತು ಅಧಿಕಾರ ದುರ್ಬಳಕೆ ಮಾಡಿಕೊಂಡು ಚುನಾವಣೆಯಲ್ಲಿ ಮತದಾರರಿಗೆ ಆಮಿಷವೊಡ್ಡುತ್ತಿದೆ. ಸಚಿವ ಜಮೀರ್ ಅಹಮದ್ ಪ್ರಚಾರದ ವೇಳೆ ಸಾರ್ವಜನಿಕವಾಗಿ ನೋಟುಗಳನ್ನು ಕೊಟ್ಟು ಜನರಿಗೆ ಮತ ಹಾಕುವಂತೆ ಒತ್ತಡ ಹೇರಿದ್ದಾರೆ' ಎಂದು ಆರೋಪಿಸಿದೆ.


'ಚುನಾವಣಾ ಆಯೋಗವು ಕಾಂಗ್ರೆಸ್ ನಾಯಕರ ಹಣ ಹಂಚಿಕೆಯನ್ನು ಗಂಭೀರವಾಗಿ ಪರಿಗಣಿಸಿ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಸಚಿವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದೆ.

'ಪಟ್ಟಣದ ಮೆಹದಿನಗರದಲ್ಲಿ ವ್ಯಕ್ತಿಯೊಬ್ಬ ಸ್ಥಳೀಯರೊಬ್ಬರಿಗೆ ₹500 ಮುಖಬೆಲೆಯ ಎರಡು ನೋಟುಗಳನ್ನು ಉರ್ದು ಭಾಷೆಯ ಕವರ್‌ನಲ್ಲಿ ಜೆಡಿಎಸ್ ಅಭ್ಯರ್ಥಿಯ ಕರಪತ್ರದೊಂದಿಗೆ ಕೊಟ್ಟು ಹೋಗಿರುವ ದೂರು ಬಂದಿದೆ. ಅದೇ ನೋಟು ಮತ್ತು ಕವರ್ ಕಾಂಗ್ರೆಸ್ ಅಭ್ಯರ್ಥಿಯ ಕರಪತ್ರದ ಜೊತೆಗಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಮಾಹಿತಿ ಬಂದಿದೆ. ಸಚಿವ ಜಮೀರ್ ಅವರು ಪ್ರಚಾರದ ವೇಳೆ ಹಣ ಹಂಚಿರುವ ದೂರು ಬಂದಿದೆ. ಎರಡೂ ಘಟನೆಗಳ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುವುದು' ಎಂದು ಚುನಾವಣಾ ಅಧಿಕಾರಿಗಳು ಮತ್ತು ಪೊಲೀಸರು ತಿಳಿಸಿದ್ದಾರೆ.

'ಅಸಮರ್ಥ ಸರ್ಕಾರ, ಅಸಮರ್ಥ ಸಿಎಂ: ಬಿ.ವೈ ವಿಜಯೇಂದ್ರ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ತೋರಣಗಲ್(ಬಳ್ಳಾರಿ): 'ರಾಜ್ಯದಲ್ಲಿರುವುದು ಅಸಮರ್ಥ ಸರ್ಕಾರ, ಅಸಮರ್ಥ ಮುಖ್ಯಮಂತ್ರಿ.



ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವತಃ ಭ್ರಷ್ಟಾಚಾರ ಪ್ರಕರಣದಲ್ಲಿ ಆರೋಪಿ ನಂ. 1 ಆಗಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಸಂಡೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಡೀ ದೇಶದಲ್ಲೇ ಕೇವಲ ಒಂದೂವರೆ ವರ್ಷದಲ್ಲಿ ಜನಪ್ರಿಯತೆ ಕಳೆದುಕೊಂಡ ಯಾವುದಾದರೂ ಸರ್ಕಾರವಿದ್ದರೆ ಅದು ಸಿದ್ದರಾಮಯ್ಯ ಸರ್ಕಾರ. ಸಿಎಂ ಸಿದ್ದರಾಮಯ್ಯ ಅಲ್ಪಸಂಖ್ಯಾತರನ್ನು ಮಾತ್ರ ಓಲೈಸುತ್ತಿದ್ದು, ಹಿಂದುಳಿದವರನ್ನು ಮರೆತಿದ್ದಾರೆ' ಎಂದು ಟೀಕಿಸಿದರು.

'ಸಿದ್ದರಾಮಯ್ಯ ಸರ್ಕಾರ ಬಂದ ಮೇಲೆ ಮುಡಾದಲ್ಲಿ ₹5 ಸಾವಿರ ಕೋಟಿ ಬೆಲೆಯ ನಿವೇಶನಗಳು ಲೂಟಿಯಾಗಿವೆ. 50:50 ನಿವೇಶನ ಹಿಂಪಡೆಯುವ ಮುಡಾದ ನಿರ್ಣಯ ಇದಕ್ಕೆ ಸಾಕ್ಷಿ. ಹಿಂದಿನ ಮುಡಾ ಆಯುಕ್ತ ದಿನೇಶ್ ಎಂಬುವವರನ್ನು ಬಚ್ಚಿಡಲಾಗಿದೆ' ಎಂದು ಆರೋಪಿಸಿದರು.

ಕಾಂಗ್ರೆಸ್‌ನಲ್ಲಿ ಕಾಣದ ಅಬ್ಬರ

ಸಂಡೂರು(ಬಳ್ಳಾರಿ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆತಂದು ಕಳೆದ ಮೂರು ದಿನಗಳಿಂದ ಕ್ಷೇತ್ರದಲ್ಲಿ ಅಬ್ಬರಿಸಿದ್ದ ಕಾಂಗ್ರೆಸ್, ಭಾನುವಾರ ತಣ್ಣಗೆ ಪ್ರಚಾರ ಕಾರ್ಯದಲ್ಲಿ ತೊಡಗಿತ್ತು.

ವಾರಕ್ಕೂ ಹೆಚ್ಚು ಕಾಲ ಕ್ಷೇತ್ರದಲ್ಲೇ ಉಳಿದು ಪ್ರಚಾರ ಮಾಡಿದ್ದ ಸಚಿವ ಸಂತೋಷ್ ಲಾಡ್, ಹೊರಗೆಲ್ಲೂ ಕಾಣಲಿಲ್ಲ. ಅಭ್ಯರ್ಥಿ ಅನ್ನಪೂರ್ಣ ಕುಡುತಿನಿ ಭಾಗದ ಹಳ್ಳಿಗಳಲ್ಲಿ ಪ್ರಚಾರ ನಡೆಸಿದರು. ಇನ್ನೊಂದೆಡೆ, ಸಚಿವ ದಿನೇಶ್ ಗುಂಡೂರಾವ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಅಜಯ್ ಧರ್ಮಸಿಂಗ್, ವೀರೇಂದ್ರ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಪ್ರಚಾರ ಜೋರು: ಲಾಡ್, ರೆಡ್ಡಿ ಪ್ರತಿಷ್ಠೆ ಕಣಕ್ಕೆ

ಸಂಡೂರು: ಸಂಪತ್ತಿನ ನಾಡಿನ ಹಿಡಿತಕ್ಕೆ ಸೆಣಸು

• ಹರಿಶಂಕರ್ ಆರ್.

2023ರ ಚುನಾವಣೆ ಫಲಿತಾಂಶ

ಇ.ತುಕಾರಾಂ (ಕಾಂಗ್ರೆಸ್)
85,223

ಶಿಲ್ಪಾ ರಾಘವೇಂದ್ರ (ಬಿಜೆಪಿ)
49,701




ಇ. ಅನ್ನಪೂರ್ಣ



ಬಂಗಾರು ಹನುಮಂತ

ಕ್ಷೇತ್ರ ಮಹಿಮೆ



ಬಳ್ಳಾರಿ: ಸಂಡೂರು ವಿಧಾನಸಭಾ ಕ್ಷೇತ್ರ ಉಪಚುನಾವಣೆ ಕಣದಲ್ಲಿ ಬಿಜೆಪಿಯಿಂದ ಪಕ್ಷದ ಎಸ್.ಟಿ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಬಂಗಾರು ಹನುಮಂತ ಮತ್ತು ಕಾಂಗ್ರೆಸ್‌ನಿಂದ ಸಂಸದ ತುಕಾರಾಂ ಅವರ ಪತ್ನಿ ಇ. ಅನ್ನಪೂರ್ಣ ಕಣದಲ್ಲಿದ್ದಾರೆ. ದಿನಗಳು ಕಳೆದಂತೆ ಕ್ಷೇತ್ರ ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿದೆ.



ಬಂಗಾರು ಹನುಮಂತ ಅವರ ಬೆನ್ನ ಹಿಂದೆ ಗಾಲಿ ಜನಾರ್ದನ ರೆಡ್ಡಿ ಇದ್ದರೆ, ಇ.ಅನ್ನಪೂರ್ಣ ಅವರ ಪರ ಸಚಿವ ಸಂತೋಷ್ ಲಾಡ್ ವ್ಯಾಪಕ ಪ್ರಚಾರ ನಡೆಸಿದ್ದಾರೆ. ರಾಜಕೀಯವಾಗಿ ಮತ್ತೆ ಪ್ರವರ್ಧಮಾನಕ್ಕೆ ಬರುವ ಮತ್ತು ಬಿಜೆಪಿಯನ್ನು ಮುಂಚೂಣಿಗೆ ತರುವ ಗುರಿಯನ್ನು ಜನಾರ್ದನ ರೆಡ್ಡಿ ಹೊಂದಿದ್ದಾರೆ. ತಮ್ಮ ಅನುಪಸ್ಥಿತಿಯಲ್ಲೂ ಕಳೆದ 20 ವರ್ಷಗಳಿಂದ ತಮ್ಮ ಅಣತಿಯಂತೆ ಕ್ಷೇತ್ರವನ್ನು ಭದ್ರವಾಗಿ ಕಾಪಾಡಿಕೊಂಡು ಬಂದಿರುವ ಲಾಡ್ ಅವರು, ಹಿಡಿತ ಕಾಯ್ದುಕೊಳ್ಳಬೇಕೆಂದು ಬಯಸಿದ್ದಾರೆ.

ಅಪಾರ ಪ್ರಾಕೃತಿಕ ಸಂಪತ್ತುವುಳ್ಳ ಸಂಡೂರು ಕ್ಷೇತ್ರದಲ್ಲಿ ಹತ್ತಾರು ಸಾವಿರ ಕೋಟಿಗಳಷ್ಟು ಗಣಿ ವ್ಯವಹಾರ ನಡೆಯುತ್ತದೆ. ಗಣಿ ಸಂಪತ್ತಿನ ಮೇಲೆ ಎರಡೂ ಪಕ್ಷಗಳ ಕಣ್ಣಿದ್ದು, ಅವುಗಳನ್ನು ತಮ್ಮದಾಗಿಸಿಕೊಳ್ಳಬೇಕು ಎಂಬುದು ಎರಡೂ ಪಕ್ಷಗಳ ಉದ್ದೇಶ. ಹೀಗಾಗಿ ಕ್ಷೇತ್ರದ ಚುನಾವಣೆ ಮೇಲೆ ಹಲವು ವಿಷಯಗಳು ಪ್ರಭಾವ ಬೀರುತ್ತಿವೆ.

ಕ್ಷೇತ್ರದಲ್ಲಿ ಒಂದು ಕಡೆ ಸಂತೋಷ್ ಲಾಡ್ ಮೇಲೆ ಜನರು ಅಕ್ಕರೆಗರೆಯುವುದು ಕಂಡರೆ, ಇನ್ನೊಂದು ಕಡೆ ಜನಾರ್ದನ ರೆಡ್ಡಿ ಅವರ ಬಗೆಗೆ ಅವ್ಯಕ್ತ ಭಯ ಇರುವುದೂ ಕಾಣುತ್ತದೆ. ಇನ್ನುಳಿದಂತೆ ಇಲ್ಲಿ ಸಂಸದ ತುಕಾರಾಂ ಮತ್ತು ಅವರ ಪತ್ನಿ, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ವೈಯಕ್ತಿಕ ವರ್ಚಸ್ಸು ಅಷ್ಟಕ್ಕಷ್ಟೇ.

ಹೀಗಿರುವ ಕ್ಷೇತ್ರದ ಚುನಾವಣೆಯ ಮೇಲೆ ಹಲವು ವಿಷಯಗಳು ಪ್ರಭಾವ ಭೀರುತ್ತಿವೆ. ಸಂತೋಷ್ ಲಾಡ್ ವರ್ಚಸ್ಸು, ಜನಾರ್ದನ ರೆಡ್ಡಿ ಪಟ್ಟುಗಳು, ಅದರ ಜತೆಗೆ ಅಕ್ರಮ ಗಣಿಗಾರಿಕೆ ಕಾಲದ ಅಪಸವ್ಯಗಳು, ರಾಜಮನೆತನದವರ ನಿಲುವುಗಳು, ಗಣಿ ಮಾಲೀಕರ ಒಲವುಗಳೂ ಲೆಕ್ಕಕ್ಕೆ ಬರುತ್ತವೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಗಣಿ ಮಾಲೀಕರಿಗೆ ಮತ್ತೆ ತೊಂದರೆಯಾಗುತ್ತದೆ ಎಂದು ಕಾಂಗ್ರೆಸ್ ಪದೇ ಪದೇ ಪ್ರಸ್ತಾಪಿಸುತ್ತಿದೆ. ಕ್ಷೇತ್ರದಲ್ಲಿ ಮೂರು ದಿನ ಉಳಿದು ಪ್ರಚಾರ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ 2008ರ ಕಾಲದ ಗಣಿ ಅಕ್ರಮಗಳನ್ನೇ ಹೆಚ್ಚು ಪ್ರಸ್ತಾಪಿಸಿದ್ದಾರೆ. ಈ ಅಂಶಗಳು ಗಣಿ ಮಾಲೀಕರು ಸೇರಿದಂತೆ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರಬಲ್ಲದು ಎಂಬುದೇ ಕುತೂಹಲದ ಸಂಗತಿ.

ಸಂಡೂರಿನ ಘೋರ್ಪಡೆ ರಾಜವಂಶಸ್ಥರು ಈ ಬಾರಿಯ ಚುನಾವಣೆಯಲ್ಲಿ ಯಾರ ಪರವೂ ಕೆಲಸ ಮಾಡುತ್ತಿಲ್ಲ. ಬಿಜೆಪಿಯಲ್ಲಿ ಇರುವ ಕಾರ್ತಿಕೇಯ ಘೋರ್ಪಡೆ ಪ್ರಚಾರಕ್ಕೇ ಬಂದಿಲ್ಲ. 'ನಾವು ಹೇಳಿದವರಿಗೆ ಬಿಜೆಪಿ ಟಿಕೆಟ್ ಕೊಟ್ಟಿಲ್ಲ' ಎಂಬುದು ಅವರ ಮುನಿಸು ಎಂಬ ಮಾತಿದೆ. ಇನ್ನೊಂದೆಡೆ, ಕಾಂಗ್ರೆಸ್‌ನಲ್ಲಿ ಇರುವ ವಿ.ವೈ. ಘೋರ್ಪಡೆ ಬಹಿರಂಗವಾಗಿ ಕಾಂಗ್ರೆಸ್ ನಡೆಯನ್ನು ವಿಮರ್ಶಿಸಿದ್ದು, ಕ್ಷೇತ್ರದಲ್ಲಿ ಸಂಚಲನ ಸೃಷ್ಟಿಸಿದೆ.

ಎರಡೂ ರಾಜಕೀಯ ಪಕ್ಷಗಳಿಗೂ ಆರಂಭದಲ್ಲಿ ಬಂಡಾಯದ ಭೀತಿ ಎದುರಾಗಿತ್ತು. ಬಿಜೆಪಿಯೊಳಗಿನ ಬೇಗುದಿ ಶಮನ ಮಾಡುವಲ್ಲಿ ಜನಾರ್ದನ ರೆಡ್ಡಿ ಯಶಸ್ವಿಯಾಗಿದ್ದಾರೆ. ಶ್ರೀರಾಮುಲು ಮತ್ತು ತಮ್ಮ ನಡುವಿನ ಮುನಿಸು ಬಹಿರಂಗವಾಗದಂತೆಯೂ ಅವರು ನೋಡಿಕೊಂಡಿದ್ದಾರೆ. ಆದರೆ, ಸಾಮಾಜಿಕ ನ್ಯಾಯದ ಪ್ರಶ್ನೆಗಳು ಎದ್ದಿರುವ ಕಾಂಗ್ರೆಸ್‌ನಲ್ಲಿ ಬಂಡಾಯ ಸಂಪೂರ್ಣ ಶಮನವಾಗಿಲ್ಲ. ಈ ಎಲ್ಲಾ ಅಂಶಗಳು ಚುನಾವಣೆ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನೋಡಬೇಕು.

ಬಿಜೆಪಿ ಗೆದ್ದರೆ, ರಾಜೀನಾಮೆ ಕೊಡ್ತೀರಾ? ಮುಖ್ಯಮಂತ್ರಿಗೆ ಬಿಎಸ್‌ವೈ ಸವಾಲು

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಗೆದ್ದರೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆಂದು ಆಶ್ವಾಸನೆ ನೀಡಿ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

ಶಿಗ್ಗಾವಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರವಾಗಿ ಪ್ರಚಾರ ನಡೆಸಿ ಬಹಿರಂಗ ಸಭೆಯಲ್ಲಿ ಭಾನುವಾರ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

'ಹೆಣ್ಣು ಮಕ್ಕಳಿಗಾಗಿ ನಾನು 'ಭಾಗ್ಯಲಕ್ಷ್ಮಿ' ಬಾಂಡ್ ಮಾಡಿದ್ದೆ. ಬಾಂಡ್ ಪಡೆದವರಿಗೆ ಈಗ ಹಣ ಪಾವತಿ ಮಾಡಬೇಕು. ಆದರೆ, ಈ ಸರ್ಕಾರ ಮಾಡುತ್ತಿಲ್ಲ. ರಸ್ತೆಯ ಗುಂಡಿ ಮುಚ್ಚಲು ಸಹ ಹಣವಿಲ್ಲ. ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ರಾಜ್ಯದಲ್ಲಿ ಒಂದು ಕಿ.ಮೀ. ರಸ್ತೆಯನ್ನೂ ಸಿದ್ದರಾಮಯ್ಯ ಅಭಿವೃದ್ಧಿ ಮಾಡಿಲ್ಲ. ರಾಜ್ಯ ಸರ್ಕಾರ ದಿವಾಳಿ ಆಗಿದೆ. ಚುನಾವಣೆ ಮುಗಿದ ಬಳಿಕ, ರಾಜ್ಯ ಸರ್ಕಾರದ ಬಣ್ಣ ಬಯಲಾಗಲಿದೆ' ಎಂದರು.

'ಅಬಕಾರಿ ಇಲಾಖೆಯಲ್ಲಿ ಹಣ ಲೂಟಿ ಮಾಡುತ್ತಿರುವುದಾಗಿ ಇಲಾಖೆಯವರೇ ಆರೋಪಿಸುತ್ತಿದ್ದಾರೆ. ಇದನ್ನು ತಡೆಯದೇ ಸುಮ್ಮನಿರುವ ನಿಮಗೆ (ಸಿದ್ದರಾಮಯ್ಯ) ನಾಚಿಕೆ ಆಗಲ್ವಾ? ಮೂರು ಉಪಚುನಾವಣೆ ನಂತರ ನಿಮ್ಮ (ಸಿದ್ದರಾಮಯ್ಯ ನೇತೃತ್ವದ ಸರ್ಕಾರ) ರಾಜಕೀಯ ಆಟ ಕೊನೆಯಾಗಲಿದೆ. ನಿಮ್ಮ ನಾಟಕ ಸಹ ಬಂದ್ ಆಗಲಿದೆ' ಎಂದರು.

'ಉಪಚುನಾವಣೆ ಇರುವ 3 ಕ್ಷೇತ್ರಗಳಲ್ಲಿ ನರೇಂದ್ರ ಮೋದಿ ಹಾಗೂ ಬಿಜೆಪಿ ಗಾಳಿ ಜೋರಾಗಿ ಬೀಸುತ್ತಿದೆ. ಸೂರ್ಯ- ಚಂದ್ರ ಇರುವುದು ಎಷ್ಟು ಸತ್ಯವೋ ಶಿಗ್ಗಾವಿಯಲ್ಲಿ ಬಿಜೆಪಿ ಗೆಲ್ಲುವುದು ಅಷ್ಟೇ ಸತ್ಯ. 50 ಸಾವಿರ ಮತಗಳ ಅಂತರದಿಂದ ಭರತ್ ಬೊಮ್ಮಾಯಿ ವಿಜಯ ಪತಾಕೆ ಹಾರಿ ಸಲಿದ್ದಾರೆ ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಶಿಗ್ಗಾವಿ ಪಟ್ಟಣದ ಸಂತೆ ಮೈದಾನದಲ್ಲಿ ಬಿಜೆಪಿ ವತಿಯಿಂದ ಭಾನುವಾರ ಆಯೋಜಿಸಿದ್ದ ಬಹಿರಂಗ ಸಭೆಯಲ್ಲಿ ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ, ಬಿ.ಎಸ್‌ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ಮುಖಂಡರು ಪರಸ್ಪರ ಕೈ ಕೈ ಹಿಡಿದು ಒಗ್ಗಟ್ಟು ಪ್ರದರ್ಶಿಸಿದರು

ಹಣ, ಹೆಂಡ, ತೋಳ್ಬಲ, ಅಧಿಕಾರ–ಜಾತಿ ಬಲದಿಂದ ಚುನಾವಣೆ ಗೆಲ್ಲಲಾಗದು. ಇದನ್ನು ಕಾಂಗ್ರೆಸ್ ಅರ್ಥಮಾಡಿಕೊಳ್ಳಬೇಕು. ಮತದಾರರ ಆಯ್ಕೆ ಎಂದೆಂದಿಗೂ ಬಿಜೆಪಿ ಆಗಿರುತ್ತದೆ

ಬಿ.ಎಸ್. ಯಡಿಯೂರಪ್ಪ
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಸೋಲಿನ ಭಯದಿಂದ ಕಾಂಗ್ರೆಸ್ ಆರೋಪ'

ಹುಬ್ಬಳ್ಳಿ: 'ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲಿ ಸೋಲುವುದು ಖಚಿತವಾಗಿದ್ದರಿಂದ, ಕೋವಿಡ್ ಸಂದರ್ಭ ಬಿಜೆಪಿ ಹಗರಣದ ನಡೆಸಿದೆ ಎಂದು ಆರೋಪ ಮಾಡುತ್ತಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಉಪ ಚುನಾವಣಾ ಫಲಿತಾಂಶ ಬಂದ ನಂತರ ಈ ಆರೋಪಕ್ಕೆ ಉತ್ತರ ಸಿಗಲಿದೆ. ಆಗ ಸಿಎಂ ಸಿದ್ದರಾಮಯ್ಯ ಯಾವ ಹೇಳಿಕೆ ನೀಡುತ್ತಾರೆ ನೋಡೋಣ' ಎಂದರು.

'ಶಿಗ್ಗಾವಿ, ಚನ್ನಪಟ್ಟಣ, ಸಂಡೂರಿನಲ್ಲಿ ಸಿಎಂ ಸಿದ್ದರಾಮಯ್ಯ ಪ್ರವಾಸ ಮಾಡಿದ್ದು, ಅವರಿಗೆ ಸೋಲಿನ ಭಯ ಉಂಟಾಗಿದೆ. ಸಂಡೂರಿನಲ್ಲಿ ನಾಲ್ಕು-ಐದು ದಿನ ಬೀಡು ಬಿಟ್ಟು ಪ್ರಚಾರ ನಡೆಸಿದ್ದಾರೆ. ಎಷ್ಟೇ ಪ್ರಯತ್ನ ಮಾಡಿದ್ದರೂ ಕಾಂಗ್ರೆಸ್‌ಗೆ ಸೋಲು ಖಚಿತ. ಭ್ರಷ್ಟ ಸರ್ಕಾರದ ವಿರುದ್ಧ ಜನರು ಆಕ್ರೋಶಗೊಂಡಿದ್ದಾರೆ ಎನ್ನುವುದು ಚುನಾವಣಾ ಫಲಿತಾಂಶ ಬಂದ ನಂತರ ಸಿಎಂಗೆ ಅರ್ಥ ಆಗಲಿದೆ' ಎಂದರು.

ಹಣ ಹಂಚಲು ಕಾಂಗ್ರೆಸ್‌ನಲ್ಲಿ ಪೈಪೋಟಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಶಿಗ್ಗಾವಿ ಉಪ ಚುನಾವಣೆಯಲ್ಲಿ ಹಣ ಹಂಚುವುದರಲ್ಲಿ ಕಾಂಗ್ರೆಸ್ ನಾಯಕರ ನಡುವೆಯೇ ಪೈಪೋಟಿ ಏರ್ಪಟ್ಟಿದ್ದು, ಶಾಸಕರು ಸಮುದಾಯವಾರು ಹಣ ಹಂಚಿಕೆ ಮಾಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಹಂಚುವುದನ್ನು ನೋಡಿರಲಿಲ್ಲ' ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಮಾಧ್ಯಮ ದವರೊಂದಿಗೆ ಭಾನುವಾರ ಮಾತನಾಡಿದ ಅವರು, 'ಸರ್ಕಾರದಿಂದ ಲೂಟಿ ಮಾಡಿದ ಹಣವನ್ನು ಶಿಗ್ಗಾವಿ ಕ್ಷೇತ್ರದ ಮತದಾರರಿಗೆ ಹಂಚುತ್ತಿದ್ದಾರೆ' ಎಂದು ಆರೋಪಿಸಿದರು.

'ಹಾನಗಲ್ ರೈತ ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ ರಾಜಕಾರಣ ಮಾಡುತ್ತಿದೆ' ಎನ್ನುವ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಆತ್ಮಹತ್ಯೆ ಮಾಡಿಕೊಂಡ ರೈತರ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದೆ. ಅದನ್ನು ತೆಗೆಸಲು ಅವರು ನಾಲ್ಕು-ಐದು ವರ್ಷ ಅಲೆದಾಡಿದ್ದಾರೆ. ವಕ್ಫ್‌ಗೆ ಹೋದರೂ ನ್ಯಾಯ ಸಿಗುವುದಿಲ್ಲ ಎಂದು ಅರಿವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬದವರು ಸಹ ಇದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬರೆದುಕೊಟ್ಟಿದ್ದಾರೆ' ಎಂದು ಹೇಳಿದರು.

'ವಕ್ಫ್ ಕುರಿತು ರೈತರಿಗೆ ನೋಟಿಸ್ ಕೊಟ್ಟಿರುವುದನ್ನು ವಾಪಸ್ ಪಡೆಯುವ ಆದೇಶ ಕಣ್ಣೊರೆಸುವ ತಂತ್ರ. ಎಲ್ಲಿಯವರೆಗೆ ಗೆಜೆಟ್ ನೋಟಿಫಿಕೇಷನ್ ವಾಪಸ್ ಪಡೆಯುವುದಿಲ್ಲವೋ ಅಲ್ಲಿಯವರೆಗೆ ರೈತರ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ' ಎಂದು ಬೊಮ್ಮಾಯಿ ಹೇಳಿದರು.

'ಕ್ಷೇತ್ರಕ್ಕೆ ನಯಾಪೈಸೆ ನೀಡದ ಸರ್ಕಾರ'

ಹಾವೇರಿ: 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ಶಿಗ್ಗಾವಿ ಕ್ಷೇತ್ರಕ್ಕೆ ನಯಾಪೈಸೆಯನ್ನೂ ನೀಡಿಲ್ಲ. ಕೊಟ್ಟಿದ್ದರೆ ಜನರಿಗೆ ತಿಳಿಸ ಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಪ್ರಚಾರ ನಡೆಸಿದ ಅವರು, 'ಕಾಂಗ್ರೆಸ್ ಸುಳ್ಳು ನಾಟಕ ಮಾಡುತ್ತಿದೆ. ಸುಳ್ಳೇ ಕಾಂಗ್ರೆಸ್ ಮನೆ ದೇವರು' ಎಂದರು.

'ಶಿಗ್ಗಾವಿ ಅಭಿವೃದ್ಧಿ ಮಾಡದ ಬೊಮ್ಮಾಯಿ'

ಹುಬ್ಬಳ್ಳಿ: 'ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಶಿಗ್ಗಾವಿ ಕ್ಷೇತ್ರಕ್ಕೆ ಯಾವ ಕೊಡುಗೆಯನ್ನೂ ನೀಡಿಲ್ಲ. ಹೀಗಿದ್ದಾಗ ಯಾವ ಮುಖ ಇಟ್ಟುಕೊಂಡು ಅವರು ಅಲ್ಲಿ ಮತ ಯಾಚಿಸುತ್ತಾರೆ' ಎಂದು ಸಚಿವ ಈಶ್ವರ ಖಂಡ್ರೆ ಪ್ರಶ್ನಿಸಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಿಗ್ಗಾವಿಯಲ್ಲಿ ಒಂದು ಕ್ರೀಡಾಂಗಣ ನಿರ್ಮಿಸಿಕೊಡಿ ಎಂದು ಅಲ್ಲಿಯ ಯುವಕರು ವಿನಂತಿಸಿದ್ದರೂ ಅವರಿಂದ ಸಾಧ್ಯವಾಗಿಲ್ಲ. ಶಿಗ್ಗಾವಿ ಕ್ಷೇತ್ರದ ಜನರಿಗೆ ಪ್ರಗತಿ ಬೇಕಾಗಿದೆ. ಯಾವ ಅಭಿವೃದ್ಧಿ ಕೆಲಸವನ್ನೂ ಮಾಡದೆ, ಯುವಕರಿಂದ ಮತ್ತು ರೈತರಿಂದ ಅವರು ಮತ ಯಾಚಿಸುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

ಆರೋಪ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ಪ್ರಧಾನಿ ನರೇಂದ್ರ ಮೋದಿ, ಮಹಾನ್ ಸುಳ್ಳುಗಾರ. ಅಬಕಾರಿ ಇಲಾಖೆಯಿಂದ ₹ 700 ಕೋಟಿ ತಂದು ಮಹಾ ರಾಷ್ಟ್ರದಲ್ಲಿ ಕಾಂಗ್ರೆಸ್ ಚುನಾವಣೆ ಮಾಡುತ್ತಿರುವುದಾಗಿ ಹೊಸ ಆರೋಪ ಮಾಡಿದ್ದಾರೆ. ಇದು ಹಸಿ ಸುಳ್ಳು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿಗ್ಗಾವಿ ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ 'ಚುನಾವಣಾ ಪ್ರಚಾರ ಬಹಿರಂಗ ಸಭೆ'ಯಲ್ಲಿ ಮಾತನಾಡಿದ ಅವರು, 'ಮೋದಿ ಅವರು ಆರೋಪ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಘೋಷಿಸುತ್ತೇನೆ. ಇಲ್ಲದಿದ್ದರೆ, ನೀವು (ಪ್ರಧಾನಿ ಮೋದಿ) ನಿವೃತ್ತಿ ಘೋಷಿಸುತ್ತೀರಾ?' ಎಂದು ಸವಾಲು ಹಾಕಿದರು.

'ಮೋದಿಯವರು ಕುಟುಂಬ ರಾಜಕಾರಣದ ಬಗ್ಗೆ ಭಯಾನಕ ಭಾಷಣ ಮಾಡುತ್ತಾರೆ. ಆದರೆ, ಶಿಗ್ಗಾವಿಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಮೊಮ್ಮಗ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಗನಿಗೆ ಟಿಕೆಟ್ ನೀಡಿದ್ದಾರೆ. ಇದು ಕುಟುಂಬ ರಾಜಕಾರಣವಲ್ಲವೇ' ಎಂದು ಪ್ರಶ್ನಿಸಿದರು.

'ಮಾಜಿ ಪ್ರಧಾನಿ ದೇವೇಗೌಡರು, ಮಕ್ಕಳಾದ ಕುಮಾರಸ್ವಾಮಿ, ರೇವಣ್ಣ, ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರಸ್ವಾಮಿ, ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ, ಈಗ ಕುಮಾರಸ್ವಾಮಿ ದಂಪತಿ ಪುತ್ರ ನಿಖಿಲ್ ಕುಮಾರಸ್ವಾಮಿ, ರೇವಣ್ಣ ದಂಪತಿ ಪುತ್ರರಾದ ಪ್ರಜ್ವಲ್ ರೇವಣ್ಣ, ಸೂರಜ್ ರೇವಣ್ಣ ಇವರೆಲ್ಲರೂ ಕುಟುಂಬವಲ್ಲವೇ? ಇದೆಲ್ಲವೂ ಏನು ಮೋದಿಯವರೇ? ಭಾಷಣ ಮಾಡುವುದು ಸುಲಭ. ನುಡಿದಂತೆ ನಡೆಯಲು ನಿಮ್ಮಿಂದ ಸಾಧ್ಯವಿಲ್ಲ' ಎಂದರು.



ಶಿಗ್ಗಾವಿ ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ 'ಚುನಾವಣಾ ಪ್ರಚಾರ ಬಹಿರಂಗ ಸಭೆ'ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರತ್ತ ಕೈ ಬೀಸಿದರು. ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹಮದ್ ಖಾನ್ ಪಠಾಣ, ಸಚಿವರಾದ ಈಶ್ವರ್ ಖಂಡ್ರೆ, ಶಿವರಾಜ ತಂಗಡಗಿ ಚಿತ್ರದಲ್ಲಿದ್ದಾರೆ

'ಕಣ್ಣೀರು ಹಾಕುವುದು ದೇವೇಗೌಡರಿಗೆ ರೂಢಿ'

'ಕಣ್ಣೀರು ಹಾಕುವುದು ದೇವೇಗೌಡರಿಗೆ ರೂಢಿ ಆಗಿದೆ. ಹಾಸನದ ಮಹಿಳೆಯರು, ಕಣ್ಣೀರಲ್ಲಿ ಕೈ ತೊಳೆಯುವಾಗ ನಿಮ್ಮ (ದೇವೇಗೌಡ) ಕಣ್ಣಲ್ಲಿ ನೀರು ಬರಲಿಲ್ಲ ಏಕೆ ? ಅಲ್ಲಿಗೆ ಹೋಗಿ ದೌರ್ಜನ್ಯಕ್ಕೀಡಾದ ಮಹಿಳೆಯರ ಪರವಾಗಿ ಕಣ್ಣೀರು ಹಾಕಲಿಲ್ಲ ಏಕೆ?' ಎಂದು ಪ್ರಶ್ನಿಸಿದ ಸಿದ್ದರಾಮಯ್ಯ ಅವರು ಎಚ್.ಡಿ.ದೇವೇಗೌಡ ಅವರಿಗೆ ಟಾಂಗ್ ನೀಡಿದರು.

'ಮೋದಿ ಅವರ ಬಗ್ಗೆ ಏನೆಲ್ಲ ಮಾತನಾಡಿದ್ದರು ಎಂಬುದನ್ನು ದೇವೇಗೌಡರು ಮರೆತಿದ್ದಾರೆ. ಮೋದಿ ಪ್ರಧಾನಿಯಾದರೆ ದೇಶಬಿಟ್ಟು ಹೋಗುತ್ತೇನೆ ಎಂದು ದೇವೇಗೌಡರು ಹೇಳಿದ್ದರು. ಈಗ ಸಿದ್ದರಾಮಯ್ಯ ಅವರ ಸರ್ಕಾರ ತೆಗೆಯುವವರೆಗೂ ನಿದ್ದೆ ಮಾಡಲ್ಲ ಎನ್ನುತ್ತಿದ್ದಾರೆ. ಇದಕ್ಕಾಗಿ ಕಣ್ಣೀರು ಹಾಕುತ್ತಿದ್ದಾರೆ' ಎಂದು ಹೇಳಿದರು.

'ಇಡೀ ಸರ್ಕಾರವೇ ಶಿಗ್ಗಾವಿಯಲ್ಲಿದೆ'

ಹುಬ್ಬಳ್ಳಿ: 'ಶಿಗ್ಗಾವಿ ಕ್ಷೇತ್ರದ ಉಪಚುನಾವಣೆಯನ್ನು ಕಾಂಗ್ರೆಸ್ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಇಡೀ ಸರ್ಕಾರವೇ ಅಲ್ಲಿ ಬೀಡು ಬಿಟ್ಟಿದೆ. ಒಂದೊಂದು ಪಂಚಾಯಿತಿ ಜವಾಬ್ದಾರಿಯನ್ನು ಒಬ್ಬೊಬ್ಬ ಸಚಿವ, ಶಾಸಕರಿಗೆ ವಹಿಸಲಾಗಿದೆ' ಎಂದು ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಟೀಕಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಪಂಚಾಯಿತಿಗಲ್ಲ; ಮನೆಗೆ ಒಬ್ಬ ಸಚಿವ ಬಂದು ಕುಳಿತರೂ ಭರತ್ ಬೊಮ್ಮಾಯಿ ಗೆಲುವು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಅವರು ಎಷ್ಟೇ ಹಣದ ಹೊಳೆ ಹರಿಸಿದರೂ, ಮತದಾರರು ಬಿಜೆಪಿಗೇ ಮತ ಹಾಕುತ್ತಾರೆ' ಎಂದರು.

ವಂಚನೆ: ತಾಯಿ, ಮಗಳು ವಶಕ್ಕೆ

ಸಾಲ ಕೊಡಿಸುವುದಾಗಿ ನೂರಕ್ಕೂ ಅಧಿಕ ಮಹಿಳೆಯರಿಗೆ ವಂಚಿಸಿದ ಆರೋಪ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಲ ಕೊಡಿಸುವುದಾಗಿ ಹೇಳಿ ನೂರಕ್ಕೂ ಅಧಿಕ ಮಹಿಳೆಯರಿಗೆ ಲಕ್ಷಾಂತರ ರೂಪಾಯಿ ವಂಚಿಸಿದ ಆರೋಪದಡಿ ತಾಯಿ ಮತ್ತು ಮಗಳು ಸೇರಿ ಮೂವರನ್ನು ನಗರದ ಹೈಗ್ರೌಂಡ್ಸ್ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ರೇಷ್ಮಾ ಬಾನು, ಆಕೆಯ ಪುತ್ರಿ ತೌಸಿಯಾ ಅಂಜುಂ ಹಾಗೂ ಶ್ರೀಕಾರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ನೌಕರ ಆನಂದ್ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳ ಬ್ಯಾಂಕ್ ಖಾತೆಗಳ ವಿವರಗಳ ಪರಿಶೀಲನೆ ನಡೆಯುತ್ತಿದ್ದು, ಬಳಿಕವಷ್ಟೇ ವಂಚಿಸಿರುವ ಮೊತ್ತದ ನಿಖರ ಮಾಹಿತಿ ಗೊತ್ತಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕ್ವೀನ್ಸ್ ರಸ್ತೆಯಲ್ಲಿ ಕಚೇರಿ ಹೊಂದಿದ್ದ ರೇಷ್ಮಾ ಬಾನು, ತೌಸಿಯಾ ಅಂಜುಂ ಅವರು ಶ್ರೀಕಾರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ₹50 ಸಾವಿರ ಸಾಲ ಕೊಡಿಸುವುದಾಗಿ ಹೇಳಿದರು. ಧರ್ಮಸ್ಥಳ ಸಂಘದ ಮುಖ್ಯಸ್ಥಳಾದ ನನಗೆ ಹಲವು ಸದಸ್ಯರ ಪರಿಚಯವಿತ್ತು. ಹಾಗಾಗಿ ಆರೋಪಿಗಳ ಸೂಚನೆಯಂತೆ ಬ್ಯಾಂಕ್ ಖಾತೆ ತೆರೆಯುವ ಉದ್ದೇಶದಿಂದ ನನ್ನನ್ನು ಸೇರಿ 75 ಮಹಿಳಾ ಸದಸ್ಯರಿಂದ ತಲಾ ₹2,500 ಸಂಗ್ರಹಿಸಿ ಅವರಿಗೆ ನೀಡಿದೆ. ಬಳಿಕ ನನಗೆ ಪರಿಚಯವಿರುವ 24 ಮಹಿಳೆಯರಿಂದ ತಲಾ ₹3 ಸಾವಿರ ಹಾಗೂ 40 ಮಹಿಳೆಯರಿಂದ ತಲಾ ₹5 ಸಾವಿರ ಸಂಗ್ರಹಿಸಿ ತಾಯಿ ಮತ್ತು ಮಗಳಿಗೆ ಫೋನ್ ಪೇ ಮೂಲಕ ಹಣ ವರ್ಗಾಯಿಸಲಾಯಿತು' ಎಂದು ನಗರದ ಅಂಚೆಪಾಳ್ಯ ನಿವಾಸಿ ಶ್ವೇತಾ ಪಂಡ ಅವರು ದೂರಿನಲ್ಲಿ ತಿಳಿಸಿದ್ದಾರೆ.

'ಹಣ ನೀಡಿ ಹದಿನೈದು ದಿನ ಕಳೆದರೂ ಸಾಲ ಮಂಜೂರು ಮಾಡಿಸಿರಲಿಲ್ಲ. ಮೊಬೈಲ್ ಕರೆಗೂ ಸರಿಯಾಗಿ ಸ್ಪಂದಿಸುತ್ತಿರಲಿಲ್ಲ. ಮಹಿಳಾ ಸಂಘದ ಸದಸ್ಯರ ಜತೆ ಅವರ ಕಚೇರಿಗೆ ತೆರಳಿ ಸಾಲದ ವಿಚಾರ ಪ್ರಶ್ನಿಸಿದಾಗ, ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಅಲ್ಲಿಯೇ ಇದ್ದ ಶ್ರೀಕಾರ್ ಸೌಹಾರ್ದ ಸೊಸೈಟಿ ನಿರ್ದೇಶಕ ಆನಂದ್ ಎಂಬುವರು ಸಹ ಸಾಲ ಕೊಡುವುದಿಲ್ಲ ಎಂದು ಏರು ಧ್ವನಿಯಲ್ಲಿ ಹೇಳಿದರು. ಹಣ ಪಡೆದು ವಂಚನೆ ಮಾಡಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶ್ವೇತಾ ದೂರಿನಲ್ಲಿ ಮನವಿ ಮಾಡಿದ್ದಾರೆ.

'ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಖಾತೆ ತೆರೆಯುವ ಹೆಸರಿನಲ್ಲಿ ಮಹಿಳೆಯರಿಂದ ಆರೋಪಿಗಳು ಲಕ್ಷಾಂತರ ರೂಪಾಯಿ ಸಂಗ್ರಹಿಸಿದ್ದಾರೆ. ಸಾಲಕ್ಕೆ ಮನವಿ ಸಲ್ಲಿಸಿದ್ದ ಸಾರ್ವಜನಿಕರ ಮೊಬೈಲ್ ನಂಬರ್ ಅನ್ನೇ ಸಾಲದ ಖಾತೆ ನಂಬರ್ ಎಂದು ಆರೋಪಿಗಳು ನೀಡಿದ್ದರು ಎಂಬ ಆರೋಪವಿದೆ. ಹಣ ವಾಪಸ್ ಕೇಳಿದಾಗ ಪ್ರಭಾವಿ ವ್ಯಕ್ತಿಗಳ ಹೆಸರು ಹೇಳಿ ಬೆದರಿಕೆ ಹಾಕಿದರು ಎನ್ನಲಾಗಿದೆ. ಈ ಎಲ್ಲಾ ಆರೋಪಗಳ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಳವು: ಹೊರ ರಾಜ್ಯಕ್ಕೆ ಪೊಲೀಸ್ ತಂಡ

ಬೆಂಗಳೂರು: ಹೊಸಹಳ್ಳಿ ಬಡಾವಣೆಯ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಸುರೇಂದ್ರ ಕುಮಾರ್ ಜೈನ್ ಮನೆಯಲ್ಲಿ ₹15 ಕೋಟಿ ಮೌಲ್ಯದ ಚಿನ್ನಾಭರಣ ಮತ್ತು ನಗದು ಕಳವು ಪ್ರಕರಣದ ಆರೋಪಿಗಳ ಪತ್ತೆಗಾಗಿ ಪೊಲೀಸರ ತಂಡ ಹೊರ ರಾಜ್ಯಕ್ಕೆ ತೆರಳಿದೆ.

ಮನೆಯ ಭದ್ರತಾ ಸಿಬ್ಬಂದಿ ನಮ್ರಾಜ್ ಮತ್ತು ಸುಷ್ಮಿತಾ ದಂಪತಿ ಬಂಧನ ಭೀತಿಯಿಂದ ಮೊಬೈಲ್ ಫೋನ್‌ಗಳನ್ನು ಸ್ವಿಚ್ಡ್ ಆಫ್ ಮಾಡಿ, ತಲೆ ಮರೆಸಿಕೊಂಡಿದ್ದಾರೆ. ಪೊಲೀಸ್ ತಂಡಗಳು ಹೊರ ರಾಜ್ಯಕ್ಕೆ ತೆರಳಿ ಶೋಧ ಕಾರ್ಯ ಆರಂಭಿಸಿವೆ.

ಆರೋಪಿಗಳು ಹೊರ ರಾಜ್ಯಕ್ಕೆ ಹೋಗಿರಬಹುದು ಅಥವಾ ನೇಪಾಳಕ್ಕೆ ಪರಾರಿಯಾಗಿರುವ ಸಾಧ್ಯತೆಯೂ ಇದೆ. ಆರೋಪಿಗಳ ಮೊಬೈಲ್ ಕರೆಗಳ ವಿವರ, ಯಾರೊಂದಿಗೆ ಕೊನೆಯ ಬಾರಿ ಮಾತನಾಡಿದ್ದರು ಎಂಬುದು ಹಾಗೂ ಅಕ್ಕಪಕ್ಕದ ನಿವಾಸಿಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಲೋಕೇಷನ್ ಪತ್ತೆ ಮಾಡುವ ಕಾರ್ಯ ಸಹ ನಡೆಯುತ್ತಿದೆ. ಆದರೆ, ಈವರೆಗೆ ಪೊಲೀಸ್ ತಂಡ ನೇಪಾಳಕ್ಕೆ ತೆರಳಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಸುರೇಂದ್ರ ಕುಮಾರ್ ಚಿನ್ನಾಭರಣ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರ ಪೈಕಿ ಧ್ಯಾನ್ ಕರಣ್ ಮತ್ತು ರಾಜೇಶ್ ಎಂಬುವರು ವಿಜಯ ನಗರ ಠಾಣೆಯಲ್ಲಿ ಪ್ರಕರಣ ದಾಖಲಾದ ಬಳಿಕ ನಾಪತ್ತೆಯಾಗಿದ್ದಾರೆ. ಅವರು ಸಹ ಕೃತ್ಯದಲ್ಲಿ ಭಾಗಿಯಾಗಿರುವ ಕುರಿತು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಜ್ ಕಾರು ಅಪಘಾತ: ಸಾಕ್ಷ್ಯ ಸಂಗ್ರಹ

ಬೆಂಗಳೂರು: ಬೆಂಜ್ ಕಾರು ಡಿಕ್ಕಿ ಹೊಡೆದು ಕೆಂಗೇರಿಯ ಸಮೀಪ ಟೆಕಿ ಸಂಧ್ಯಾ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಧನುಷ್ ಮದ್ಯ ಖರೀದಿಸಿರುವುದು ಸೇರಿದಂತೆ ಹಲವು ಸಾಕ್ಷ್ಯಗಳನ್ನು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಕಲೆ ಹಾಕುತ್ತಿದ್ದಾರೆ.

ಧನುಷ್ ಮದ್ಯ ಸೇವಿಸಿ ಕಾರು ಚಾಲನೆ ಮಾಡಿರುವುದು ಪೊಲೀಸರ ತನಿಖೆ ವೇಳೆ ಗೊತ್ತಾಗಿದ್ದು, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

'ನಾಯಂಡಹಳ್ಳಿ ಬಳಿ ಆರೋಪಿ ಮದ್ಯ ಖರೀದಿಸಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಪಘಾತ ಸ್ಥಳದ ರಸ್ತೆಯ ಹಂಪ್‌ನಲ್ಲೂ ಕಾರನ್ನು ವೇಗವಾಗಿ ಚಾಲನೆ ಮಾಡಿದ್ದರು. ಅಪಘಾತ ನಡೆದ ಸ್ಥಳದಲ್ಲಿದ್ದ ಆಟೊ ಚಾಲಕರ ಹೇಳಿಕೆಯನ್ನು ಪಡೆಯಲಾಗಿದೆ. ಮದ್ಯ ಖರೀದಿಸಲು ಆರೋಪಿ ಬಂದಿದ್ದನ್ನು ಮದ್ಯದಂಗಡಿಯ ಇಬ್ಬರು ವ್ಯಕ್ತಿಗಳು ಗುರುತಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಎಂಟಿಸಿ ಬಸ್ ಡಿಕ್ಕಿ: ಸಾವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕಡೆ ತೆರಳುತ್ತಿದ್ದ ಬಿಎಂಟಿಸಿ ಬಸ್ ಹಾಗೂ ಪಲ್ಸರ್ ಬೈಕ್ ನಡುವೆ ಅಪಘಾತ ಉಂಟಾಗಿ ಇಬ್ಬರು ಮೃತಪಟ್ಟಿದ್ದಾರೆ.

ಕಲಬುರಗಿಯ ರಮೇಶ್ (41) ಹಾಗೂ ಚಿಕ್ಕಜಾಲದ ನಬಿ (35) ಮೃತಪಟ್ಟವರು. ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಸಾದರಹಳ್ಳಿ ಗೇಟ್ ಬಳಿ ಶನಿವಾರ ರಾತ್ರಿ ಅಪಘಾತ ನಡೆದಿತ್ತು.

ರಮೇಶ್ ಕ್ಯಾಂಟರ್ ಚಾಲಕರಾಗಿ, ನಬಿ ಆಟೊ ಚಾಲಕರಾಗಿದ್ದು, ಚಿಕ್ಕಜಾಲದಲ್ಲಿ ವಾಸವಾಗಿದ್ದರು. ಮೆಜೆಸ್ಟಿಕ್‌ನಿಂದ ವಿಮಾನ ನಿಲ್ದಾಣ ಕಡೆಗೆ ತೆರಳುತ್ತಿದ್ದ ವಿದ್ಯುತ್ ಚಾಲಿತ ಬಿಎಂಟಿಸಿ ಬಸ್ ಸಾದರಹಳ್ಳಿ ಗೇಟ್ ಬಳಿಯ ಪೆಟ್ರೋಲ್ ಬಂಕ್ ಹತ್ತಿರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರು ಪರೀಕ್ಷಿಸಿ, ಮೃತಪಟ್ಟಿದ್ದಾರೆ ಎಂದು ಘೋಷಿಸಿದರು.

ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಸ್ ಹಾಗೂ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ಟ್ರಕ್ ಚಾಲಕ ಸಾವು: ಎಚ್‌ಎಸ್‌ಆರ್ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ 19ನೇ ಮುಖ್ಯರಸ್ತೆಯಲ್ಲಿ ಭಾನುವಾರ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಟ್ರಕ್ ಚಾಲಕ ಮೃತಪಟ್ಟಿದ್ದಾರೆ.

ನೆಲಗಮಂಗಲ ನಿವಾಸಿ ಮಂಜುನಾಥ್ (47) ಮೃತ ವ್ಯಕ್ತಿ. ವೇಗವಾಗಿ ಬಂದ ಗೂಡ್ಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿ ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಗಾಯಾಳು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಪಲ್ಟಿ: ನಾಲ್ವರಿಗೆ ಗಾಯ

ನಗರದ ಯಶವಂತಪುರ ರೈಲ್ವೆ ಮೇಲ್ಸೇತುವೆ ರಸ್ತೆಯಲ್ಲಿ ಕಾರು ಪಲ್ಟಿಯಾಗಿದ್ದು ನಾಲ್ವರು ಯುವಕರು ಗಾಯಗೊಂಡಿದ್ದಾರೆ.

ಕಾರ್ಯಕ್ರಮ ಮುಗಿಸಿ ಸಂಜಯ್ ನಗರದಿಂದ ರಾಜಾಜಿನಗರಕ್ಕೆ ರಾತ್ರಿ ಯುವಕರು ವಾಪಸ್ ಆಗುವ ವೇಳೆ ಚಾಲಕ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಕೂಡಲೇ ಸಮೀಪದಲ್ಲಿದ್ದ ಆಟೊ ಚಾಲಕರು ಕಾರಿನ ಒಳಗಿದ್ದ ಯುವಕರನ್ನು ಹೊರಗೆ ಎಳೆದಿದ್ದಾರೆ.

ಯುವಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸಮೀಪದ ಆಸ್ಪತ್ರೆಗೆ ಆಟೊದಲ್ಲಿ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಯಶವಂತಪುರ ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

'ಕನ್ನಡೋತ್ಸವ'ದಲ್ಲಿ ಲೇಖಕ ಯೋಗೇಶ್ ಮಾಸ್ಟರ್

'ನೆಲ ಮೂಲದ ನುಡಿಯೇ ಮಾತೃಭಾಷೆ'

ಪ್ರಜಾವಾಣಿ ವಾರ್ತೆ



ಕೆಂಗೇರಿ ಉಪನಗರ ಸಂಘಟನಾ ಸಮಿತಿ, ಸಮಾನ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಕನ್ನಡೋತ್ಸವ –2024 ಕಾರ್ಯಕ್ರಮದಲ್ಲಿ ರಾಜೇಶ್ವರಿ ನಾಟ್ಯಾಲಯ ಕಲಾತಂಡದ ಸದಸ್ಯರು ಕಾಂತಾರ ಚಿತ್ರದ ಹಾಡಿಗೆ ಹೆಜ್ಜೆ ಹಾಕಿದರು

ಕೆಂಗೇರಿ: 'ತಾಯಿಯಾಡುವ ಭಾಷೆ ಮಾತೃಭಾಷೆಯಲ್ಲ. ಯಾವ ಭಾಷೆ ನಿರ್ದಿಷ್ಟ ನೆಲದ ಮೂಲ ನುಡಿಯಾಗಿರುವುದೋ ಅದೇ ನಿಜವಾದ ಮಾತೃಭಾಷೆ' ಎಂದು ಲೇಖಕ ಯೋಗೇಶ್ ಮಾಸ್ಟರ್ ಹೇಳಿದರು.

ಕೆಂಗೇರಿ ಉಪನಗರ ಸಂಘಟನಾ ಸಮಿತಿ, ಸಮಾನ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಕನ್ನಡೋತ್ಸವ-2024 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾಷೆಯ ವಿಷಯದಲ್ಲಿ ಶ್ರೇಷ್ಠತೆಯ ವ್ಯಸನಕ್ಕೆ ಬೀಳಬಾರದು. ಮಾತೃಭಾಷೆಯನ್ನು ಬಳಸುವ ಮೂಲಕ ಭಾಷೆಯನ್ನು ಸಮೃದ್ಧಗೊಳಿಸಬೇಕು ಎಂದು ತಿಳಿಸಿದರು.

ಅನ್ಯ ಭಾಷಿಕರು, ಅನ್ಯ ರಾಜ್ಯದವರಿಗೆ ಕನ್ನಡ ಕಲಿಸಲು ಇರುವ ಸಾತ್ವಿಕ ಸಾಧ್ಯತೆಗಳ ಬಗ್ಗೆ ಗಮನ ನೀಡಬೇಕು ಎಂದರು.

'ಕನ್ನಡ ಕಾರ್ಯಕ್ರಮ ಆಯೋಜಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳು ಕನ್ನಡಪರ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಬೇಕು' ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಾಕೀತು ಮಾಡಿದರು. ಕಾರ್ಯಕ್ರಮದ ನಿಮಿತ್ತ ಸ್ಥಳೀಯ ಪ್ರತಿಭೆಗಳಿಗೆ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.

ನಟ ಕಿಶೋರ್ ಮಾತನಾಡಿ, ಸುಸ್ಥಿರ ಬದುಕು ಕಟ್ಟಿಕೊಳ್ಳಲು ಸ್ಥಳೀಯ ಭಾಷೆ ಅತ್ಯಂತ ಅಗತ್ಯ. ಹಾಗಾಗಿ ಇತರ ಭಾಷೆಗಳನ್ನು ಪ್ರೀತಿಸುತ್ತಾ ನೆಲದ ಭಾಷೆಯನ್ನು ಉಳಿಸಿಕೊಳ್ಳೋಣ ಎಂದು ಹೇಳಿದರು.

ಚಲನಚಿತ್ರ ನಿರ್ದೇಶಕ ಅಮೋಘವರ್ಷ ಮಾತನಾಡಿದರು. ಇದೇ ವೇಳೆ ವಿದ್ವಾನ್ ವಿಜಯಲಕ್ಷ್ಮಿ, ಖ್ಯಾತ ಉದ್ಯಮಿ ರಂಗಸ್ವಾಮಿ, ದಾನಿ ಮೇರಿಯಮ್ಮ, ದೈಹಿಕ ಶಿಕ್ಷಣ ಶಿಕ್ಷಕ ಚಂದ್ರಶೇಖರ್, ಗಾಯಕ ಹಾಗೂ ಸರ್ಕಾರಿ ಅಧಿಕಾರಿ ರವಿಶೇಖರ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೈಕುಮಾರ್, ಧರ್ಮಸೇನಾ, ಪ್ರಶಾಂತ್ ಅಗೇರ, ವಾಸುದೇವ್ ಮತ್ತಿತರರು ಉಪಸ್ಥಿತರಿದ್ದರು.

ಇ ಕಾಮರ್ಸ್ 2,670 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ನಗರ ಸಂಚಾರ ವಿಭಾಗದ ಪೊಲೀಸರು ಇ ಕಾಮರ್ಸ್ ಉತ್ಪನ್ನ ತಲುಪಿಸುವ ದ್ವಿಚಕ್ರ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ 2,670 ಪ್ರಕರಣಗಳನ್ನು ದಾಖಲಿಸಿಕೊಂಡು ₹13,78,500 ದಂಡ ಕಟ್ಟಿಸಿಕೊಂಡಿದ್ದಾರೆ.

ನಗರದಾದ್ಯಂತ ಶನಿವಾರ ಸಂಚಾರ ವಿಭಾಗದ ಪೊಲೀಸರು ನಡೆಸಿದ ಕಾರ್ಯಾಚರಣೆ ವೇಳೆ ಹೆಲ್ಮೆಟ್ ಇಲ್ಲದೆ ವಾಹನ ಚಾಲನೆ, ಮೊಬೈಲ್ ಫೋನ್ ಬಳಕೆ, ಟ್ರಾಫಿಕ್ ಸಿಗ್ನಲ್ ಜಂಪ್ ಮಾಡಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

602 ಪ್ರಕರಣ: ಆ್ಯಪ್ ಆಧರಿತ ಆಹಾರ ಪೂರೈಕೆ ಮಾಡುವ ಕಂಪನಿಗಳ ಪ್ರತಿನಿಧಿಗಳಿಂದ ಸಂಚಾರ ನಿಯಮ ಉಲ್ಲಂಘನೆಯಾಗುತ್ತಿರುವುದರ ಕುರಿತು ಕಾರ್ಯಾಚರಣೆ ಕೈಗೊಂಡ ನಗರ ಪೊಲೀಸರು 692 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಎಂಟಿಸಿ ಬಸ್ ಪ್ರಯಾಣಿಕರಿಗೆ ಪುಷ್ಪ ನೀಡಿದ ಪೊಲೀಸ್ ಕಮಿಷನರ್

'ಸಾರ್ವಜನಿಕ ಸಾರಿಗೆ ಬಳಸಿ, ದಟ್ಟಣೆ ನಿವಾರಿಸಿ'

ಪ್ರಜಾವಾಣಿ ವಾರ್ತೆ



ವಿಶ್ವ ಸಾರ್ವಜನಿಕ ಸಾರಿಗೆ ದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆಟೊ ಚಾಲಕರಿಗೆ 'ಕನ್ನಡ ಉಳಿಸಿ, ಕನ್ನಡ ಬೆಳೆಸಿ' ಎಂಬ ಕರಪತ್ರಗಳನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ನೀಡಿದರು. ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್, ಡಿಸಿಪಿ ಅನಿತಾ ಹದ್ದಣನವರ್ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರು: ಸಾರ್ವಜನಿಕ ಸಾರಿಗೆ ಬಳಸುವ ಮೂಲಕ ಸಂಚಾರ ದಟ್ಟಣೆ ಹಾಗೂ ವಾಯು ಮಾಲಿನ್ಯ ಕಡಿಮೆ ಮಾಡಲು ಸಹಕರಿಸಬೇಕು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಸಾರ್ವಜನಿಕರಿಗೆ ಮನವಿ ಮಾಡಿದರು.

ಪಶ್ಚಿಮ ವಿಭಾಗದ ಸಂಚಾರ ಪೊಲೀಸರು ಮೆಜೆಸ್ಟಿಕ್ ಬಸ್ ನಿಲ್ದಾಣ ಬಳಿ ಭಾನುವಾರ ಆಯೋಜಿಸಿದ್ದ ವಿಶ್ವ ಸಾರ್ವಜನಿಕ ಸಾರಿಗೆ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ನಿತ್ಯ ಸುಮಾರು ಒಂದೂವರೆಯಿಂದ ಎರಡು ಸಾವಿರ ದ್ವಿಚಕ್ರ ವಾಹನಗಳು ಹೊಸದಾಗಿ ನೋಂದಣಿ ಆಗುತ್ತಿವೆ. ಶೇಕಡಾ 77ರಷ್ಟು ದ್ವಿಚಕ್ರ ವಾಹನಗಳು ಇವೆ. ವಾಹನಗಳ ಪಾರ್ಕಿಂಗ್ ವಹಿವಾಟು ನಡೆಸುವವರ ಹಾವಳಿಯೂ ಹೆಚ್ಚಾಗಿದೆ. ಇದರಿಂದ ಅಪಘಾತಗಳು ಹೆಚ್ಚಾಗುವ ಸಂಭವ ಇದೆ. ಖಾಸಗಿ ಕಾರು, ದ್ವಿಚಕ್ರ ವಾಹನಗಳನ್ನು ಹೆಚ್ಚು ಅವಲಂಬಿಸಿರುವ ಕಾರಣ ಸಂಚಾರ ದಟ್ಟಣೆ ಜತೆಗೆ ವಾಯು ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.

'ಖಾಸಗಿ ಸಂಚಾರ ಮಿತಿಗೊಳಿಸಿ, ಸಾರ್ವಜನಿಕ ಸಾರಿಗೆ ಉತ್ತೇಜಿಸಿ' ಎಂಬ ಅಭಿಯಾನ ಆರಂಭಿಸಿದ್ದು, ಕರಪತ್ರದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪ್ರತಿಜ್ಞೆ ಮಾಡಬೇಕು ಎಂದರು.

ಸಾರ್ವಜನಿಕ ಸಾರಿಗೆ ಸೇವೆಗಳಾದ ಕೆಎಸ್‌ಆರ್‌ಟಿಸಿ ಬಸ್, ಬಿಎಂಟಿಸಿ, ಮೆಟ್ರೊ, ಆಟೊ, ಕ್ಯಾಬ್ ಹೆಚ್ಚು ಬಳಸಬೇಕು. ಸಂಚಾರ ದಟ್ಟಣೆ ಕಡಿಮೆ ಮಾಡಲು ಪೊಲೀಸರ ಜತೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಬಡವರು ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಬಿಎಂಟಿಸಿ ನಿತ್ಯ ಲಕ್ಷಕ್ಕೂ ಅಧಿಕ ಟ್ರಿಪ್ ಸಂಚರಿಸುತ್ತಿದೆ. ಶ್ರೀಮಂತರು, ಸ್ಥಿತಿವಂತರು ಖಾಸಗಿ ವಾಹನ ಬಿಟ್ಟು ಸಾರ್ವಜನಿಕ ಸಾರಿಗೆ ಬಳಸಿದಾಗ ಸಂಚಾರ ದಟ್ಟಣೆ ಕಡಿಮೆ ಆಗಲಿದೆ. ಸಂಚಾರ ನಿಯಮ ಕುರಿತು ಜಾಗೃತಿ ಮೂಡಿಸುತ್ತಿದ್ದರೂ ಪ್ರಕರಣಗಳು ಕಡಿಮೆ ಆಗುತ್ತಿಲ್ಲ ಎಂದರು.

ಇದೇ ವೇಳೆ 'ಕನ್ನಡ ಉಳಿಸಿ, ಕನ್ನಡ ಬೆಳೆಸಿ' ಜಾಗೃತಿ ಮೂಡಿಸಲು ಆಟೊ ಚಾಲಕರಿಗೆ ಕರಪತ್ರಗಳನ್ನು ನೀಡಲಾಯಿತು. ಅನ್ಯ ಭಾಷಿಗರು ಕನ್ನಡ ಕಲಿಕೆಗೆ ಸಹಕಾರಿಯಾಗುವಂತೆ ಕರಪತ್ರದಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಅವಕಾಶ ಕಲ್ಪಿಸಲಾಗಿದೆ. ಬಿಎಂಟಿಸಿ ಬಸ್ ಪ್ರಯಾಣಿಕರಿಗೆ ಗುಲಾಬಿ ಹೂವುಗಳನ್ನು ಕಮಿಷನರ್ ನೀಡಿದರು.

ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅರುಣ್ ಕುಮಾರ್, ಬಿಎಂಟಿಸಿ ಅಧಿಕಾರಿ ವಿಲ್ಸನ್, ಡಿಸಿಪಿ ಅನಿತಾ ಹದ್ದಣನವರ್ ಪಾಲ್ಗೊಂಡಿದ್ದರು.

‘ಸಾಹಿತ್ಯಕ್ಕೆ ಕುವೆಂಪು ಕೊಡುಗೆ ಅಗಾಧ’

‘ಕನ್ನಡ ಡಿಂಡಿಮ ಉತ್ಸವ’ದಲ್ಲಿ ಎಲ್‌.ಎನ್‌. ಮುಕುಂದರಾಜ್ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಲೋಕಕ್ಕೆ ರಾಷ್ಟ್ರಕವಿ ಕುವೆಂಪು ಅವರು ಅಗಾಧವಾದ ಕೊಡುಗೆ ನೀಡಿದ್ದಾರೆ. ಅವರ ಕೊಡುಗೆಯನ್ನು ಕನ್ನಡಿಗರು ಮರೆಯಲು ಅಸಾಧ್ಯ’ ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಹೇಳಿದರು.

ಕನ್ನಡ ಡಿಂಡಿಮ ಸಮಿತಿ ಭಾನುವಾರ ವಿಧಾನಸೌಧದಲ್ಲಿ ಆಯೋಜಿಸಿದ್ದ ‘ಕನ್ನಡ ಡಿಂಡಿಮ ಉತ್ಸವ’ದಲ್ಲಿ ಭುವನೇಶ್ವರಿ ದೇವಿಯ ರಥಕ್ಕೆ ಕನ್ನಡಾರತಿ ಹಚ್ಚುವ ಮೂಲಕ ಚಾಲನೆ ನೀಡಿದರು.

‘ಕುವೆಂಪು ಅವರು ಮಕ್ಕಳ ಸಾಹಿತ್ಯದಿಂದ ಹಿಡಿದು ‘ಶ್ರೀರಾಮಾಯಣ ದರ್ಶನಂ’ವರೆಗೂ ವಿಭಿನ್ನ ರೀತಿಯ ಸಾಹಿತ್ಯ ರಚಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ’ ಎಂದರು.

‘ನಾಡಿನ ಜನತೆ ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಅಪಾರ ಪ್ರೀತಿ ಹೊಂದಿದ್ದಾರೆ. ಇದನ್ನು ಹಾಗೆಯೇ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಸರ್ಕಾರ ಮತ್ತು ಸಾಹಿತಿಗಳ ಮೇಲಿದೆ’ ಎಂದು ಹೇಳಿದರು.

ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ ಚೊಚ್ಚಲ ‘ಡಿಂಡಿಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ ಅವರು ಪ್ರಶಸ್ತಿ ಸ್ವೀಕರಿಸಿದರು.



ನಗರದ ಅರಮನೆ ಮೈದಾನದಿಂದ ವಿಧಾನಸೌಧದವರೆಗೆ ನಡೆದ ಭುವನೇಶ್ವರಿ ದೇವಿಯ ರಥೋತ್ಸವದಲ್ಲಿ ಮಹಿಳೆಯರು ಕಳಶ ಹೊತ್ತು ಸಾಗಿದರು ಪ್ರಜಾವಾಣಿ ಚಿತ್ರ

ನಗರದ ಅರಮನೆ ಮೈದಾನದಿಂದ ವಿಧಾನಸೌಧದವರೆಗೆ ನಡೆದ ಭುವನೇಶ್ವರಿ ದೇವಿಯ ರಥೋತ್ಸವ ದಲ್ಲಿ ನೂರಾರು ಜನ ಕನ್ನಡಪರ ಹೋರಾಟಗಾರರು ಪಾಲ್ಗೊಂಡಿದ್ದರು.

ಸಂತೋಷ ಭಾರತಿ ಸ್ವಾಮೀಜಿ ಉಪಸ್ಥಿತರಿದ್ದರು.

‘ಸಮಾನತೆಯ ಭಾವ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನವನ ಪ್ರಜ್ಞೆ ಜಾಗೃತವಾಗಬೇಕು. ಎಲ್ಲರೂ ಸಹಬಾಳ್ವೆ, ಸಮಾನತೆಯ ಭಾವ ಬೆಳೆಸಿಕೊಳ್ಳಬೇಕು’ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಹೇಳಿದರು.

ಭಾನುವಾರ ನಡೆದ ಕನ್ನಡ ಸಂಘರ್ಷ ಸಮಿತಿಯ 47ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಮಹೇಶ್ ಊಗಿನಹಳ್ಳಿ ಅವರಿಗೆ ‘ಕನ್ನಡ ಕಟ್ಟಾಳು’ ಹಾಗೂ ಎಂ.ವಿ. ವಿಜಯಲಕ್ಷ್ಮಿ ಅವರಿಗೆ ‘ನಿಸ್ಸೀಮ ಕನ್ನಡತಿ’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಬಹುತ್ವ ವಿಚಾರ ವಿಸ್ತಾರವಾಗುತ್ತಿದೆ. ಕನ್ನಡ ನಾಡಿನಲ್ಲಿ ಬಹಳ ಹಿಂದಿನಿಂದಲೂ ಈ ಆಲೋಚನಾ ಕ್ರಮ ಇದೆ. ಇತ್ತೀಚೆಗೆ ರಾಜಕೀಯ ಕಾರಣದಿಂದಾಗಿ ಸಹಬಾಳ್ವೆ, ಸಮಾನತೆಗೆ ಹೆಚ್ಚು ಧಕ್ಕೆ ಉಂಟಾಗುತ್ತಿದೆ’ ಎಂದು ವಿಷಾದಿಸಿದರು.

‘ನಾನೇ ಶ್ರೇಷ್ಠ ಎಂಬ ಆಲೋಚನಾ ಕ್ರಮವನ್ನು ಮೀರಿ, ಎಲ್ಲರೂ ಸಮಾನರು ಎಂಬ ಆಲೋಚನಾ ಕ್ರಮದಿಂದ ಬದುಕಬೇಕು. ಆಗ ಬದುಕು ಸಾರ್ಥಕವಾಗುತ್ತದೆ. ಬಸವಣ್ಣ, ಪಂಪ ಅವರ ಆಲೋಚನೆಯಲ್ಲಿ ವಿಶ್ವಪ್ರಜ್ಞೆ ಕಾಣುತ್ತದೆ. ಅದರಿಂದಾಗಿಯೆ ಅವರು ಆದರ್ಶವಾಗುತ್ತಾರೆ’ ಎಂದು ಅಭಿಪ್ರಾಯಪಟ್ಟರು.



ನಗರದ ಬಿ.ಎಂ.ಶ್ರೀ ಕಲಾಭವನದಲ್ಲಿ ಭಾನುವಾರ ಕನ್ನಡ ಸಂಘರ್ಷ ಸಮಿತಿಯ 47ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ದಿ. ರಹಮಾನ್‌ಖಾನ್ ಸ್ಮಾರಕ ‘ಕನ್ನಡ ಕಟ್ಟಾಳು ಪ್ರಶಸ್ತಿಯನ್ನು ಮಹೇಶ್ ಊಗಿನಹಳ್ಳಿ ಅವರಿಗೆ (ಎಡಬದಿ) ‘ನಿಸ್ಸೀಮ ಕನ್ನಡತಿ’ ಪ್ರಶಸ್ತಿಯನ್ನು ಎಂ.ವಿ. ವಿಜಯಲಕ್ಷ್ಮಿ(ಬಲಬದಿ) ಅವರಿಗೆ ಪ್ರದಾನ ಮಾಡಲಾಯಿತು. (ಎಡದಿಂದ)ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಕನ್ನಡ ಸಂಘರ್ಷ ಸಮಿತಿಯ ಕಾರ್ಯದರ್ಶಿ ಬಿ ಸಿ ಜಗದೀಶ್, ಅಧ್ಯಕ್ಷ ಎ.ಎಸ್‌.ನಾಗರಾಜಸ್ವಾಮಿ, ಸದಸ್ಯೆ ಗಾಯತ್ರಿ ರಾಮಣ್ಣ, ಪತ್ರಕರ್ತ ರಾಮಣ್ಣ ಎಚ್ ಕೋಡಿಹೊಸಹಳ್ಳಿ, ಲೇಖಕಿ ಜಯಲಕ್ಷ್ಮಿ ಪಾಟೀಲ್ ಹಾಗೂ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಲೇಖಕಿ ಜಯಲಕ್ಷ್ಮಿ ಪಾಟೀಲ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿ, ‘ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಅಗ್ರ ಸ್ಥಾನ ದೊರೆಯಬೇಕು. ಬೇರೆ ಭಾಷೆಯನ್ನು ದ್ವೇಷಿಸುವ ಅಗತ್ಯವಿಲ್ಲ. ಅಂತೆಯೇ ಮಾತೃಭಾಷೆಯನ್ನು ಕಡೆಗಣಿಸಬಾರದು. ಹಿಂದಿ ಹೇರಿಕೆಯ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ಮತ್ತೊಮ್ಮೆ ಗೋಕಾಕ್ ಚಳವಳಿಯಂತಹ ಹೋರಾಟಕ್ಕೆ ಸಿದ್ಧರಾಗಬೇಕೆನಿಸುತ್ತದೆ’ ಎಂದರು.

ಚಿಣ್ಣರ ಉತ್ಸವ 15ರಿಂದ

ಬೆಂಗಳೂರು: ಮಕ್ಕಳ ದಿನಾಚರಣೆಯ ಅಂಗವಾಗಿ ನವೆಂಬರ್ 15ರಿಂದ 17ರವರೆಗೆ ಬಾಲ ಭವನ ಚಿಣ್ಣರ ಉತ್ಸವವನ್ನು ಕಬ್ಬನ್ ಉದ್ಯಾನದಲ್ಲಿರುವ ಬಾಲ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜೋಶಿ ಸ್ಕೂಲ್ ಆಫ್ ಮ್ಯೂಸಿಕ್ ಆ್ಯಂಡ್ ಆಕ್ಟಿಂಗ್, ಸಮ್ಮತಿ ವೆಲ್ಫೇರ್ ಅಸೋಸಿಯೇಷನ್ ಸಹಯೋಗದಲ್ಲಿ ಈ ಉತ್ಸವ ಆಯೋಜಿಸಲಾಗಿದೆ. ಸಾಕು ಪ್ರಾಣಿ, ಪಕ್ಷಿಗಳ ಪ್ರದರ್ಶನ, ತೊಗಲು ಗೊಂಬೆಯಾಟ, ಮ್ಯಾಜಿಕ್ ಶೋ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ನಡೆಯಲಿವೆ. ಪುಟಾಣಿಗಳಿಗಾಗಿ ಚಿತ್ರಕಲೆ, ಹಾಡು ಹಾಗೂ ನೃತ್ಯ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 18 ವರ್ಷದೊಳಗಿನ ಮಕ್ಕಳು ಈ ಉತ್ಸವದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 99000 12073

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

‘ಪಾದಚಾರಿ ಮಾರ್ಗದಲ್ಲಿ ವ್ಯಾಪಾರ–ವಹಿವಾಟು’

ಜಯನಗರದ ನಾಲ್ಕನೇ ಬಡಾವಣೆಯ ಸಂಕೀರ್ಣ ಮಳಿಗೆಗಳ ಪಕ್ಕದಲ್ಲಿರುವ ಪಾದಚಾರಿ ಮಾರ್ಗವನ್ನು ಬೀದಿ ವ್ಯಾಪಾರಿಗಳು ಆಕ್ರಮಿಸಿಕೊಂಡು ವ್ಯಾಪಾರ–ವಹಿವಾಟು ನಡೆಸುತ್ತಿದ್ದಾರೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ಕೆಲ ದಿನಗಳ ಹಿಂದೆ ಇಲ್ಲಿ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲಾಗಿತ್ತು. ಆದರೆ ಈಗ ಮತ್ತೆ ಪಾದಚಾರಿ ಮಾರ್ಗ ಆಕ್ರಮಿಸಿಕೊಂಡಿದ್ದಾರೆ. ಇದರಿಂದ ವಾಹನ ಸಂಚಾರಕ್ಕೂ ಸಮಸ್ಯೆ ಆಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪಾದಚಾರಿ ಮಾರ್ಗವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಚ್‌.ವಿ. ಶ್ರೀಧರ್, ಎಚ್‌ಎಸ್‌ಆರ್ ಬಡಾವಣೆ





‘ತ್ಯಾಜ್ಯ ತುಂಬಿದ ಚೀಲಗಳನ್ನು ತೆರವುಗೊಳಿಸಿ’

ಉತ್ತರಹಳ್ಳಿ ಕೆಎಸ್‌ಆರ್‌ಟಿಸಿ ಬಡಾವಣೆಯ ಗಾಂಧಿ ಉದ್ಯಾನದ ಮುಂಭಾಗದಲ್ಲಿ ಪ್ರತಿದಿನ ಬಿಬಿಎಂಪಿಯ ತ್ಯಾಜ್ಯ ವಿಲೇವಾರಿ ಮಾಡುವ ಸಿಬ್ಬಂದಿ ಕಸ ತುಂಬಿದ ಚೀಲಗಳನ್ನು ಉದ್ಯಾನದ ಮುಂಭಾಗದಲ್ಲಿ ಹಾಕುತ್ತಿದ್ದಾರೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಉದ್ಯಾನಕ್ಕೆ ಬರುವ ವಾಯುವಿಹಾರಿಗಳು ಹಾಗೂ ಇದರ ಪಕ್ಕದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಬರುವ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಬಿಬಿಎಂಪಿ ಅಧಿಕಾರಿಗಳು ಉದ್ಯಾನದ ಮುಂಭಾಗದಲ್ಲಿ ಹಾಕಿರುವ ಕಸದ ಚೀಲಗಳನ್ನು ಕೂಡಲೇ ತೆರವುಗೊಳಿಸಲು ಸೂಚಿಸಬೇಕು. ಮತ್ತೆ ಇಲ್ಲಿ ಕಸ ಹಾಕದಂತೆ ಸಿಬ್ಬಂದಿಗೆ ಎಚ್ಚರಿಕೆ ನೀಡಬೇಕು.

ಎನ್‌.ಆರ್‌. ಮೂರ್ತಿ, ಉತ್ತರಹಳ್ಳಿ



‘ಕಿತ್ತು ಹೋದ ಕಾಂಕ್ರೀಟ್ ಸ್ಲ್ಯಾಬ್‌ಗಳು’

ಕೃಷ್ಣರಾಜಪುರದ ಏಳನೇ ಮುಖ್ಯರಸ್ತೆ ಬದಿಯಲ್ಲಿರುವ ಚರಂಡಿಗೆ ಹಾಕಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕಿತ್ತು ಹೋಗಿವೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಕೆಲ ದಿನಗಳ ಹಿಂದೆ ಜಲಮಂಡಳಿ ಸಿಬ್ಬಂದಿ ಪೈಪ್‌ಗಳನ್ನು ಅಳವಡಿಸಲು ಈ ಸ್ಲ್ಯಾಬ್‌ಗಳನ್ನು ಕಿತ್ತು ಹಾಕಿದ್ದರು. ಪಾದಚಾರಿಗಳ ಓಡಾಟಕ್ಕೂ ಸಮಸ್ಯೆ ಆಗಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಚರಂಡಿ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.


ಕೆ.ಎಸ್‌.ವಿಜಯ್ ಕುಮಾರ್
ಕೆ.ಆರ್‌. ಪುರ



‘ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ’

ನಾಗರಬಾವಿಯ ಮುಖ್ಯ ರಸ್ತೆಯ ಮಾರುತಿನಗರದ ಬಳಿ ಇರುವ ಮಾರುತಿ ಮಂದಿರದ ಸಮೀಪ ಕಸದ ರಾಶಿ ಬಿದ್ದಿದೆ. ಸ್ಥಳೀಯ ನಿವಾಸಿಗಳು ರಾತ್ರಿ ಸಮಯದಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ ಮನೆಯಿಂದ ತ್ಯಾಜ್ಯ ತುಂಬಿಕೊಂಡು ತಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಈ ಕಸದ ರಾಶಿಯನ್ನು ನಾಯಿ, ಬೀಡಾಡಿ ದನಗಳು ಎಳೆದು ಮುಖ್ಯರಸ್ತೆಗೆ ತರುತ್ತಿದ್ದು ವಾಹನ ಸಂಚಾರಕ್ಕೂ ತೊಂದರೆ ಆಗುತ್ತಿದೆ. ಬಿಬಿಎಂಪಿ ಸಿಬ್ಬಂದಿ ಇಲ್ಲಿನ ಕಸ ತೆರವುಗೊಳಿಸಿ, ಈ ಪ್ರದೇಶದಲ್ಲಿ ತ್ಯಾಜ್ಯ ಹಾಕದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸ್ವಚ್ಛ ಮತ್ತು ಸುಂದರ ನಗರ ನಿರ್ಮಾಣಕ್ಕೆ ಕೈ ಜೋಡಿಸಬೇಕು.

ಜಿ.ಆರ್‌.ಕೆ. ನಾಯಕ್, ನಾಗರಬಾವಿ



ಓಕ್‌ನಾರ್ತ್ ಸ್ಟೆಮ್ ಸ್ಕಾಲರ್‌ಷಿಪ್

ಓಕ್‌ನಾರ್ತ್ ಸ್ಟೆಮ್ ಸ್ಕಾಲರ್‌ಶಿಪ್ ಅಂಡ್ ಮೇಂಟೊರ್‌ಶಿಪ್ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಆರ್ಥಿಕ ಸಹಾಯ ನೀಡುವ ಗುರಿ ಹೊಂದಿದೆ.

- **ಅರ್ಹತೆ:** 12ನೇ ತರಗತಿಯಲ್ಲಿ ಉತ್ತೀರ್ಣರಾದಂತಹ ಮತ್ತು ಪ್ರಸ್ತುತ ಸರ್ಕಾರಿ ಕಾಲೇಜುಗಳು / ವಿಶ್ವವಿದ್ಯಾಲಯಗಳಲ್ಲಿ ಸ್ಟೆಮ್-ಸಂಬಂಧಿತ ವಿಷಯಗಳಲ್ಲಿ ಪದವಿ ಅಧ್ಯಯನ (ಯಾವುದೇ ವರ್ಷ) ಮಾಡುತ್ತಿರುವಂತಹ ವಿದ್ಯಾರ್ಥಿನಿಯರು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಸೇರಿ₹ 3.5 ಲಕ್ಷಕ್ಕಿಂತ ಕಡಿಮೆ ಇರಬೇಕು. ಅಭ್ಯರ್ಥಿಯು ಗಳಿಸಿದ ಒಟ್ಟು ಅಂಕಗಳು 12ನೇ ತರಗತಿಯ (ಅಥವಾ ತತ್ಸಮಾನ) ಪರೀಕ್ಷೆಯಲ್ಲಿ ಶೇ 80 ಅಥವಾ ಅದಕ್ಕಿಂತ ಹೆಚ್ಚಿರಬೇಕು.
- **ಆರ್ಥಿಕ ಸಹಾಯ:** ₹ 30,000 (ನಿಗದಿತ ಮೊತ್ತ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 18-11-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/ONSS3

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

18) ಭಾರತ ಸರ್ಕಾರದ ಕಾಯ್ದೆ–1858ರ ಪ್ರಕಾರ ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿಲಾಯಿತು.. ವೈಸರಾಯ್ ಆಗಿ ....ನೇಮಕಗೊಂಡರು.

ಉತ್ತರ ;– ಲಾರ್ಡ್ ಕ್ಯಾನಿಂಗ್

19) ಮೊಟ್ಟಮೊದಲ ಬಾರಿಗೆ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು ....

ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

20) 1909 ಭಾರತೀಯ ಪರಿಷತ್ ಕಾಯ್ದೆ ಪ್ರಕಾರ ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ ....ಕ್ಕೆ ಹೆಚ್ಚಿಸಲಾಯಿತು.

ಉತ್ತರ:– 60

21) 1770ರ ದಶಕದಲ್ಲಿ ....ಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಹೀಗಾಗಿ ಅದನ್ನು ಎದುರಿಸಲು ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು.

ಉತ್ತರ:– ಭೀಕರ ಕ್ಷಾಮ

22) 1919 ಭಾರತೀಯ ಪರಿಷತ್ ಕಾಯ್ದೆ ಪ್ರಕಾರ ಕೇಂದ್ರದಲ್ಲಿ .... ರಚನೆಗೆ ಅವಕಾಶ ನೀಡಲಾಯಿತು.

ಉತ್ತರ:– ದ್ವಿಸದನ ಶಾಸಕಾಂಗ (Bi-Cameral)

23) ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ .... ಕಾನೂನು ಅನುಸಾರ ವಿಚಾರಣೆ ನಡೆಸಲಾಗುತಿತ್ತು

ಉತ್ತರ:– ಇಸ್ಲಾಂ ಕಾನೂನುಗಳ

24) .... ಕಾಯ್ದೆಯ ಪ್ರಕಾರ ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

ಉತ್ತರ:– 1935ರ ಭಾರತ ಸರ್ಕಾರ

25) 1857ರ ಘಟನೆಯ ನಂತರ ಪೀಲ್ ಸಮಿತಿ ಶಿಫಾರಸ್ಸುಗಳ ಆಧಾರದ ಮೇಲೆ............ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು

ಉತ್ತರ:– ಸೈನಿಕ

26) 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ .... ಕೊಟ್ಟ ವರದಿಯ ಗುರಿಯು "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು.

ಉತ್ತರ:– ಮೆಕಾಲೆಯು

27) ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ .... ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

ಉತ್ತರ:– ಬಂಗಾಳ ಮತ್ತು ಬಿಹಾರ

28) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ....

ಉತ್ತರ:– ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

29) ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ....ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.

ಉತ್ತರ:– ಬಾರಮಹಲ್

30) ರೈತುವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ............ನು ಜಾರಿಗೊಳಿಸಿದನು

ಉತ್ತರ:– ಥಾಮಸ್ ಮನ್ರೊ

31) 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಕಾರ ಕೇಂದ್ರ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು ....ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದರು

ಉತ್ತರ:– ಮೂರು

32) .... ಪದ್ಧತಿಯಲ್ಲಿ ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.

ಉತ್ತರ:– ರೈತವಾರಿ

33) ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು........................

ಉತ್ತರ:– ಜೊನಾಥನ್ ಡಂಕನ್

34) ಬ್ರಿಟಿಷರು ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೆ..................ನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಲಾಗಿತ್ತು

ಉತ್ತರ:– ಮೆಕಾಲೆ

35) ....ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು

ಉತ್ತರ:– ಸರ್ ಚಾರ್ಲ್ಸ್ ವುಡ್ಸ್ ಆಯೋಗ

ಬಹು ಆಯ್ಕೆ ಪ್ರಶ್ನೆಗಳು

1) ದಳವಾಯಿ ಕಾರುಗಳ್ಳಿಯ ಮಾರನಾಯಕನ ಕಾಟದಿಂದ ಬಿಡುಗಡೆ ನೀಡಿ ಶ್ರೀರಂಗಪಟ್ಟಣದ ಮಾಂಡಲಿಕನ ರಾಣಿಗೆ ಸಹಾಯ ಮಾಡಿದ ಯದುರಾಯರು ಎಲ್ಲಿಂದ ಬಂದಿದ್ದರು?

ಎ) ಪುಣೆ ಬಿ) ದ್ವಾರಕಾ
ಸಿ) ಅಯೋಧ್ಯೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಬಿ

2) ಯದುರಾಯರಿಂದ ಜಯಚಾಮರಾಜ ಒಡೆಯರ್‌ವರೆಗೆ .... ಅರಸರುಗಳು ಆಳಿದರು.

ಎ) 25 ಬಿ) 30
ಸಿ) 40 ಡಿ) 60

ಉತ್ತರ:– ಎ

3) ಶ್ರೀರಂಗಪಟ್ಟಣವನ್ನು ವಿಜಯನಗರದ ರಾಜ ಪ್ರತಿನಿಧಿಯಿಂದ ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿದರು. ಸುತ್ತಮುತ್ತಲಿನ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ತನ್ನ ರಾಜ್ಯ ವಿಸ್ತರಿಸಿದವರು. ಇವರು ಯಾರು?

ಎ) ಚಿಕ್ಕದೇವರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ

ಉತ್ತರ:– ಬಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHEMATICS

APPLICATIONS OF DERIVATIVES

MAXIMA AND MINIMA

22. Find for what values of x, the function $x^3-9x^2+24x+7$ is - (i) increasing; (ii) decreasing and (iii) stationary

(......Contd)

For all the values of x such that $x>4$ (or) $x<2$ the function is increasing

(ii) For f(x) to be decreasing, $f'(x)$ should be lesser than 0

$$\therefore 3(x-2)(x-4)<0$$
$$\Rightarrow (x-2)(x-4)<0$$

$(x-2)>0$ & $(x-4)<0$; i.e, $x<4$ (or) $x>2$

$$\Rightarrow 2<x<4;$$

thus for all x the function is decreasing.

(iii) For f(x) to be stationary, $f'(x)$ should be equal to 0

$$\therefore 3(x-2)(x-4)=0$$
$$\Rightarrow (x-2)(x-4)=0$$

$\therefore$ x=2 & x=4; thus at this condition the function is stationary.

23. Write the working rule to find the maxima and minima.

Soln:- **The following are the rules to find the maxima and minima –**

(1) Let f(x) be a given function, first find $f'(x)$

(2) Solve $f'(x) = 0$. The roots of this equation are called the stationary or the critical values of f(x). Let 'a' be one of its roots so that so that $f'(a) = 0$

(3) Find $f''(x)$ and evaluate $f''(a)$

(4) If $f''(a) < 0$ then f (x) has a maximum at x = a

(5) If $f''(a) > 0$ then f (x) has a minimum at x = a

(6) If $f''(a) = 0$ then f(x) has neither a maximum nor a minimum at x = a. Such a point is called the point of inflexion.

24. Find the maximum value of $7-3x-2x^2$.

Soln: - **Given y =** $7-3x-2x^2$ **..........(1)**

$$\frac{dy}{dx}=-3-4x \text{ and } \frac{d^2y}{dx^2}=-4$$

For the function to be maximum,

$$\frac{dy}{dx}=0 \text{ i.e.,} -3-4x=0 \Rightarrow x=-\frac{3}{4}$$

At $x=-\frac{3}{4}$; $\frac{dy}{dx}=0$ and $\frac{d^2y}{dx^2}<0$

At $x=-\frac{3}{4}$; the function is maximum.

Putting $x=-\frac{3}{4}$ in (1), we get

$$y_{max}=7-3\left(-\frac{3}{4}\right)-2\left(-\frac{3}{4}\right)^2$$
$$y_{max}=7+\frac{9}{4}-\frac{9}{8}=\frac{65}{8}$$

25. Find the maximum value of $3x-x^2$.

Soln:- **Given y =** $3x-x^2$ **..............(1)**

$$\frac{dy}{dx}=3-2x \text{ and } \frac{d^2y}{dx^2}=-2$$

For the function to be maximum,

$$\frac{dy}{dx}=0 \text{ i.e., } 3-2x=0 \Rightarrow x=\frac{3}{2}$$

At $x=\frac{3}{2}$; $\frac{dy}{dx}=0$ and $\frac{d^2y}{dx^2}<0$

$\therefore$ At $x=\frac{3}{2}$, the function is maximum

Putting $x=\frac{3}{2}$ in (1) we have,

$$y_{max}=3\left(\frac{3}{2}\right)-\left(\frac{3}{2}\right)^2=\frac{9}{2}-\frac{9}{4}=\frac{9}{4}$$

26. Show that x^x is minimum at $x=\frac{1}{e}$

Soln:- Let $y=x^x$

$$\Rightarrow \log y = x \log x$$

Differentiating both the sides w.r.t x,

$$\frac{1}{y}\frac{dy}{dx}=x.\frac{1}{x}+\log x$$
$$\Rightarrow \frac{dy}{dx}=y(1+\log x)$$

For maxima (or) minima, $\frac{dy}{dx}=0$

$$\Rightarrow y(1+\log x)=0 \Rightarrow 1+\log x=0$$
$$\Rightarrow \log_e x=-1 \Rightarrow x=e^{-1}$$

Now, $\frac{dy}{dx}=y\,(1+\log x)$

$$\Rightarrow \frac{d^2y}{dx^2}=y\left(\frac{1}{x}\right)+(1+\log x)\frac{dy}{dx}$$

Substituting the value of $x=\frac{1}{e}$, in the above equation we get,

$$\Rightarrow \left(\frac{d^2y}{dx^2}\right)_{x=\frac{1}{e}}=\left(\frac{1}{e}\right)^{\frac{1}{e}}.e+[1+(-1)]\left(\frac{dy}{dx}\right)_{x=\frac{1}{e}}$$

$$\left(\because \log\frac{1}{e}=-1 \text{ and as } e>0, \left(\frac{1}{e}\right)^{\frac{1}{e}}>0\right)$$

(Contd......)

ಬಿವೈಪಿಎಲ್ ಸಶಕ್ತ್ ಸ್ಕಾಲರ್‌ಷಿಪ್

ಸಮಾಜದ ಹಿಂದುಳಿದ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಿಎಸ್‌ಇಎಸ್ ಯಮುನಾ ಪವರ್ ಲಿಮಿಟೆಡ್ ನೀಡುವ ನೆರವು ಇದಾಗಿದೆ. ಉನ್ನತ ಶಿಕ್ಷಣವನ್ನು ಮುಂದುವರಿಸಬೇಕೇ ಅಥವಾ ಉದ್ಯೋಗ ಪಡೆಯಬೇಕೇ ಎಂದು ತಮ್ಮ ಜೀವನದಲ್ಲಿ ನಿರ್ಧರಿಸುವ ಹಂತದಲ್ಲಿ ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ನೀಡಲಿದೆ.

- **ಅರ್ಹತೆ:** ಸರ್ಕಾರಿ ಕಾಲೇಜಿನಲ್ಲಿ ಕಲಿಯುತ್ತಿರಬೇಕು. ಕೊನೆಯ ಪರೀಕ್ಷೆಯಲ್ಲಿ ಕನಿಷ್ಠ ಶೇ 55ರಷ್ಟು ಅಂಕ ಪಡೆದಿರಬೇಕು. ವಾರ್ಷಿಕ ಆದಾಯ ₹ 6,00,000ವನ್ನು ಮೀರಬಾರದು.
- **ಆರ್ಥಿಕ ಸಹಾಯ:** ₹ 30,000ದವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 14-11-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/BYPL5

'ಶ್ರೀಮತಿ ಶ್ಯಾಮ್ ಲತಾ ಗರ್ಗ್' ಇಂಡಿಯಾ ಸ್ಕಾಲರ್‌ಷಿಪ್

ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡಲು ಸ್ವಾಮಿ ದಯಾನಂದ್ ಎಜುಕೇಶನ್ ಫೌಂಡೇಷನ್ (ಎಸ್‌ಡಿಇಎಫ್)ನ ಉಪಕ್ರಮವಾಗಿದೆ.

- **ಅರ್ಹತೆ:** ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳು ಅವಕಾಶ ನೀಡುವ ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ ಸೇರಿ ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. 12ನೇ ತರಗತಿಯಲ್ಲಿ ಸಿಬಿಎಸ್‌ಸಿ ಬೋರ್ಡ್‌ನಲ್ಲಿಯಾದರೆ ಕನಿಷ್ಠ ಶೇ 80 ಅಥವಾ ಇತರ ಬೋರ್ಡ್‌ಗಳಲ್ಲಿಯಾದರೆ ಶೇ 70 ಅಥವಾ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಎರಡನೆಯ ವರ್ಷದ ವಿದ್ಯಾರ್ಥಿಗಳಿಗೆ ಕನಿಷ್ಠ 8.0 ಸಿಜಿಪಿಎ ಅವಶ್ಯಕ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 8 ಲಕ್ಷವನ್ನು ಮೀರಬಾರದು.
- **ಆರ್ಥಿಕ ಸಹಾಯ:** 2500ಕ್ಕಿಂತ ಒಳಗಿನ ಎಐಆರ್ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ₹ 50,000 ಮೊತ್ತದ ವಿದ್ಯಾರ್ಥಿವೇತನ.
- 2501ರಿಂದ 5,000ದೊಳಗಿನ ಎಐಆರ್ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ₹ 40,000 ಮೊತ್ತದ ವಿದ್ಯಾರ್ಥಿವೇತನ.
- 5,001ರಿಂದ 7500ರೊಳಗಿನ ಎಐಆರ್ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ₹ 30,000 ಮೊತ್ತದ ವಿದ್ಯಾರ್ಥಿವೇತನ.
- 7500ರ ಮೇಲಿನ ಎಐಆರ್ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ₹ 20,000 ಮೊತ್ತದ ವಿದ್ಯಾರ್ಥಿವೇತನ.
- ಬಿ.ಎ., ಬಿ.ಎಸ್‌ಸಿ, ಬಿ.ಕಾಂ, ಬಿಬಿಎ ಇತ್ಯಾದಿಯಂತಹ ನಾನ್-ಟೆಕ್ನಿಕಲ್ ಕೋರ್ಸ್‌ಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ₹ 10,000 ಮೊತ್ತದ ವಿದ್ಯಾರ್ಥಿವೇತನವನ್ನು ನೀಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-12-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/SDEFSL1

ವಿದ್ಯಾರ್ಥಿ ವೇತನ ಕೈಪಿಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ


ಪ್ರದೀಪ್ ಕುಮಾರ್ ವಿ.

ಎಂಬಿಬಿಎಸ್ ಸಿಗದೇ ಇದ್ದರೆ ಏನು ಮಾಡಬಹುದು?

1. ನಾನು ದ್ವಿತೀಯ ಪಿಯು ಓದುತ್ತಿದ್ದು, ಮುಂದೆ ಎಂಬಿಬಿಎಸ್ ಮಾಡುವ ಇಚ್ಛೆಯಿದೆ. ಸರ್ಕಾರಿ ಸೀಟ್ ಸಿಗುವ ಖಾತರಿ ಇಲ್ಲದೇ ಇರುವುದರಿಂದ, ವೈದ್ಯಕೀಯ ಸಂಬಂಧಿತ ಕ್ಷೇತ್ರದ ಬೇರೆ ಯಾವ ಕೋರ್ಸ್ ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ ನಂತರ ವೈದ್ಯಕೀಯ, ಆರೋಗ್ಯ ಮತ್ತು ಸ್ವಾಸ್ಥ್ಯ ಕ್ಷೇತ್ರದಲ್ಲಿ ವೃತ್ತಿಯನ್ನು ಅರಸಲು ಎಂಬಿಬಿಎಸ್ ಅಲ್ಲದೆ ಡೆಂಟಲ್, ಆಯುರ್ವೇದ, ನ್ಯಾಚುರೋಪಥಿ, ಹೋಮಿಯೋಪಥಿ, ಯುನಾನಿ ಸೇರಿ ವೈವಿಧ್ಯಮಯ ಅವಕಾಶಗಳಿವೆ.



- **ಬಿ.ಎಸ್ಸಿ (ಪ್ಯಾರಮೆಡಿಕಲ್):** ಮೆಡಿಕಲ್ ಸೈನ್ಸ್, ಲ್ಯಾಬೋರೇಟರಿ ಟೆಕ್ನಾಲಜಿ, ಇಮೇಜಿಂಗ್ ಟೆಕ್ನಾಲಜಿ, ಅನಸ್ತೇಷಿಯಾ ಟೆಕ್ನಾಲಜಿ, ಆಪರೇಷನ್ ಥಿಯೇಟರ್ ಟೆಕ್ನಾಲಜಿ, ಡಯಾಲಿಸಿಸ್ ಟೆಕ್ನಾಲಜಿ, ಹಾಸ್ಪಿಟಲ್ ಮ್ಯಾನೇಜ್‌ಮೆಂಟ್, ರೇಡಿಯಾಲಜಿ, ನ್ಯೂಕ್ಲಿಯರ್ ಮೆಡಿಸಿನ್ ಟೆಕ್ನಾಲಜಿ, ಕಾರ್ಡಿಯಾಕ್ ಟೆಕ್ನಾಲಜಿ, ನರ್ಸಿಂಗ್, ಡಯಟಿಕ್ಸ್, ಫಿಸಿಯೊಥೆರಪಿ, ಸ್ಪೋರ್ಟ್ಸ್ ಸೈನ್ಸ್ ಸೇರಿ 20ಕ್ಕೂ ಹೆಚ್ಚಿನ ಕ್ಷೇತ್ರಗಳಲ್ಲಿ ಬಿ.ಎಸ್ಸಿ (ಪ್ಯಾರಮೆಡಿಕಲ್) ಕೋರ್ಸ್ ಮಾಡಬಹುದು.
- **ಬಿಫಾರ್ಮಾ ಕೋರ್ಸ್:** ರಾಸಾಯನಿಕ ವಿಜ್ಞಾನ, ಆರೋಗ್ಯ, ಔಷದೋಪಚಾರ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಬೇಡಿಕೆಯಲ್ಲಿರುವ ಕ್ಷೇತ್ರದಲ್ಲಿ ವೃತ್ತಿಯನ್ನು ಅರಸಲು ಬಿಫಾರ್ಮಾ ಮಾಡಬಹುದು.
- ವಿಜ್ಞಾನ, ಅನ್ವಯಿಕ ವಿಜ್ಞಾನ ಮತ್ತು ಸಂಶೋಧನೆ: ಈ ಕ್ಷೇತ್ರಗಳಲ್ಲಿ ಆಸಕ್ತಿಯಿದ್ದರೆ ಬಿ.ಎಸ್ಸಿ ಕೋರ್ಸ್ ಅನ್ನು ಬಯಾಲಜಿ, ಬಯೋಕೆಮಿಸ್ಟ್ರಿ, ಬಯೋಟೆಕ್ನಾಲಜಿ, ಬಯೋಇನ್‌ಫರ್ಮ್ಯಾಟಿಕ್ಸ್, ಮೈಕ್ರೊಬಯಾಲಜಿ, ಕ್ಲಿನಿಕಲ್ ರಿಸರ್ಚ್, ಜೆನೆಟಿಕ್ಸ್, ಸೈಕಾಲಜಿ, ಕ್ರಿಮಿನಾಲಜಿ, ಫೊರೆನ್ಸಿಕ್ ಸೈನ್ಸ್, ಕೌನ್ಸೆಲಿಂಗ್, ಪರಿಸರ ವಿಜ್ಞಾನ ಕ್ಷೇತ್ರಗಳಲ್ಲಿ ಮಾಡಿ ವೃತ್ತಿಯನ್ನು ಅರಸಬಹುದು.

2. ನಾನು ಪಿಯು ನಂತರ ಬಿಸಿಎ ಮಾಡಲು ಇಚ್ಛಿಸಿದ್ದೇನೆ. ಈ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯ ಪಥದಲ್ಲಿರುವ ಕ್ಷೇತ್ರ. ಹಾಗಾಗಿ, ಬಿಸಿಎ ಪದವೀಧರರಿಗೆ ಬೇಡಿಕೆ ಇದೆ. ನಾಲ್ಕು ವರ್ಷದ ಬಿಸಿಎ ಕೋರ್ಸ್‌ನಲ್ಲಿ ವೃತ್ತಿಪರ ಇಂಗ್ಲಿಷ್, ಗಣಿತ, ಸಂಖ್ಯಾವಿಜ್ಞಾನ, ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಂಬಂಧಿತ ವಿಷಯಗಳನ್ನು ಕಲಿಸಲಾಗುತ್ತದೆ. ಡೇಟಾ ಸೈನ್ಸ್, ಎಐ, ಎಂಎಲ್, ಸೈಬರ್ ಸೆಕ್ಯುರಿಟಿ, ಕ್ಲೌಡ್ ಕಂಪ್ಯೂಟಿಂಗ್ ಮುಂತಾದ ವಿಷಯಗಳಲ್ಲಿ, ನಿಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೋರ್ಸ್ ಮಾಡಬಹುದು. ಕ್ಯಾಂಪಸ್ ನೇಮಕಾತಿಯಿರುವ ಕಾಲೇಜಿನಲ್ಲಿ ಬಿಸಿಎ ಮಾಡುವುದರಿಂದ ವೃತ್ತಿಯನ್ನು ಆರಂಭಿಸಲು ಸುಲಭವಾಗುತ್ತದೆ. ನೀವು ಸೇರಬಯಸುವ ಕಾಲೇಜನ್ನು ಅವಲಂಬಿಸಿ ಪ್ರವೇಶ ನೇರವಾಗಿಯೂ ಕೆಲವೊಮ್ಮೆ ಪ್ರವೇಶ ಪರೀಕ್ಷೆಯ ಮುಖಾಂತರವೂ ಆಗುತ್ತದೆ.



ಸಂಕ್ಷಿಪ್ತ ಸುದ್ದಿ

‘ಪ್ರತಿ ತಿಂಗಳ 3ನೇ ಶನಿವಾರ ಕುಂದುಕೊರತೆ ಸಭೆ’

ಬೆಂಗಳೂರು: ‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಪ್ರತಿ ತಿಂಗಳ ಮೂರನೇ ಶನಿವಾರ



ಬೆಂಗಳೂರಿನಲ್ಲಿರುವ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸಭೆ ನಡೆಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಗ್ರಾಮ ಪಂಚಾಯತಿ ನೌಕರರ ವಿವಿಧ ಸಂಘಟನೆಗಳ ಜಂಟಿ ಸಭೆಯಲ್ಲಿ ನೀಡಿದ್ದ ಭರವಸೆಯಂತೆ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

‘ಪ್ರತಿ ತಿಂಗಳ ಮೂರನೇ ಶನಿವಾರ ಮಧ್ಯಾಹ್ನ 3 ಗಂಟೆಗೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಈ ಕುಂದುಕೊರತೆ ಸಭೆ ಆಯೋಜಿಸಲು ನಿರ್ಧರಿಸಲಾಗಿದೆ’ ಎಂದು ಪಂಚಾಯತ್ ರಾಜ್ ಇಲಾಖೆಯ ಆಯುಕ್ತರಾದ ಡಾ. ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.

ಸೊಪ್ಪು, ತರಕಾರಿ ಮೇಲೆ ಉಗುಳಿದ ವ್ಯಾಪಾರಿ ಬಂಧನ

ಕಾರವಾರ: ನಗರದಲ್ಲಿ ಭಾನುವಾರ ನಡೆಯುವ ಸಂತೆಯಲ್ಲಿ ತರಕಾರಿ ಮಾರಾಟದ ವೇಳೆ ಸೊಪ್ಪು, ಇತರ ತರಕಾರಿಗೆ ಎಂಜಲು ಉಗುಳಿ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕು ಕೆಳಗಿನ ನೆಗಳೂರಿನ ಅಬ್ದುಲ್ ಹಸನ್ ಸಾಬ್ (50) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಪಿಕಳೆ ರಸ್ತೆಯಲ್ಲಿ ತರಕಾರಿ ಮಾರಾಟಕ್ಕೆ ಇಟ್ಟುಕೊಂಡಿದ್ದ ವ್ಯಾಪಾರಿಯು ತರಕಾರಿಗಳಿಗೆ ನೀರು ಚಿಮುಕಿಸುವ ವೇಳೆ ಉಗುಳುತ್ತಿರುವುದನ್ನು ಕಂಡು ಅದನ್ನು ಗ್ರಾಹಕರೊಬ್ಬರು ಚಿತ್ರೀಕರಿಸಿದ್ದರು. ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ವಿವಿಧ ಹಿಂದೂ ಸಂಘಟನೆಗಳ ಪ್ರಮುಖರು ಸ್ಥಳಕ್ಕೆ ತೆರಳಿ ವ್ಯಾಪಾರಿಯನ್ನು ತರಾಟೆಗೆ ತೆಗೆದುಕೊಂಡಿದ್ದರು.

‘ವ್ಯಾಪಾರಿಯು ಕೋಮು ದ್ವೇಷ ಹರಡುವ ಸಲುವಾಗಿ ತರಕಾರಿಗಳ ಮೇಲೆ ಉಗುಳಿದ್ದಾಗಿ ಹಿಂದೂ ಪರ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆದಾರ ಮುರಳಿ ಗೋವೇಕರ ಎಂಬುವವರು ದೂರು ನೀಡಿದ್ದರು. ಪ್ರಕರಣ ದಾಖಲಿಸಲಾಗಿದೆ. ವ್ಯಾಪಾರಿಯನ್ನು ಬಂಧಿಸಲಾಗಿದೆ’ ಎಂದು ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಧಿಸೂಚನೆ ಹೊರಡಿಸಿದ ನೇಮಕಾತಿ ಸ್ಥಗಿತಕ್ಕೆ ಆಗ್ರಹ

ದಾವಣಗೆರೆ: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೊಳಿಸುವವರೆಗೆ ಅಧಿಸೂಚನೆ ಹೊರಡಿಸಲಾದ ನೇಮಕಾತಿ ಪ್ರಕ್ರಿಯೆ ಕೂಡ ಸ್ಥಗಿತಗೊಳಿಸಬೇಕು. ಒಳಮೀಸಲಾತಿ ಹಂಚಿಕೆ ತೀರ್ಮಾನವಾದ ಬಳಿಕ ಮರುಪರೀಕ್ಷೆ ನಡೆಸಬೇಕು ಎಂದು ಮಾದಿಗ ಸಮುದಾಯದ ಮಠಾಧೀಶರು ಒತ್ತಾಯಿಸಿದರು.


‘ಒಳಮೀಸಲಾತಿ ಜಾರಿಗೆ ಆಯೋಗ ರಚಿಸುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. 3 ತಿಂಗಳ ಕಾಲಮಿತಿಯಲ್ಲಿ ವರದಿ ಪಡೆದು ತೀರ್ಮಾನಿಸುವುದಾಗಿ ಮುಖ್ಯಮಂತ್ರಿ ಆಶ್ವಾಸನೆ ನೀಡಿ 2 ವಾರ ಕಳೆದಿದೆ’ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

‘ಕೆಲ ನೇಮಕಾತಿಗೆ ಈಗಾಗಲೇ ಅಧಿಸೂಚನೆ ಹೊರಡಿಸಿ ಪರೀಕ್ಷೆ ಕೂಡ ನಡೆಸಲಾಗಿದೆ. ಇಂತಹ ಪರೀಕ್ಷೆ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳ್ಳಬೇಕು. ಒಳಮೀಸಲಾತಿ ವಿಚಾರ ನಿರ್ಧಾರವಾದ ಬಳಿಕ ಮರುಪರೀಕ್ಷೆ ನಡೆಸಬೇಕು’ ಎಂದು ಆದಿಜಾಂಬವ ಮಠದ ಷಡಕ್ಷರಮುನಿ ಸ್ವಾಮೀಜಿ ಆಗ್ರಹಿಸಿದರು.

ನಿಧನವಾರ್ತೆ

ಎಸ್.ಆರ್.ಕೆ. ರಾಜಬಹದ್ದೂರ್

ಗಂಗಾವತಿ: ತಾಲ್ಲೂಕಿನ ಆನೆಗೊಂದಿ ಗ್ರಾಮದ ರಾಜವಂಶಸ್ಥ ಎಸ್.ಆರ್.ಕೆ. ರಾಜಬಹದ್ದೂರ್ ಅವರು (79) ಭಾನುವಾರ ಬೆಳಿಗ್ಗೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.



ಇವರು ಮೂಲತಃ ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಮೊಗಲ್ತುರ್ ರಾಜ ಮನೆತನದವರಾಗಿದ್ದು, ಗಂಗಾವತಿ ಕ್ಷೇತ್ರದ ಮಾಜಿ ಶಾಸಕರಾಗಿದ್ದ ದಿ. ತಿರುಮಲದೇವರಾಯರ ಪುತ್ರಿ ವಿಜಯಕುಮಾರಿ ಅವರನ್ನು ವಿವಾಹವಾಗಿದ್ದರು.

1978ರಿಂದ 1983ರವರೆಗೆ ಆನೆಗೊಂದಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ, ನಂತರ 1985ರಲ್ಲಿ ಮಂಡಲ ಪಂಚಾಯತಿ ಸದಸ್ಯರಾಗಿ ಕೆಲಸ ಮಾಡಿದ್ದರು.

ಮೃತರಿಗೆ ಪುತ್ರ, ಪುತ್ರಿ ಇದ್ದಾರೆ. ಸಂಜೆ ಸಾರ್ವಜನಿಕ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ಎಂ ಸೂಚನೆ ಮೇರೆಗೆ ವಾಣಿಜ್ಯ, ಕೈಗಾರಿಕೆ ಇಲಾಖೆಗೆ ಪತ್ರ ಬರೆದಿರುವ ಸಿ.ಎಸ್


24/7 ಗಣಿಗಾರಿಕೆ: ಸುಳ್ಳು ಹೇಳಿದ ಸಿ.ಎಂ

ಹರಿಶಂಕರ್ ಆರ್.

ಬಳ್ಳಾರಿ: ‘ರಾಜ್ಯದಲ್ಲಿ ದಿನದ 24 ಗಂಟೆಯೂ ಅದಿರು ಗಣಿಗಾರಿಕೆಗೆ ಅವಕಾಶ ನೀಡುವ ಯಾವುದೇ ಪ್ರಸ್ತಾವಗಳು ಸರ್ಕಾರದ ಮುಂದಿಲ್ಲ. ಅದರ ಬಗ್ಗೆ ನನಗೆ ಗೊತ್ತೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ತೋರಣಗಲ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರು.

ಆದರೆ, ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಅಕ್ಟೋಬರ್ 30ರಂದು ವಾಣಿಜ್ಯ ಮತ್ತು ಕೈಗಾರಿಕೆ (ಗಣಿ) ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಾಲಿನಿ ರಜನೀಶ್, ‘ಜೀವವೈವಿಧ್ಯ ಮತ್ತು ವನ್ಯಜೀವಿ ಅಭಯಾರಣ್ಯಗಳನ್ನು ಹೊರತುಪಡಿಸಿ ಉಳಿದೆಡೆ ದಿನದ 24 ಗಂಟೆಗಳೂ ಗಣಿಗಾರಿಕೆ ನಡೆಸಲು ಅನುಮತಿ ನೀಡಬೇಕು. ಈ ವಿಷಯವನ್ನು ನ. 14ರಂದು ನಡೆಯಲಿರುವ ಸಚಿವ ಸಂಪುಟದ ಮುಂದೆ ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ್ದಾರೆ. ಈ ಪತ್ರ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಅರಣ್ಯ ಇಲಾಖೆ ವಿರೋಧ: ಇದಕ್ಕೂ ಹಿಂದೆ ಅಕ್ಟೋಬರ್ 5ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದಿದ್ದ ವಿವಿಧ ಇಲಾಖೆಗಳ ಸಭೆಯಲ್ಲಿ 24 ಗಂಟೆ ಗಣಿಗಾರಿಕೆ ನಡೆಸುವ, ಅದಿರು ಸಾಗಿಸುವ ಕುರಿತು ‘ಭಾರತೀಯ ಖನಿಜ ಕೈಗಾರಿಕೆಗಳ ಒಕ್ಕೂಟ (ಫಿಮಿ)’ ಪ್ರಸ್ತಾಪ ಬಂದಿತ್ತು. ದೇಶದ ಇತರ ಭಾಗಗಳಲ್ಲಿ 24 ಗಂಟೆ ಅದಿರು ಸಾಗಣೆಗೆ ಅವಕಾಶವಿದೆ. ಇಲ್ಲಿಯೂ ಅದು ಜಾರಿಗೆ ಬರಬೇಕು ’ ಎಂದು ಫಿಮಿ ಹೇಳಿತ್ತು. ಈ ದಾಖಲೆಗಳೂ ‘ಪ್ರಜಾವಾಣಿ’ಗೆ ಸಿಕ್ಕಿವೆ.



24 ಗಂಟೆ ಅದಿರು ಸಾಗಿಸುವ ಕುರಿತು ಮುಖ್ಯಮಂತ್ರಿ ನಿರ್ದೇಶನದ ಮೇರೆಗೆ ಸರ್ಕಾರದ ವಿವಿಧ ಇಲಾಖೆಗಳಿಗೆ ಪತ್ರ ಬರೆದಿದ್ದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್



ಸಂಡೂರಿನ ಕಬ್ಬಿಣ ಅದಿರಿನ ಗಣಿಯೊಂದರ ಚಿತ್ರ

ಸಭೆಯಲ್ಲಿ ವಿಷಯದ ಕುರಿತು ವಿಸ್ತೃತ ಚರ್ಚೆಗಳಾಗಿದ್ದವು. ಈ ವಿಷಯಕ್ಕೆ ಅರಣ್ಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿತ್ತು. ದಿನದ 24 ಗಂಟೆ ಗಣಿಗಾರಿಕೆ, ಅದಿರು ಸಾಗಣೆ ಮಾಡುವುದರಿಂದ ವನ್ಯಜೀವಿಗಳಿಗೆ ತೊಂದರೆ ಆಗುತ್ತದೆ ಎಂದು ಬಳ್ಳಾರಿಯ ಅರಣ್ಯ ಉಪ ಸಂರಕ್ಷಣಾಧಿಕಾರಿ ವರದಿ ನೀಡಿರುವುದಾಗಿಯೂ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಸಭೆಗೆ ತಿಳಿಸಿದ್ದರು. ಅಲ್ಲದೇ, ಜಿಲ್ಲಾ ಕಾರ್ಯಪಡೆಯ ವರದಿಯನ್ನೂ ಸಭೆಗೆ ಸಲ್ಲಿಸಿದ್ದರು. ಜತೆಗೆ ಸುಪ್ರೀಂ ಕೋರ್ಟ್ ನೇಮಿಸಿರುವ ಮೇಲುಸ್ತುವಾರಿ ಸಮಿತಿಯ ಅಭಿಪ್ರಾಯವನ್ನೂ ಕೇಳಬೇಕು ಎಂದು ಸಲಹೆ ನೀಡಿದ್ದರು.

ಆದರೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯೂ ಇದಕ್ಕೆ ಸಹಮತ ನೀಡಿತ್ತು. ‘ದಿನದ 24 ಗಂಟೆ ಗಣಿಗಾರಿಕೆ ನಡೆಸುವುದರಿಂದ ರಾಜ್ಯಕ್ಕೆ ಆದಾಯ ಬರುತ್ತದೆ. ಒಡಿಶಾ, ಜಾರ್ಖಂಡ್‌ನಲ್ಲಿ ದಿನದ 24 ಗಂಟೆ ಗಣಿಗಾರಿಕೆ ನಡೆಯುತ್ತಿದೆ. ಅದನ್ನು ನಾವು ಗಮನಿಸಬೇಕು‘ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಹೇಳಿದ್ದರು. ಅಂತಿಮವಾಗಿ ಈ ವಿಷಯದಲ್ಲಿ ಮೇಲುಸ್ತುವಾರಿ ಸಮಿತಿಯ ಅಭಿಪ್ರಾಯ ಕೇಳಬೇಕಾಗಿಯೂ, ಒಡಿಶಾ ಮತ್ತು ಜಾರ್ಖಂಡ್‌ಗೆ ಅಧಿಕಾರಿಗಳ ತಂಡವನ್ನು ಕಳುಹಿಸಿ, ಅಲ್ಲಿನ ವ್ಯವಸ್ಥೆ ಅಧ್ಯಯನ ಮಾಡಬೇಕಾಗಿಯೂ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಅರಣ್ಯ ಇಲಾಖೆಯ ಅಧಿಕಾರಿಗಳ ಒಂದು ತಂಡ ಒಡಿಶಾ ಮತ್ತು ಜಾರ್ಖಂಡ್‌ನ ಗಣಿಗಳಿಗೆ ಭೇಟಿ ನೀಡಿ, ಅಧ್ಯಯನ ನಡೆಸಿ ಇತ್ತೀಚೆಗಷ್ಟೇ ರಾಜ್ಯಕ್ಕೆ ಹಿಂತಿರುಗಿದೆ. ಈ ತಂಡ ಇನ್ನೂ ತನ್ನ ವರದಿ ನೀಡಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ. ಇದಿಷ್ಟೇ ಅಲ್ಲ, ಅದಿರು ಸಾಗಣೆಗೆ ‘ಮ್ಯಾನ್ಯುವಲ್ ಪರ್ಮಿಟ್’ ನೀಡುವುದನ್ನು ರದ್ದುಪಡಿಸಬೇಕು ಎಂದೂ ಆ ಸಭೆಯಲ್ಲಿ ಪ್ರತಿಪಾದಿಸಲಾಗಿತ್ತು. ಆದರೆ, ಈ ವ್ಯವಸ್ಥೆ ಜಾರಿಯಾಗಿದ್ದು ಲೋಕಾಯುಕ್ತ ವರದಿಯ ಆಧಾರದಲ್ಲಿ. ಆದ್ದರಿಂದ ವಿಷಯದ ಕುರಿತ ಚರ್ಚೆಯನ್ನು ಒಂದಷ್ಟು ದಿನದ ವರೆಗೆ ಮುಂದೂಡಲು ಸಭೆಯಲ್ಲಿ ನಿರ್ಧರಿಸಲಾಗಿತ್ತು.

‘ಅರಣ್ಯ ಉತ್ಪನ್ನ ಅಲ್ಲ’

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೂ ಪತ್ರ ಬರೆದಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ, ‘ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸಬಾರದೆಂದು ಕಾಯ್ದೆ ತಿದ್ದುಪಡಿಗೆ ಪ್ರಸ್ತಾವನೆ ಮಂಡಿಸಬೇಕು’ ಎಂದೂ ಸೂಚಿಸಿದ್ದಾರೆ.

ದಿನದ 24 ಗಂಟೆ ಗಣಿಗಾರಿಕೆ ನಡೆಸುವ, ಅದಿರು ಸಾಗಿಸುವ ಪ್ರಸ್ತಾವ ಇಲ್ಲ. ಅದಿರು ಅರಣ್ಯ ಉತ್ಪನ್ನ ಅಲ್ಲ ಎಂಬ ಕುರಿತು ಮಾಹಿತಿ ಸಂಗ್ರಹಿಸಿ ಬಳಿಕ ಈ ಬಗ್ಗೆ ಮಾತನಾಡುತ್ತೇನೆ

ಈಶ್ವರ ಖಂಡ್ರೆ, ಅರಣ್ಯ ಸಚಿವ

‘ಉಪಸಮಿತಿ ವರದಿ ನಂತರ ಸತ್ಯ ಬಹಿರಂಗ’

ಕೋವಿಡ್ ಅವ್ಯವಹಾರ: ಡಿ.ಕುನ್ಹಾ ಆಯೋಗದ ವರದಿ ಅಧ್ಯಯನ– ಸಿ.ಎಂ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೋವಿಡ್ ಸಂದರ್ಭದಲ್ಲಿ ನಡೆದಿರುವ ಅವ್ಯವಹಾರದ ಕುರಿತು ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹಾ ನೇತೃತ್ವದ ಆಯೋಗ ನೀಡಿರುವ ವರದಿಯನ್ನು ಸಂಪುಟ ಉಪಸಮಿತಿ ಅಧ್ಯಯನ ಮಾಡುತ್ತಿದೆ. ಉಪಸಮಿತಿ ವರದಿ ಬಂದ ನಂತರ ಸಂಪುಟ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಗೊಡ್ಡು ಬೆದರಿಕೆಗೆ ಹೆದರಲ್ಲ’ ಎನ್ನುವ ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಭಾನುವಾರ ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ‘ಇದ್ಯಾವುದೂ ಗೊಡ್ಡು ಬೆದರಿಕೆಯಲ್ಲ. ಆಯೋಗವೊಂದನ್ನು ತನಿಖೆಗೆ ರಚಿಸಿ, ಅದು ನೀಡಿದ




ವರದಿ ಆಧಾರದ ಮೇಲೆಯೇ ಸಂಪುಟ ಉಪಸಮಿತಿಯ ಸಚಿವ ದಿನೇಶ ಗುಡೂರಾವ್ ಪ್ರತಿಕ್ರಿಯೆ ನೀಡಿದ್ದು ಮುಂದಿನ ದಿನಗಳಲ್ಲಿ ಕ್ರಿಮಿನಲ್ ವಿಚಾರಣೆ ಆರಂಭವಾದಾಗ ಅವರ ನಿಜಬಣ್ಣ ಬಯಲಾಗಲಿದೆ’ ಎಂದರು.

‘ನ್ಯಾಯಾಂಗದ ಬಗ್ಗೆ ನಂಬಿಕೆಯಿದೆ’ ಎನ್ನುವ ಯಡಿಯೂರಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ,‘ನ್ಯಾಯಾಂಗ ಯಡಿಯೂರಪ್ಪ ಅವರಿಗೆ ಮಾತ್ರ ಇದೆಯೇ? ಅದು ಇರುವುದು ನ್ಯಾಯ ಕೊಡುವುದಕ್ಕೆ, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲು. ತಪ್ಪು ಅಂತ ಸಾಬೀತಾದ ಮೇಲೆ ಯಡಿಯೂರಪ್ಪ ಏನು ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ಕೋವಿಡ್‌ನಲ್ಲೂ ಲೂಟಿ ಮಾಡಿದವರು ಬೇಕಾ?’: ಹಾವೇರಿ ವರದಿ: ಕೋವಿಡ್ ಸಂದರ್ಭದಲ್ಲೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಶ್ರೀರಾಮುಲು, ಸುಧಾಕರ್ ಅವರು ಚೀನಾ ಜೊತೆ ವ್ಯವಹಾರ ಮಾಡಿ ಪಿಪಿಇ ಕಿಟ್ ಖರೀದಿ ಸೇರಿ ಕಮಿಷನ್ ತಿಂದಿದ್ದಾರೆ. ದುಡ್ಡು ಲೂಟಿ ಮಾಡಿರುವುದು ವರದಿಯಾಗಿದೆ. ಆಮ್ಲಜನಕ ಕೊಡದೇ 39 ಜನರ ಸಾವಿಗೆ ಕಾರಣರಾಗಿರುವ ಇವರಿಗೆಲ್ಲಾ (ಬಿಜೆಪಿಯವರಿಗೆ) ಕ್ಷಮೆ ಇದೆಯಾ? ಇವರು ಬೇಕಾ? ತೀರ್ಮಾನಿಸಿ’ ಎಂದು ಶಿಗ್ಗಾವಿಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಸಿದ್ದರಾಮಯ್ಯ ಹೇಳಿದರು.

‘ಪಿಪಿಇ ಕಿಟ್: ಕಾನೂನು ಪ್ರಕಾರ ಖರೀದಿ’



‘ಕೋವಿಡ್ ಸಂದರ್ಭ ಬಿಜೆಪಿ ಹಗರಣ ನಡೆಸಿದೆ’ ಎನ್ನುವ ಕಾಂಗ್ರೆಸ್ ಆರೋಪಕ್ಕೆ ಭಾನುವಾರ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದ ಸಂಸದ ಬಸವರಾಜ ಬೊಮ್ಮಾಯಿ, ‘ಕೋವಿಡ್ ಸಂದರ್ಭದಲ್ಲಿ ಪಿಪಿಇ ಕಿಟ್ ಇಲ್ಲದ ಕಾರಣ, ಸೋಂಕು ತಗುಲಿ ಜನ ಮೃತಪಡುತ್ತಿದ್ದರು. ಆರೋಗ್ಯ ತುರ್ತು ಪರಿಸ್ಥಿತಿ ಎದುರಾಗಿದ್ದಾಗ, ವೈದ್ಯರು ಪಿಪಿಇ ಕಿಟ್ ಇಲ್ಲದಿದ್ದರೆ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಪಿಪಿಇ ಕಿಟ್ ಇಲ್ಲದಿದ್ದರೆ ಸಾಯುತ್ತಾರೆ ಎನ್ನುವ ಭಯ ಸಹ ಇತ್ತು. ಆಗ ಅವುಗಳನ್ನು ಕಾನೂನು ಪ್ರಕಾರವೇ ಖರೀದಿ ಮಾಡಿದ್ದೆವು. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಅದನ್ನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ವಿರೋಧ ಪಕ್ಷದ ನಾಯಕರ ಧ್ವನಿ ಕುಗ್ಗಿಸಲು ಹೀಗೆ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕುನ್ಹಾ ವರದಿಯಲ್ಲಿ ಗೊಂದಲ’

ತೋರಣಗಲ್ (ಬಳ್ಳಾರ): ‘ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ. ಕುನ್ಹಾ ನೀಡಿರುವ ವರದಿಯಲ್ಲಿ ಗೊಂದಲವಿದೆ. ಚುನಾವಣೆ ಸೋಲಿನ ಭೀತಿಯಿಂದ ಕಾಂಗ್ರೆಸ್ ಹೀಗೆ ಮಾಡಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಆರೋಪಿಸಿದರು.

‘ವರದಿಯು 14 ಪುಟಗಳಿದ್ದು, ಒಂದೊಂದು ಪುಟಕ್ಕೆ ಒಂದೊಂದು ಕೋಟಿಯಂತೆ ₹14 ಕೋಟಿ ಹಗರಣ ಎಂದು ಬರೆದಿದ್ದಾರೆ. ಇಷ್ಟೊಂದು ಆತುರ ಏಕೆ? ಉಪ ಚುನಾವಣೆಯಲ್ಲಿ ವರದಿ ತರುವ ಅಗತ್ಯ ಏನಿದೆ? ತಮ್ಮ ಸರ್ಕಾರದ ಹಗರಣ ಮುಚ್ಚಿ ಹಾಕಲು ಯಡಿಯೂರಪ್ಪ, ಶ್ರೀರಾಮುಲುರನ್ನು ಬೆದರಿಸಲಾಗುತ್ತಿದೆ’ ಎಂದರು.

ಮೋಜು ಮಸ್ತಿಯಲ್ಲಿ ತೊಡಗಿದ್ದ ಕಾಂಗ್ರೆಸ್: ಸಂಡೂರು (ಬಳ್ಳಾರಿ): ‘ಕೋವಿಡ್ ಸಂದರ್ಭದಲ್ಲಿ ನಾವು ಜನರ ಜೀವ ಉಳಿಸುತ್ತಿದ್ದರೆ, ಕಾಂಗ್ರೆಸ್ಸಿನವರು ಮೋಜು ಮಸ್ತಿಯಲ್ಲಿ ತೊಡಗಿದ್ದರು’ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆರೋಪಿಸಿದರು.

ಸುದ್ದಿ 2 ನಿಮಿಷ

‘ಸಿದ್ದರಾಮಯ್ಯ ಇರೋ ತನಕ ಮಾತ್ರ ಮುಸ್ಲಿಮರಿಗೆ ಭವಿಷ್ಯ’

ಕೊಪ್ಪಳ: ‘ಸಿದ್ದರಾಮಯ್ಯ ಅವರು ಅಧಿಕಾರದಲ್ಲಿರುವ ತನಕ ಮಾತ್ರ ಮುಸ್ಲಿಮರಿಗೆ ಭವಿಷ್ಯವಿದ್ದು, ಅವರು ಇರುವುದರ ಒಳಗೆ ನಾವು ಏನಾದರೂ ಮಾಡಿಕೊಳ್ಳಬೇಕು. ನಂತರ ನಮಗೆ ಚಂಬೇ ಗತಿಯಾಗುತ್ತದೆ’ ಎಂದು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಹೇಳಿದರು.



ನಗರದಲ್ಲಿ ಶನಿವಾರ ನಡೆದ ಸ್ವತಂತ್ರ್ಯ ಹೋರಾಟಗಾರರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪ್ರತಿ ಆರು ತಿಂಗಳಿಗೊಮ್ಮೆ ಹೋಗಿ ನಮ್ಮ ಸಮಾಜಕ್ಕಾಗಿ ನೂರಾರು ಕೋಟಿ ಅನುದಾನ ತಂದು ಕೆಲಸ ಮಾಡಿಕೊಳ್ಳಬೇಕು. ಸಿದ್ದರಾಮಯ್ಯ ಇರೋದರ ಒಳಗೆ ಏನಾದರೂ ಮಾಡಿಕೊಳ್ಳಬೇಕು’ ಎಂದರು.

‘ನನಗೆ ಸಿದ್ದರಾಮಯ್ಯ ಮಾತ್ರ ನಾಯಕ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನು ಕೂಡ ನಾನು ನಾಯಕರು ಎಂದು ಒಪ್ಪಿಕೊಂಡಿಲ್ಲ. ನನ್ನನ್ನು ಶಾಸಕ ಹಾಗೂ ಸಚಿವರನ್ನಾಗಿ ಮಾಡಿದ್ದು ಸಿದ್ದರಾಮಯ್ಯ‘ ಎಂದು ಹೇಳಿದರು.

‘ಕೋವಿಡ್ ತನಿಖೆ ಹಿಂದೆ ರಾಜಕೀಯ ಉದ್ದೇಶ ಇಲ್ಲ’

ಬೆಂಗಳೂರು: ‘ಕೋವಿಡ್ ಹಗರಣದ ತನಿಖೆ ವಿಚಾರದಲ್ಲಿ ರಾಜಕೀಯ ಉದ್ದೇಶ ಇಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಯಡಿಯೂರಪ್ಪ ಅವರನ್ನು ಗುರಿ ಮಾಡಲಾಗುತ್ತಿದೆ’ ಎಂಬ ಆರೋಪದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಕೋವಿಡ್ ಹಗರಣದ ತನಿಖೆ ನಡೆಯುತ್ತಿದೆ ಅಷ್ಟೇ. ಭ್ರಷ್ಟಾಚಾರ ನಡೆದಿದೆ ಎಂದು ನಿವೃತ್ತ ನ್ಯಾಯಮೂರ್ತಿ ಡಿಕುನ್ಹಾ ಆಯೋಗ ಮಧ್ಯಂತರ ವರದಿಯಲ್ಲಿ ಹೇಳಿದೆ. ಈ ವಿಚಾರದ ಪರಾಮರ್ಶೆಗೆ ರಚಿಸಿರುವ ಸಚಿವ ಸಂಪುಟ ಉಪ ಸಮಿತಿಯ ವರದಿಯನ್ನು ಸಚಿವ ಸಂಪುಟ ಸಭೆಯ ಮುಂದಿಟ್ಟು, ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

‘ಬಿಟ್ ಕಾಯಿನ್ ಪ್ರಕರಣದ ತನಿಖೆ ಇನ್ನೂ ಪೂರ್ಣ ಆಗಿಲ್ಲ. ದೋಷಾರೋಪಣೆ ಪಟ್ಟಿ ಸಲ್ಲಿಸಿಲ್ಲ’ ಎಂದೂ ಸ್ಪಷ್ಟಪಡಿಸಿದರು.

ಕಾನೂನುಬಾಹಿರ ಅಲ್ಲವೇ?: ‘ಎರಡು ವರ್ಷದ ಹಳೆಯ ಘಟನೆ ಬಗ್ಗೆ ಸಂಸದ ತೇಜಸ್ವಿ ಸೂರ್ಯ ಟ್ವೀಟ್ ಮಾಡಿರುವುದು ಗೊತ್ತಾದ ಮೇಲೆ ಎಫ್‌ಐಆರ್ ಮಾಡಲಾಗಿದೆ. ಈಗಿನ ಭೂಮಿಯನ್ನು ವಕ್ಫ್‌ಗೆ ತೆಗೆದುಕೊಂಡಿದ್ದಾರೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಅದು ಕಾನೂನುಬಾಹಿರ ಅಲ್ಲವೇ? ಅವರ ವಿರುದ್ಧ ಕ್ರಮ ತೆಗೆದುಕೊಂಡರೆ ಅದನ್ನು ರಾಜಕೀಯ ಮಾಡುತ್ತಾರೆಂದು ಆಪಾದಿಸುತ್ತಾರೆ. ಹೀಗಾದರೆ, ಸರ್ಕಾರ ಕೆಲಸ ಮಾಡಬೇಕಲ್ಲವೇ’ ಎಂದೂ ಪ್ರಶ್ನಿಸಿದರು.

‘ಜಮೀರ್‌ರನ್ನು ನೇಣಿಗೇರಿಸಬೇಕು’

ಚಿಕ್ಕಮಗಳೂರು: ‘ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 25 ಸಾವಿರಕ್ಕೂ ಹೆಚ್ಚು ಬಾಂಗ್ಲಾ ಮುಸ್ಲಿಮರಿದ್ದಾರೆ. ಅವರಿಗೆ ಮತದಾನದ ಹಕ್ಕನ್ನು ಜಮೀರ್ ಅಹಮದ್ ಕೊಡಿಸಿದ್ದಾರೆ’ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಆರೋಪಿಸಿದರು.

‘ಚಾಮರಾಜಪೇಟೆ ಔರಂಗಜೇಬ(ಜಮೀರ್ ಅಹಮದ್) ಈ ರೀತಿಯ ಅನೇಕ ಬ್ಲಂಡರ್‌ಗಳನ್ನು ಮಾಡಿದ್ದಾರೆ. ಅವರನ್ನು ಗಡೀಪಾರು ಮಾಡಬೇಕು, ಅಮಾನತು ಮಾಡಬೇಕು ಎಂದು ಬಿಜೆಪಿಯವರು ಆಗ್ರಹಿಸುತ್ತಿದ್ದಾರೆ. ಇದ್ಯಾವುದನ್ನೂ ಮಾಡದೆ ಅವರನ್ನು ಒಂದು ಆಲದ ಮರಕ್ಕೆ ನೇಣು ಹಾಕಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿದರು.ವಕ್ಫ್ ಆಸ್ತಿ ಹೆಸರಿನಲ್ಲಿ ಬೇಕಾದ ಜಮೀನು ಕಿತ್ತುಕೊಳ್ಳಲು ಇದು ಸಚಿವ ಜಮೀರ್ ಅಹಮದ್ ಅಪ್ಪನ ಆಸ್ತಿಯಲ್ಲ ಎಂದರು.

ಕಾಲೇಜಿನಲ್ಲಿ ‘ಗಡ್ಡ’ದ ವಿವಾದ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ‘ಜಮ್ಮು-ಕಾಶ್ಮೀರದ ಮುಸ್ಲಿಂ ವಿದ್ಯಾರ್ಥಿಗಳಿಗೆ ಗಡ್ಡ ಬೋಳಿಸುವಂತೆ ಹೊಳೆನರಸೀಪುರ ನರ್ಸಿಂಗ್ ಕಾಲೇಜು ಪ್ರಾಂಶುಪಾಲರು ತಾಕೀತು ಮಾಡಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಹಾಕಿದ್ದ ಪೋಸ್ಟ್ ಸಂಚಲನ ಸೃಷ್ಟಿಸಿತ್ತು. ನಂತರ ಕಾಲೇಜು ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಮಾತುಕತೆ ನಡೆಸಿ ವಿವಾದ ತಿಳಿಯಾಗಿಸಿದ್ದಾರೆ.

‘ಶೇವಿಂಗ್ ಮಾಡಿಕೊಂಡು ಕಾಲೇಜು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಸೂಚಿಸಲಾಗಿದೆ. ಆದರೆ ನಮ್ಮ ಸಂಪ್ರದಾಯದಂತೆ ಗಡ್ಡ ಬಿಡುವುದು ನಮ್ಮ ಹಕ್ಕು. ಈ ಕ್ರಮ ನಮ್ಮ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರುತ್ತದೆ’ ಎಂದು ಆರೋಪಿಸಿ ಇಲ್ಲಿನ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಜಮ್ಮು –ಕಾಶ್ಮೀರದ ವಿದ್ಯಾಥಿಗಳು, ಜಮ್ಮು–ಕಾಶ್ಮೀರ ಸ್ಟುಡೆಂಟ್ಸ್ ಅಸೋಸಿಯೇಶನ್‌ಗೆ ಈಚೆಗೆ ಪತ್ರ ಬರೆದಿದ್ದರು.

ಈ ಪತ್ರವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದ ಜಮ್ಮು– ಕಾಶ್ಮೀರ ಸ್ಟುಡೆಂಟ್ಸ್ ಅಸೋಸಿಯೇಷನ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ ಅವರನ್ನು ಟ್ಯಾಗ್ ಮಾಡಿತ್ತು. ಈ ಸಂಬಂಧ ಮಾಹಿತಿ ನೀಡುವಂತೆ ಮುಖ್ಯಮಂತ್ರಿ ಕಚೇರಿಯಿಂದ ಕಾಲೇಜಿಗೆ ಸೂಚನೆ ಬಂದಿತ್ತು.

ಇದರ ಬೆನ್ನಲ್ಲೇ ಎಚ್ಚೆತ್ತುಕೊಂಡ ಕಾಲೇಜಿನ ಪ್ರಮುಖರು, ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು. ಸಭೆಯ ನಂತರ ಮಾತನಾಡಿದ ವಿದ್ಯಾರ್ಥಿಗಳು, ‘ಕ್ಲೀನ್ ಶೇವ್ ಅಥವಾ ಟ್ರಿಮ್ ಮಾಡುವಂತೆ ಸೂಚನೆ ನೀಡಲಾಗಿತ್ತು. ನಮ್ಮ ಸಂಪ್ರದಾಯ ಮುಂದುವರಿಸಲು ಯಾವುದೇ ಅಭ್ಯಂತರವಿಲ್ಲ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ. ಇದೀಗ ಯಾವುದೇ ವಿವಾದ ಇಲ್ಲ’ ಎಂದು ತಿಳಿಸಿದರು. ಪ್ರಧಾನಮಂತ್ರಿ ವಿಶೇಷ ಸ್ಕಾಲರ್‌ಶಿಪ್ (ಪಿ.ಎಂ.ಎಸ್.ಎಸ್) ಯೋಜನೆ ಅಡಿ ಇಲ್ಲಿನ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ಜಮ್ಮು – ಕಾಶ್ಮೀರದ ವಿದ್ಯಾಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

‘ಸೆ.8 ರಂದು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಯ ಕ್ಲಿನಿಕಲ್ ಲ್ಯಾಬ್‌ಗೆ ಶೂ ಧರಿಸದೇ ಬಂದಿದ್ದ 18 ವಿದ್ಯಾರ್ಥಿಗಳನ್ನು, ಕ್ಲಿನಿಕಲ್ ಲ್ಯಾಬ್‌ನ ಮಾರ್ಗದರ್ಶಕ ವಿಜಯಕುಮಾರ್ ಅವರು ಲ್ಯಾಬ್‌ಗೆ ಸೇರಿಸದೇ ಹೊರಗಡೆ ನಿಲ್ಲಿಸಿದ್ದರು. ಈ ವಿಷಯವನ್ನು ಮುಚ್ಚಿಟ್ಟ ಕೆಲವರು, ಮುಸ್ಲಿಂ ಯುವಕರಿಗೆ ಗಡ್ಡ ಬೋಳಿಸಲು ಸೂಚಿಸಲಾಗಿದೆ ಎಂದು ವಿವಾದ ಸೃಷ್ಟಿಸಿದ್ದರು. ವಿದ್ಯಾರ್ಥಿಗಳ ಸಂಪ್ರದಾಯ ಪಾಲಿಸಲು ನಮ್ಮ ಅಭ್ಯಂತರವಿಲ್ಲ ಎನ್ನುವುದನ್ನು ವಿದ್ಯಾರ್ಥಿಗಳಿಗೂ ತಿಳಿಸಲಾಗಿದೆ. ಕಾಲೇಜಿನ ನಿಯಮದಂತೆ ಶಿಸ್ತಿನಿಂದ ಇರಬೇಕು ಎನ್ನುವುದಷ್ಟೇ ನಮ್ಮ ಉದ್ದೇಶ’ ಎಂದು ಪ್ರಾಂಶುಪಾಲ ಚಂದ್ರಶೇಖರ್ ಸ್ಪಷ್ಟಪಡಿಸಿದರು.

ಶ್ರೀರಾಮ ಸೇನೆಯಿಂದ ದತ್ತಮಾಲಾ ಅಭಿಯಾನ: ಶೋಭಾಯಾತ್ರೆ

‘ಭೂಮಂಡಲ ಸನಾತನ ಧರ್ಮದವರಿಗೆ ಸೇರಿದ್ದು’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಸಮಸ್ತ ಭೂಮಂಡಲ ಸನಾತನ ಧರ್ಮದವರಿಗೆ ಸೇರಿದ್ದು. ಈ ಧರ್ಮದಿಂದ ದೂರ ಹೋದವರಿಗೆ ಭೂಮಂಡಲ ನನ್ನದು ಎಂದು ಹೇಳುವ ಅಧಿಕಾರ ಇಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ದತ್ತಮಾಲಾ ಅಭಿಯಾನದ ಅಂಗವಾಗಿ ಶ್ರೀರಾಮ ಸೇನೆ ನೇತೃತ್ವದಲ್ಲಿ ಆಯೋಜಿಸಿದ್ದ ಧರ್ಮಸಭೆಯಲ್ಲಿ ಮಾತನಾಡಿದ ಅವರು, ‘ಸನಾತನ ಧರ್ಮದಿಂದ ದೂರ ಹೋದವರಿಗೆ ಭೂಮಿಯ ಮೇಲೆ ಬದುಕುವ ಹಕ್ಕಿದೆಯೇ ಹೊರತು, ನನ್ನದು ಎಂದು ಹೇಳುವ ಅಧಿಕಾರ ಇಲ್ಲ’ ಎಂದರು.

‘ಬಲಿ ಚಕ್ರವರ್ತಿ ಇಡೀ ಭೂಮಂಡಲವನ್ನು ವಿಷ್ಣುವಿನ ಅವತಾರವಾದ ವಾಮನನಿಗೆ ಆ ಕಾಲದಲ್ಲೇ ದಾನ ಕೊಟ್ಟಿದ್ದಾನೆ. ಒಮ್ಮೆ ದಾನ ಸ್ವೀಕಾರ ಮಾಡಿದ ನಂತರ ಮರುದಾನ ಕೊಡುವ ಪದ್ಧತಿ ಇಲ್ಲ. ಕೊಡಲೇಬೇಕೆಂದರೆ ವಾಮನನೇ ಮತ್ತೆ ಬಂದು ಕೊಡಬೇಕು. ಅಲ್ಲಿಯ ತನಕ ಸಮಸ್ತ ಭೂಮಂಡಲವೇ ಮಹಾವಿಷ್ಣುವಿಗೆ ಸೇರಿದ್ದು, ಅಂದರೆ ಸನಾತನ ಧರ್ಮೀಯರಿಗೆ ಸೇರಿದ್ದು’ ಎಂದು ಹೇಳಿದರು.



ದತ್ತಮಾಲಾ ಅಭಿಯಾನದ ಅಂಗವಾಗಿ ಶ್ರೀರಾಮ ಸೇನೆ ಕಾರ್ಯಕರ್ತರು ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ ನಡೆಸಿದರು

ವಕ್ಫ್ ಮಂಡಳಿ ಎಂಬ ಆಧುನಿಕ ಭಸ್ಮಾಸುರನನ್ನು ನಾಶ ಮಾಡಲು ಇಡೀ ಹಿಂದೂ ಸಮಾಜ ಸಂಘಟಿತವಾಗಿ ಎದ್ದು ನಿಲ್ಲಬೇಕಿದೆ’ ಎಂದರು. ಶ್ರೀರಾಮ ಸೇನೆ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ, ವಿಭಾಗೀಯ ಅಧ್ಯಕ್ಷ ರಂಜಿತ್ ಶೆಟ್ಟಿ ಭಾಗವಹಿಸಿದ್ದರು. ಸಭೆಯ ಬಳಿಕ ನಗರದ ಎಂ.ಜಿ. ರಸ್ತೆಯಲ್ಲಿ ನೂರಾರು ಕಾರ್ಯಕರ್ತರು ಶೋಭಾಯಾತ್ರೆ ನಡೆಸಿದರು. ಬಳಿಕ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ಭೇಟಿ ನೀಡಿ, ದತ್ತ ಪಾದುಕೆಯ ದರ್ಶನ ಪಡೆದರು.

ಒಂಬತ್ತು ಮುದ್ದೆ ತಿಂದ ಮಹಿಳೆಗೆ ಟಿವಿ

13 ಮುದ್ದೆ ತಿಂದ.. ಟಗರು ಗೆದ್ದ...

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಕರ್ನಾಟಕ ಸುವರ್ಣ ಸಂಭ್ರಮ 50’ ಅಂಗವಾಗಿ ಎಚ್‌ಎಸ್‌ಆರ್ ಬಡಾವಣೆಯ ಪರಂಗಿಪಾಳ್ಯದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ನಾಟಿ ಕೋಳಿ ಸಾರು ಮತ್ತು ರಾಗಿ ಮುದ್ದೆ ಉಣ್ಣುವ ಸ್ಪರ್ಧೆಯಲ್ಲಿ ದಾವಣಗೆರೆಯ ಯೋಗೇಶ್ ಮತ್ತು ವೈಟ್‌ಫೀಲ್ಡ್‌ನ ಸೌಮ್ಯಾ ಪ್ರಥಮ ಬಹುಮಾನ ಗಳಿಸಿದ್ದಾರೆ.

ದಾವಣಗೆರೆ, ರಾಮನಗರ, ಕುಣಿಗಲ್, ಮಾಲೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಜನರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಪುರುಷರ ವಿಭಾಗದಲ್ಲಿ ದಾವಣಗೆರೆಯ ಯೋಗೇಶ್ 13 ಮುದ್ದೆಗಳನ್ನು ತಿಂದು ಪ್ರಥಮ ಸ್ಥಾನದೊಂದಿಗೆ ಟಗರನ್ನು ಬಹುಮಾನವಾಗಿ ಪಡೆದರು, ಮಹಿಳೆಯರ ವಿಭಾಗದಲ್ಲಿ ವೈಟ್‌ಫೀಲ್ಡ್‌ನ ಸೌಮ್ಯಾ ಒಂಬತ್ತು ಮುದ್ದೆ ತಿಂದು ಪ್ರಥಮ ಸ್ಥಾನ ಪಡೆದು 32 ಇಂಚಿನ ಟಿವಿಯನ್ನು ಬಹುಮಾನವಾಗಿ ಪಡೆದರು.

ಬೆಂಗಳೂರಿನ ಶ್ರೀನಿವಾಸ ರೆಡ್ಡಿ ಹನ್ನೆರಡೂವರೆ ಮುದ್ದೆ ತಿಂದು ದ್ವಿತೀಯ ಸ್ಥಾನ ಪಡೆದು ಕುರಿ ಮರಿ,



ಮಹಿಳೆಯರ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ವೈಟ್‌ಫೀಲ್ಡ್‌ನ ಸೌಮ್ಯ ನಾಟಿ ಕೋಳಿ ಸಾರು, ಮುದ್ದೆ ಸವಿದರು

ಕುಣಿಗಲ್‌ನ ಲೋಕೇಶ್ 12 ಮುದ್ದೆ ತಿಂದು ತೃತೀಯ ಸ್ಥಾನದೊಂದಿಗೆ ಎರಡು ನಾಟಿ ಕೋಳಿಗಳನ್ನು ಬಹುಮಾನವಾಗಿ ಪಡೆದರು.

ಮಹಿಳೆಯರ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದ ಚಂದ್ರಕಲಾ ಸಿ.ಜಿ. ಎಂಟು ಮುದ್ದೆ ತಿಂದು ಮಿಕ್ಸರ್ ಗ್ರೈಂಡರ್, ಬೆಂಗಳೂರಿನ ಕವಿತಾ ಏಳು ಮುದ್ದೆ ತಿಂದು ತೃತೀಯ ಸ್ಥಾನದೊಂದಿಗೆ ಕಿಚನ್ ಸೆಟ್ ಬಹುಮಾನ ಪಡೆದರು.

ಕಾರ್ಯಕ್ರಮ ಆಯೋಜಕ ಅನಿಲ್ ರೆಡ್ಡಿ ಮಾತನಾಡಿ, ‘ದೇಸಿ ಆಹಾರ ಪದ್ಧತಿಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಿದ್ದೇವೆ. ಜಂಕ್ ಫುಡ್‌ನಿಂದಾಗಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಇದರಿಂದ ಆರ್ಥಿಕ ನಷ್ಟ ಉಂಟಾಗುತ್ತಿದೆ. ಉತ್ತಮ ಆಹಾರ ಶೈಲಿಯನ್ನು ಉತ್ತೇಜಿಸುವ



ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿದ ದಾವಣಗೆರೆಯ ಯೋಗೇಶ್ ಮುದ್ದೆ ಸವಿದರು

ಕಾರಣದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ’ ಎಂದರು. ವಿಧಾನ ಪರಿಷತ್ ಸದಸ್ಯ ರಾಮೋಜಿ ಗೌಡ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ಉಮಾಪತಿ ಶ್ರೀನಿವಾಸ ಗೌಡ, ನಾರಾಯಣ ಗೌಡ, ಟಿ.ವಾಸುದೇವ ರೆಡ್ಡಿ ವಿಜೇತರಿಗೆ ಬಹುಮಾನ ವಿತರಿಸಿದರು.

ಸಹಕಾರ ಸಂಸ್ಥೆಗಳಲ್ಲಿ ₹2,650 ಕೋಟಿ ಅವ್ಯವಹಾರ


ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯದ ಸೌಹಾರ್ದ ಸಹಕಾರ ಸಂಸ್ಥೆಗಳಲ್ಲಿ ಸುಮಾರು ₹2,650 ಕೋಟಿ ಅವ್ಯವಹಾರವಾಗಿದೆ. ಸುಮಾರು 45 ಸೌಹಾರ್ದ ಸಹಕಾರ ಸಂಸ್ಥೆಗಳು ಗ್ರಾಹಕರ ಹಣ ಮರಳಿಸದ ಸ್ಥಿತಿಯಲ್ಲಿವೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ನಡೆದ ವೈಶ್ಯ ಕೋ–ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಅನಗತ್ಯ ಸ್ಪರ್ಧೆಯಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಹಲವಾರು ಬ್ಯಾಂಕ್ ವಿಲೀನವಾಗುತ್ತಿದ್ದು, ಇಂತಹ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳ ಅಸ್ತಿತ್ವ ಉಳಿಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೆಲವು ಸಹಕಾರ ಸಂಸ್ಥೆಗಳು ಗ್ರಾಹಕರಿಂದ ಶೇ16ರಷ್ಟು ಬಡ್ಡಿ ಪಡೆದು ಶೋಷಿಸುತ್ತಿವೆ. ಇದನ್ನು ತಪ್ಪಿಸಬೇಕು ಎಂದು ರಾಜಣ್ಣ ಸಲಹೆ ಮಾಡಿದರು. ಹಣಕಾಸಿನ ಸಂಸ್ಥೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು. ಸಾಲ ವಸೂಲಿಗೆ ನೋಟಿಸ್ ಕೊಡಬಾರದು, ಗ್ರಾಹಕರ ಮೇಲೆ ಒತ್ತಡ ಹೇರಬಾರದು ಎಂದು ಹೇಳಿದರೆ ಇಡೀ ವ್ಯವಸ್ಥೆ ಹಾಳಾಗುತ್ತದೆ. ಸಂಸ್ಥೆಗಳ ನಿರ್ಧಾರಕ್ಕೆ ಆಡಳಿತ ವರ್ಗ ವಿರೋಧ ವ್ಯಕ್ತಪಡಿಸಬಾರದು. ಸರ್ಕಾರ ಸಹಕಾರ ಸಂಸ್ಥೆಗಳಿಗೆ ಮಾರಕ ವಾಗುವ, ಪ್ರಗತಿಗೆ ಅಡ್ಡಿಯಾಗುವ ಯಾವುದೇ ತೀರ್ಮಾನ ತೆಗೆದು ಕೊಳ್ಳಬಾರದು. ಸಾಲ ಪಡೆದವರು ಕಟ್ಟಿದರೆ ಆಯಿತು ಎಂದು ಉದಾಸೀನ ಮನಸ್ಥಿತಿ ತೋರಬಾರದು ಎಂದು ಸಲಹೆ ಮಾಡಿದರು.



ಉತ್ತಮ ಸಾಲಗಾರರನ್ನು ಹುಡುಕುವುದು ದೊಡ್ಡ ಸವಾಲಾಗಿದೆ. ಫೋರ್ಜರಿ ದಾಖಲೆ ಸಲ್ಲಿಸಿ ಸಾಲ ಪಡೆಯುವುದು ಹೆಚ್ಚಾಗುತ್ತಿದೆ. ಅಸಲಿಗಿಂತ ನಕಲಿ ದಾಖಲೆ ಬಹಳ ಚೆನ್ನಾಗಿರುತ್ತವೆ. ನಕಲಿ ದಾಖಲೆ ಕಂಡು ಹಿಡಿಯುವುದು ಕಷ್ಟವಾಗುತ್ತಿದೆ. ಎಲ್ಲ ಸವಾಲು ಎದುರಿಸಿ ಬ್ಯಾಂಕ್ ನಡೆಸುವುದು ಸುಲಭದ ಕೆಲಸವಲ್ಲ ಎಂದರು.

ಮುಸ್ಲಿಂ ರೈತರ ಪಹಣಿಯಲ್ಲೂ ‘ವಕ್ಫ್’ ಹೆಸರು

ಅಥಣಿ (ಬೆಳಗಾವಿ ಜಿಲ್ಲೆ): ‘ತಾಲ್ಲೂಕಿನ ಅನಂತಪುರ ಹಾಗೂ ಬಾಳಿಗೇರಿ ಗ್ರಾಮದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ 50ಕ್ಕೂ ಅಧಿಕ ರೈತರ 300 ಎಕರೆಗಿಂತ ಹೆಚ್ಚಿನ ಕೃಷಿಭೂಮಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರ್ಪಡೆಯಾಗಿದೆ’ ಎಂದು ದೂರಿದ ರೈತರು ಸರ್ಕಾರದ ವಿರುದ್ಧ ಹರಿಹಾಯ್ದರು.

‘ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರ್ಪಡೆಯಾಗಿದೆ. ನ್ಯಾಯ ಸಿಗದಿದ್ದರೆ ನಮಗೆ ಆತ್ಮಹತ್ಯೆಯೇ ದಾರಿ’ ಎಂದು ಬಾಳಿಗೇರಿಯ ರೈತ ಶಂಸುದ್ದೀನ್ ಮುಲ್ಲಾ ಕಣ್ಣೀರುಗರೆದರು.

‘ಜಮೀನಿನ ಪಹಣಿಯಲ್ಲಿ ಏಕಾಏಕಿಯಾಗಿ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಿಸಿದರೆ, ಜೀವನ ನಡೆಸುವುದು ಹೇಗೆ?’ ಎಂದು ಅನಂತಪುರದ ರೈತ ದವಳ ಮುಲ್ಲಾ ಪ್ರಶ್ನಿಸಿದರು. ವಕೀಲ ಸಂಪತಕುಮಾರ ಶೆಟ್ಟಿ, ‘ಅಥಣಿ ತಾಲ್ಲೂಕಿನ ಹಲವು ರೈತರ ಪಹಣಿಯಲ್ಲಿ 2018ರಲ್ಲಿ ‘ವಕ್ಫ್ ಮಂಡಳಿ ಆಸ್ತಿ’ ಎಂದು ನಮೂದಾಗಿದೆ. ಯಾವ ನೋಟಿಸ್ ಕೊಡದೆ, ವಕ್ಫ್ ಆಸ್ತಿ ಎಂದು ನಮೂದಿಸಿದ್ದು ಕಾನೂನುಬಾಹಿರ’ ಎಂದರು.

ರೈತರಾದ ರಾಜಾಸಾಬ್ ಮುಲ್ಲಾ, ಸುಭಾನಲ್ಲಾ ಮುಲ್ಲಾ, ಪೈಗಂಬರ್ ಮುಲ್ಲಾ, ರಾಜಾಸಾಬ ಮುಜಾವರ, ಶಕೀಲ್ ಮುಲ್ಲಾ, ಗುಲಾಬಸಾಬ್ ಮುಲ್ಲಾ ಇತರರಿದ್ದರು.

ಹನಕೆರೆ: ಮುಜರಾಯಿ ದೇವಾಲಯದಲ್ಲಿ ಪೂಜೆಗೆ ಪ್ರಬಲ ಜಾತಿಗಳವರಿಂದ ವಿರೋಧ

ದೇಗುಲ ಪ್ರವೇಶಿಸಿ ಪರಿಶಿಷ್ಟರಿಂದ ಪೂಜೆ

ಪ್ರಜಾವಾಣಿ ವಾರ್ತೆ



ಹನಕೆರೆ ಗ್ರಾಮದ ಕಾಲಭೈರವೇಶ್ವರ ದೇವಾಲಯದಲ್ಲಿ ಭಾನುವಾರ ಪರಿಶಿಷ್ಟ ಸಮುದಾಯದ ಜನರು ಪೂಜೆ ಸಲ್ಲಿಸಿದರು

ಮಂಡ್ಯ: ತಾಲ್ಲೂಕಿನ ಹನಕೆರೆ ಗ್ರಾಮದ ಕಾಲಭೈರವೇಶ್ವರ ದೇವಾಲಯಕ್ಕೆ ಭಾನುವಾರ ಅಧಿಕಾರಿಗಳ ಸಮ್ಮುಖದಲ್ಲಿ ಪರಿಶಿಷ್ಟ ಜಾತಿಯ ಜನರಿಗೆ ಪ್ರವೇಶ ನೀಡಿ, ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಡಲಾಯಿತು. ಇದಕ್ಕೆ ವಿರೋಧ ವ್ಯಕ್ತಪಡಿಸಿ ಪ್ರಬಲ ಜಾತಿಗಳ ಕೆಲವರು ಗಲಾಟೆ ನಡೆಸಿದರು.

ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ. ಎರಡು ವರ್ಷದ ಹಿಂದೆ ₹1.5 ಕೋಟಿ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಹಿಂದಿನಿಂದಲೂ ಇಲ್ಲಿಗೆ ಪರಿಶಿಷ್ಟರ ಪ್ರವೇಶ–ಪೂಜೆಗೆ ಪ್ರಬಲ ಜಾತಿಯ ಜನರು ಅವಕಾಶ ನೀಡಿರಲಿಲ್ಲ. ಇದಕ್ಕೆ ವಿರೋಧ ವ್ಯಕ್ತಪಡಿಸಿ ಗ್ರಾಮದ ಪರಿಶಿಷ್ಟ ಸಮುದಾಯದ ಯುವಕರು ಪೊಲೀಸರು ಹಾಗೂ ತಾಲ್ಲೂಕು ಆಡಳಿತದ ಮೊರೆ ಹೋಗಿದ್ದರು. ಶಾಂತಿಸಭೆಯೂ ನಡೆದಿತ್ತು. ಆದಾಗ್ಯೂ ದಲಿತ ಸಮುದಾಯದವರಿಗೆ ಪ್ರವೇಶ ನೀಡಲು ಪ್ರಬಲ ಜಾತಿಗಳು ಒಪ್ಪಿರಲಿಲ್ಲ.

ಶನಿವಾರ ರಾತ್ರಿಯೇ ಗ್ರಾಮದ ಪರಿಶಿಷ್ಟ ಸಮುದಾಯದ ಯುವಕರ ಗುಂಪು ದೇಗುಲದ ಪ್ರವೇಶಕ್ಕೆ ಯತ್ನಿಸಿದ್ದು, ಪ್ರಬಲ ಜಾತಿಗಳ ಗುಂಪು ಇದಕ್ಕೆ ಅವಕಾಶ ನೀಡಿರಲಿಲ್ಲ. ಭಾನುವಾರ ಮಂಡ್ಯ ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ಮಾಜಿ ಶಾಸಕ ಶ್ರೀನಿವಾಸ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ದೇವಾಲಯ ಪ್ರವೇಶಿಸಿ, ದೇವರಿಗೆ ಪೂಜೆ ಸಲ್ಲಿಸಿದರು.

ಪ್ರಬಲ ಜಾತಿಗಳ ವಿರೋಧ: ಪರಿಶಿಷ್ಟರ ದೇಗುಲ ಪ್ರವೇಶಕ್ಕೆ ವಿರೋಧ ವ್ಯಕ್ತಪಡಿಸಿದ ಗುಂಪೊಂದು ದೇಗುಲದ ಮುಂಭಾಗ ಇಡಲಾಗಿದ್ದ ನಾಮಫಲಕವನ್ನು ಒಡೆದು ಆಕ್ರೋಶ ವ್ಯಕ್ತಪಡಿಸಿತು. ದೇವಾಲಯದ ಒಳ ನುಗ್ಗಿದ ಯುವಕರು, ಉತ್ಸವ ಮೂರ್ತಿಯನ್ನು ಹೊತ್ತೊಯ್ದು ಎದುರು ಇದ್ದ ಮಹದೇಶ್ವರ ದೇವಾಲಯದಲ್ಲಿಟ್ಟ ಘಟನೆಯೂ ನಡೆಯಿತು.

‘ಗ್ರಾಮದಲ್ಲಿರುವ ಎರಡು ಗುಂಪಿನ ದಲಿತರ ಪೂಜೆಗೆ ಅನುಕೂಲವಾಗುವಂತೆ ಚಿಕ್ಕಮ್ಮ ಮತ್ತು ಮಂಚಮ್ಮ ದೇಗುಲವನ್ನು ಕಟ್ಟಿಸಿಕೊಟ್ಟಿದ್ದೇವೆ. ಈಗ ಏಕಾಏಕಿ ಕಾಲಭೈರವೇಶ್ವರ ಸ್ವಾಮಿ ದೇಗುಲ ಪ್ರವೇಶಿಸಿ ನಾವು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದ ಸಂಪ್ರದಾಯ ಮುರಿದಿದ್ದಾರೆ’ ಎಂದು ಪ್ರಬಲ ಜಾತಿಗಳ ಗುಂಪು ಅಧಿಕಾರಿಗಳು ಮತ್ತು ಪೊಲೀಸರ ಜೊತೆ ವಾಗ್ವಾದ ನಡೆಸಿತು.

ತಹಶೀಲ್ದಾರ್ ಶಿವಕುಮಾರ್ ಬಿರಾದಾರ್ ಮಾತನಾಡಿ ‘ಇದು ಮುಜರಾಯಿ ಇಲಾಖೆಗೆ ಸೇರಿದ ದೇಗುಲವಾಗಿದ್ದು, ಎಲ್ಲರಿಗೂ ಮುಕ್ತ ಪ್ರವೇಶವಿದೆ. ಯಾರೂ ಅಡ್ಡಿಪಡಿಸುವಂತಿಲ್ಲ’ ಎಂದು ಎಚ್ಚರಿಸಿದರು.

ಅಂತಿಮವಾಗಿ ಪೊಲೀಸ್ ಭದ್ರತೆಯಲ್ಲಿ ದೇಗುಲ ಪ್ರವೇಶ ನಡೆದಿದ್ದು, ಗ್ರಾಮದಲ್ಲಿ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.

ದಲಿತರ ದೇವಾಲಯ ಪ್ರವೇಶಕ್ಕೆ ಸಮಿತಿಯವರು ಅಡ್ಡಿಪಡಿಸಿಲ್ಲ. ಗ್ರಾಮದ ಕೆಲವರು ವಿರೋಧಿಸಿದ್ದು, ಸದ್ಯ ಮುಕ್ತ ಅವಕಾಶ ನೀಡಲಾಗಿದೆ

ರಾಜಣ್ಣ, ಕಾಲಭೈರವೇಶ್ವರ ದೇವಾಲಯ ಸಮಿತಿ ಉಪಾಧ್ಯಕ್ಷ

ಕಾಲಭೈರವೇಶ್ವರ ಸ್ವಾಮಿ ಪೂಜೆಗೆ ಬಂದಿದ್ದ ದಲಿತರ ಪೂಜೆಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಕೆಲವರಷ್ಟೇ ವಿರೋಧಿಸುತ್ತಿದ್ದು, ಸಮಸ್ಯೆ ಶಾಂತಿಯುತವಾಗಿ ಬಗೆಹರಿದಿದೆ

ಶಿವಕುಮಾರ್ ಬಿರಾದಾರ್
ಮಂಡ್ಯ ತಹಶೀಲ್ದಾರ್

ಹಾಸನ: ದಲಿತರ ದೇವಾಲಯ ಪ್ರವೇಶಕ್ಕೆ ವಿರೋಧ- ಅರ್ಚಕ ಬಂಧನ

ಕೊಣನೂರು (ಹಾಸನ ಜಿಲ್ಲೆ): ಸಮೀಪದ ಬಿದರೂರಿನ ಬಸವೇಶ್ವರ ದೇವಾಲಯಕ್ಕೆ ದಲಿತರ ಪ್ರವೇಶಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ದೇವಾಲಯದ ಅರ್ಚಕ ಕಾಂತರಾಜು ಎಂಬುವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಗ್ರಾಮದಲ್ಲಿ ಈಚೆಗೆ ನಡೆದ ಬಸವೇಶ್ವರ ಜಾತ್ರೆ ಸಂದರ್ಭದಲ್ಲಿ ದೇವಾಲಯಕ್ಕೆ ದಲಿತರ ಪ್ರವೇಶಕ್ಕೆ ಅಡ್ಡಿಪಡಿಸಿದ ಕುರಿತು ಪ್ರಕರಣ ದಾಖಲಾಗಿತ್ತು.

‘ಗ್ರಾಮದ ಐವರ ವಿರುದ್ಧ ದೂರು ದಾಖಲಾಗಿದ್ದು, ಅರ್ಚಕರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ಸಶಸ್ತ್ರ ಪೊಲೀಸ್ ಮೀಸಲು ಪಡೆಯನ್ನು ನಿಯೋಜಿಸಲಾಗಿದೆ’ ಎಂದು ಪಿಎಸ್‌ಐ ಗಿರೀಶ್ ಮಾಹಿತಿ ನೀಡಿದರು.

ಉತ್ಸವಕ್ಕೆ ಹಿನ್ನಡೆ: ಬಿದರೂರು ಗ್ರಾಮದಲ್ಲಿ ಪ್ರತಿ ವರ್ಷ ಜಾತ್ರೆ ನಂತರ ಯುಗಾದಿ ಹಬ್ಬದವರೆಗೂ ಪ್ರತಿ ಶುಕ್ರವಾರ ಮತ್ತು ಮಂಗಳವಾರ ಭಕ್ತರು, ಹರಕೆ ಹೊತ್ತವರು ಬಸವೇಶ್ವರ ಸ್ವಾಮಿ ಉತ್ಸವ ನಡೆಸುವುದು ಸಂಪ್ರದಾಯವಾಗಿದ್ದು, ಪ್ರಕರಣ ದಾಖಲಾಗಿರುವುದರಿಂದ ಉತ್ಸವಕ್ಕೆ ಹಿನ್ನಡೆಯಾಗಿದೆ.

ಕುತೂಹಲ ಸೃಷ್ಟಿಸಿದ ರಣಹದ್ದು

ಪ್ರಜಾವಾಣಿ ವಾರ್ತೆ



ಬಿಳಿ ಗರಿಯ ರಣಹದ್ದಿನ ಕಾಲಿಗೆ ಟ್ಯಾಗಿಂಗ್ ಮಾಡಲಾಗಿದೆ

ಕಾರವಾರ: ಇಲ್ಲಿನ ಕೋಡಿಬಾಗದ ನದಿವಾಡಾದಲ್ಲಿ ಎರಡು ದಿನಗಳಿಂದ ಬೀಡುಬಿಟ್ಟಿರುವ ಬಿಳಿ ಗರಿಯ ರಣಹದ್ದು (ವೈಟ್ ರಂಪ್ಡ್ ವಲ್ಚರ್) ಜನರಲ್ಲಿ ಕುತೂಹಲದ ಜತೆಗೆ ಆತಂಕ ಮೂಡಿಸಿತು. ರಣಹದ್ದಿನ ಬೆನ್ನ ಮೇಲಿದ್ದ ಎಲೆಕ್ಟ್ರಾನಿಕ್ ಉಪಕರಣ ಇದಕ್ಕೆ ಕಾರಣವಾಯಿತು.

ನದಿವಾಡಾದ ಮನೆಗಳ ಚಾವಣಿ ಮೇಲೆ ಹಾರಾಡುತ್ತಿದ್ದ ಚಿಕ್ಕ ಗಾತ್ರದ ರಣಹದ್ದು ಗೂಢಚರ್ಯೆಗೆ ಬಳಕೆ ಆಗುತ್ತಿರಬಹುದು ಎಂಬ ಚರ್ಚೆ ಜನರ ನಡುವೆ ನಡೆಯಿತು. ಸಮೀಪದಲ್ಲೇ ನೌಕಾನೆಲೆ ಇರುವ ಕಾರಣ ಚರ್ಚೆ ಗಂಭೀರವಾಗುತ್ತಿದ್ದಂತೆಯೇ ಪೊಲೀಸರು ಪಕ್ಷಿಯ ಕೂಲಂಕಷ ಪರಿಶೀಲನೆ ನಡೆಸಿದ್ದರು.

ಆದರೆ, ಈ ಪಕ್ಷಿಯು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (ಬಿಎನ್‌ಎಚ್‌ಎಸ್) ಸಂಶೋಧನೆಗೆ ಉಪಯೋಗಿಸಿಕೊಳ್ಳುತ್ತಿರುವ ರಣಹದ್ದು ಎಂಬುದು ತಿಳಿಯುತ್ತಿದ್ದಂತೆ ಜನರು ನಿರುಮ್ಮಳರಾದರು. ಸದ್ಯ ಅರಣ್ಯ ಇಲಾಖೆಯು ರಣಹದ್ದಿನ ಮೇಲೆ ನಿಗಾ ಇರಿಸಿದೆ.

‘ಅಳಿವಿನ ಅಂಚಿನಲ್ಲಿರುವ ಬಿಳಿಗರಿಯ ರಣಹದ್ದಿನ ಕುರಿತು ಸಂಶೋಧನೆ ನಡೆಸಲಾಗುತ್ತಿದೆ. ಕಾರವಾರದಲ್ಲಿ ಪತ್ತೆಯಾಗಿರುವ ರಣಹದ್ದು ಇನ್ನೂ ಮರಿ. ಆಗಸ್ಟ್‌ನಲ್ಲಿ ಅದನ್ನು ಟ್ಯಾಗಿಂಗ್‌ಗೆ ಒಳಪಡಿಸಲಾಗಿತ್ತು. ನ.1 ರಂದು ಮಹಾರಾಷ್ಟ್ರದ ತಾಡೋಬಾ–ಅಂಧೇರಿ ಹುಲಿ ಸಂರಕ್ಷಿತಾರಣ್ಯದಿಂದ ಹಾರಿಬಿಡಲಾಗಿತ್ತು. ಅದರ ಬೆನ್ನಿಗೆ ಟ್ರಾನ್ಸ್‌ಮೀಟರ್ ಅಳವಡಿಸಿದ್ದು, ಅದರ ಮೂಲಕ ಪಕ್ಷಿಯ ಚಲನವಲನದ ಮೇಲೆ ನಿಗಾ ಇರಿಸಲಾಗುತ್ತಿದೆ. ನಾಲ್ಕು ದಿನದಿಂದ ಕಾಳಿನದಿಯ ಅಂಚಿನಲ್ಲಿ ಅದು ಇರುವುದಾಗಿ ಉಪಗ್ರಹದ ಮಾಹಿತಿ ತೋರಿಸುತ್ತಿತ್ತು’ ಎಂದು ಬಿಎಚ್‌ಎನ್‌ಎಸ್‌ನ ಸಂಶೋಧಕರೊಬ್ಬರು ತಿಳಿಸಿದರು.

‘ರಣಹದ್ದನ್ನು ಗೂಢಚರ್ಯೆ ಪ್ರಕ್ರಿಯೆಗೆ ಬಳಸುವುದು ಕಷ್ಟ. ಸಂಶೋಧನೆಗೆ ಬಳಸಲಾಗುತ್ತಿರುವ ರಣಹದ್ದು ಇದಾಗಿರುವ ಕಾರಣ, ಅಲ್ಲದೆ ಅಪ್ರಾಪ್ತ ವಯಸ್ಸಿನಲ್ಲಿರುವುದರಿಂದ ಅದರ ಆರೈಕೆಯನ್ನು ಸೂಕ್ಷ್ಮವಾಗಿ ಮಾಡಬೇಕು’ ಎಂದು ಪ್ರಾಣಿ ಸಂಶೋಧಕ ಅಮಿತ್ ಹೆಗಡೆ ಆಗ್ರಹಿಸಿದರು.

ರೈತರು, ಮಹಿಳೆಯರ ಮೇಲೆ ಬಿಜೆಪಿ, ಎಂವಿಎ ಕಣ್ಣು

ಮಹಾರಾಷ್ಟ್ರ: ಪ್ರಣಾಳಿಕೆ ಭರಾಟೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮತದಾನದ ದಿನ ಹತ್ತಿರವಾಗುತ್ತಿರುವಂತೆಯೇ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿವೆ. ದೊಡ್ಡ ಮತದಾರ ವರ್ಗವಾಗಿರುವ ಮಹಿಳೆಯರಿಗೆ, ರೈತರಿಗೆ ಹಲವು ಭರವಸೆಗಳನ್ನು ಪ್ರಣಾಳಿಕೆಗಳಲ್ಲಿ ನೀಡಲಾಗಿದೆ.

ಆಡಳಿತಾರೂಢ ಬಿಜೆಪಿ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟವಾದ ಮಹಾರಾಷ್ಟ್ರ ವಿಕಾಸ ಆಘಾಡಿ ಭಾನುವಾರ ಬಿಡುಗಡೆ ಮಾಡಿರುವ ಪ್ರಣಾಳಿಕೆಗಳಲ್ಲಿನ ಪ್ರಮುಖ ಅಂಶಗಳು ಇಲ್ಲಿವೆ:

ಎಂವಿಎ: ಮಹಾರಾಷ್ಟ್ರನಾಮಾ

- ಮಹಾಲಕ್ಷ್ಮಿ ಯೋಜನೆ: ಮಹಿಳೆಯರಿಗೆ ತಿಂಗಳಿಗೆ ₹3,000 ನೆರವು.
- ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಔಷಧಿ ಮಾತ್ರವಲ್ಲದೆ, ಪ್ರತಿ ಕುಟುಂಬಕ್ಕೆ ₹25 ಲಕ್ಷದವರೆಗೆ ಆರೋಗ್ಯ ವಿಮೆಯ ಸೌಲಭ್ಯ.
- ಸಮಾನ ಅವಕಾಶಗಳನ್ನು ಖಾತರಿಪಡಿಸಲು, ಮೀಸಲಾತಿಯ ಮೇಲಿರುವ ಶೇಕಡ 50ರ ಮಿತಿಯನ್ನು ತೆಗೆಯಲು ಜಾತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಅರಿಯುವ ಸಮೀಕ್ಷೆ.
- ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ.
- ₹3 ಲಕ್ಷದವರೆಗಿನ ಕೃಷಿ ಸಾಲ ಮನ್ನಾ. ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದ್ದವರಿಗೆ ಹೆಚ್ಚುವರಿಯಾಗಿ ₹50 ಸಾವಿರ ನೆರವು.
- ಈರುಳ್ಳಿ ಮತ್ತು ಟೊಮೆಟೊ ಬೆಳೆಗಾರರಿಗೆ ನೆರವು.
- ರಾಜ್ಯ ಸರ್ಕಾರದಲ್ಲಿನ 2.5 ಲಕ್ಷ ಖಾಲಿ ಹುದ್ದೆಗಳ ಭರ್ತಿಗೆ ತಕ್ಷಣವೇ ಕ್ರಮ.
- ಸರ್ಕಾರಿ ಸೇವೆಗಳಲ್ಲಿ ಗುತ್ತಿಗೆ ಆಧಾರದ ನೇಮಕಕ್ಕೆ ಅವಕಾಶ ಕಲ್ಪಿಸಿದ ಆದೇಶವನ್ನು ಹಿಂಪಡೆಯುವುದು.
- ಚೈತ್ಯಭೂಮಿಯಲ್ಲಿ ಇರುವ ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕದ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಕ್ರಿಯಾಯೋಜನೆ.

ಬಿಜೆಪಿ: ಸಂಕಲ್ಪ ಪತ್ರ

- ಲಡಕಿ ಬಹೇನ್ ಯೋಜನೆ: ಪ್ರತಿ ತಿಂಗಳು ನೀಡುವ ಹಣಕಾಸಿನ ನೆರವಿನ ಮೊತ್ತ ₹1,500 ಇರುವುದನ್ನು ₹2,100ಕ್ಕೆ ಹೆಚ್ಚಿಸುವುದು.
- ರೈತರಿಗೆ ನೀಡುವ ವಾರ್ಷಿಕ ಹಣಕಾಸಿನ ನೆರವಿನ ಮೊತ್ತ ₹12 ಸಾವಿರ ಇರುವುದನ್ನು ₹15 ಸಾವಿರಕ್ಕೆ ಹೆಚ್ಚು ಮಾಡುವುದು. ಕನಿಷ್ಠ ಬೆಂಬಲ ಬೆಲೆಗೆ ಶೇ 20ರಷ್ಟು ಸಬ್ಸಿಡಿ ಒದಗಿಸುವುದು.
- ಖಾಸಗಿ ವಲಯದಲ್ಲಿ ಉದ್ಯೋಗ ಸೃಷ್ಟಿ, ಕೆಲಸ ಮಾಡಬಲ್ಲವರ ಲಭ್ಯತೆ ಬಗ್ಗೆ ಕೌಶಲ ಗಣತಿ ನಡೆಸುವುದು. ಉದ್ಯೋಗ ಅವಕಾಶ ಹೆಚ್ಚಳಕ್ಕೆ ನೆರವು ನೀಡುವುದು.
- ಲಖ್‌ಪತಿ ದೀದಿ ಯೋಜನೆಯನ್ನು 50 ಲಕ್ಷ ಮಹಿಳೆಯರಿಗೆ ವಿಸ್ತರಿಸುವುದು.
- ರಸಗೊಬ್ಬರಗಳ ಮೇಲಿನ ಜಿಎಸ್‌ಟಿ ಮೊತ್ತವನ್ನು ರೈತರಿಗೆ ಹಿಂದಿರುಗಿಸುವುದು.
- ವೃದ್ಧರಿಗೆ ಪಿಂಚಣಿ ಮೊತ್ತ ₹1,500 ಇರುವುದನ್ನು ₹2,100ಕ್ಕೆ ಹೆಚ್ಚಿಸುವುದು.
- ಉದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ₹25 ಲಕ್ಷದವರೆಗೆ ಶೂನ್ಯ ಬಡ್ಡಿ ದರಕ್ಕೆ ಸಾಲ.
- ರೈತರ ಸಾಲ ಮನ್ನಾ.
- ಎಂಎಸ್‌ಪಿಗಿಂತ ಕಡಿಮೆ ಬೆಲೆಗೆ ಬೆಳೆ ಖರೀದಿಯಾದರೆ, ರೈತರಿಗೆ ಪರಿಹಾರ ನೀಡಲು ಯೋಜನೆ.

‘ಮೋದಿ ಆರೋಪ ಸಾಬೀತುಪಡಿಸಿದರೆ ಶಿಕ್ಷೆಗೆ ಗುರಿಯಾಗಲು ಸಿದ್ಧ’

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಮಹಾರಾಷ್ಟ್ರ ಚುನಾವಣೆಗಾಗಿ ಕರ್ನಾಟಕ ಕಾಂಗ್ರೆಸ್ ಸರ್ಕಾರ ಅಬಕಾರಿ ಇಲಾಖೆಯಲ್ಲಿ ₹ 700 ಕೋಟಿ ವಸೂಲಿ ಮಾಡಿದೆ ಎಂಬ ತಮ್ಮ ಆರೋಪವನ್ನು ಪ್ರಧಾನಿ ನರೇಂದ್ರ ಮೋದಿ ಸಾಬೀತುಪಡಿಸಲಿ. ನಾವು ಯಾವುದೇ ಶಿಕ್ಷೆಗೆ ಬೇಕಾದರೂ ಗುರಿಯಾಗುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಚುನಾವಣೆಗಳಲ್ಲಿ ಸುಳ್ಳೇ ಬಿಜೆಪಿಯ ಪ್ರಬಲ ಅಸ್ತ್ರವಾಗಿದೆ. ಹೀಗಾಗಿ ಪ್ರಧಾನ ಮಂತ್ರಿಯಂಥ ಉನ್ನತ ಹುದ್ದೆಯಲ್ಲಿರುವವರು ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದರು.

‘ಕೇಂದ್ರ ಸಚಿವರುಗಳು ಯಾವ ಯಾವ ಚುನಾವಣೆಗೆ ಎಷ್ಟೆಷ್ಟು ಹಣ ಸಂಗ್ರಹಿಸುತ್ತಿದ್ದಾರೆ ಎಂದು ನನಗೂ ಗೊತ್ತಿದೆ’ ಎಂದೂ ಹೇಳಿದರು.

‘ಗ್ಯಾರಂಟಿ ಯೋಜನೆಗಳ ಬಗ್ಗೆ ಮಹಾರಾಷ್ಟ್ರ ಕಾಂಗ್ರೆಸ್‌ನವರು ನಮ್ಮ ಜತೆ ಚರ್ಚೆಯನ್ನೇ ಮಾಡಿಲ್ಲ. ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ನಾಯಕರು ಈ ಬಗ್ಗೆ ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಈ ಸುಳ್ಳು ಆರೋಪ ಮಾಡುತ್ತಿರುವ ನಾಯಕರು ರಾಜ್ಯಕ್ಕೆ ಪರಿಶೀಲನೆ ನಡೆಸುವಂತೆ ಆಹ್ವಾನ ನೀಡುತ್ತಿದ್ದು, ಅವರಿಗಾಗಿ 30 ವಿಶೇಷ ಬಸ್ ಹಾಗೂ ವಿಮಾನ ಪ್ರಯಾಣ ವ್ಯವಸ್ಥೆ ಮಾಡಲಾಗುವುದು. ರಾಜ್ಯದ 30 ಜಿಲ್ಲೆಗಳಿಗೂ ಭೇಟಿ ನೀಡಿ, ನಮ್ಮ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ದೂರವಾಣಿ ಸಂಖ್ಯೆಗಳನ್ನು ಒದಗಿಸಿ ಪತ್ರ ಬರೆಯುತ್ತಿದ್ದೇನೆ’ ಎಂದರು.

ಬಿಜೆಪಿಗೆ ಭಯ: ‘ಪದೇ ಪದೇ ಕರ್ನಾಟಕದ ವಿಚಾರಗಳನ್ನು ಮೋದಿ ಪ್ರಸ್ತಾಪ ಮಾಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಇದರಿಂದ ಏನೂ ಆಗುವುದಿಲ್ಲ. ಜನ ಈಗಾಗಲೇ ಅವರಿಗೆ ಉತ್ತರ ನೀಡಿದ್ದಾರೆ. ಕಾಂಗ್ರೆಸ್ ಹಾಗೂ ಇಂಡಿಯಾ ಮೈತ್ರಿಕೂಟ ದೇಶದಲ್ಲಿ ತನ್ನ ಶಕ್ತಿ ಹೆಚ್ಚಿಸಿಕೊಳ್ಳುತ್ತಿರುವುದನ್ನು ನೋಡಿ ಬಿಜೆಪಿ ನಾಯಕರಿಗೆ ಭಯ ಆರಂಭವಾಗಿದೆ’ ಎಂದರು.

ಕಾರ್ಕಳ: ಪರಶುರಾಮ ಮೂರ್ತಿ ಶಿಲ್ಪಿ ಕೃಷ್ಣ ನಾಯ್ಕ ಬಂಧನ

ಕಾರ್ಕಳ: ತಾಲ್ಲೂಕಿನ ಬೈಲೂರಿನ ಉಮಿಕಲ್ ಬೆಟ್ಟದ ಪರಶುರಾಮ ಥೀಂ ಪಾರ್ಕ್‌ನ ಪರಶುರಾಮ ಮೂರ್ತಿ ನಿರ್ಮಾಣ ಮಾಡಿದ ಶಿಲ್ಪಿ, ‘ಕೃಷ್ ಆರ್ಟ್ ವರ್ಲ್ಡ್’ನ ಕೃಷ್ಣ ನಾಯ್ಕ (45) ಅವರನ್ನು ನಗರ ಪೊಲೀಸರು ಶನಿವಾರ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ಮಾಹೆಯಲ್ಲಿ ಬಂಧಿಸಿದ್ದಾರೆ.

ಕೃಷ್ಣ ನಾಯ್ಕ ವಿರುದ್ಧ, ಕೃಷ್ಣ ಶೆಟ್ಟಿ ಬಜಗೋಳಿ ಅವರು ನೀಡಿರುವ ದೂರಿಗೆ ಸಂಬಂಧಿಸಿ, ನ. 4ರಂದು ವಿಚಾರಣೆ ನಡೆಸಿದ್ದ ಕಾರ್ಕಳ ನ್ಯಾಯಾಲಯದ ನ್ಯಾಯಾಧೀಶರು, ನ.7ರಂದು ಕೃಷ್ಣ ನಾಯ್ಕ ಅವರ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ್ದರು. ಅದರ ಬೆನ್ನಲ್ಲೇ ಪೊಲೀಸರು ಕೃಷ್ಣ ಅವರನ್ನು ಬಂಧಿಸಿದ್ದಾರೆ.

ಬಿಜೆಪಿ ‘ಉಗ್ರ ಹಿಂದುತ್ವ’ದ ಮೊರೆ

ಒಂದನೇ ಪುಟದಿಂದ...

ಆದರೆ, ಎನ್‌ಡಿಎಯ ಅತಿದೊಡ್ಡ ಪಾಲುದಾರ ಎನಿಸಿರುವ ಬಿಜೆಪಿ, ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ತನ್ನದೇ ಆದ ತಂತ್ರಗಳನ್ನು ಅನುಸರಿಸಬೇಕಿದೆ. ಮಹಾರಾಷ್ಟ್ರ ವಿಧಾನಸಭೆಯ 288 ಸ್ಥಾನಗಳಲ್ಲಿ ‘ಕಮಲ ಪಾಳಯ’ 148ರಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಭಾರಿ ಹಿನ್ನಡೆ ಅನುಭವಿಸಿರುವ ಬಿಜೆಪಿ, ವಿದರ್ಭ ಮತ್ತು ಮರಾಠವಾಡ ಪ್ರದೇಶದಲ್ಲಿ ಕಾಂಗ್ರೆಸ್ ಜತೆ ಮತ್ತೆ ನೇರ ಸ್ಪರ್ಧೆಗೆ ಸಿಲುಕಿದೆ. ಅಲ್ಪಸಂಖ್ಯಾತರ ಧ್ರುವೀಕರಣ ಮತ್ತು ಜಾತಿ ಸಮೀಕರಣವು ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಈ ಎರಡು ಪ್ರದೇಶಗಳಲ್ಲಿ ಎದ್ದುಕಂಡಿದ್ದವು.

ಲೋಕಸಭಾ ಚುನಾವಣೆಯಲ್ಲಿ ಮಹಾ ರಾಷ್ಟ್ರದಲ್ಲಿ ಅತ್ಯಂತ ನಿಕಟ ಹಣಾಹಣಿ ನಡೆದಿದೆ. ಎಂವಿಎ ಮತ್ತು ಮಹಾಯುತಿ ನಡು ವಣ ಮತಗಳ ವ್ಯತ್ಯಾಸವು ಶೇ 0.3ಕ್ಕೂ ಕಡಿಮೆಯಿತ್ತು. ಆದರೆ ಈ ಅಲ್ಪ ವ್ಯತ್ಯಾಸವು ‘ಇಂಡಿಯಾ’ ಮೈತ್ರಿಕೂಟಕ್ಕೆ 30 ಸ್ಥಾನಗಳನ್ನು ತಂದುಕೊಟ್ಟಿದೆ. ಎನ್‌ಡಿಎಗೆ 17 ಸ್ಥಾನಗಳು ಮಾತ್ರ ದೊರೆತಿವೆ.

ಲೋಕಸಭಾ ಚುನಾವಣೆಯ ಮತಗಳಿಕೆಯನ್ನು ವಿಧಾನಸಭಾ ಕ್ಷೇತ್ರವಾರು ವಿಂಗಡಿಸಿ ನೋಡಿದಾಗ ಎನ್‌ಡಿಎಗೆ 131 ಕ್ಷೇತ್ರಗಳಲ್ಲಿ ಮುನ್ನಡೆ ದೊರೆತಿದೆ. ವಿಧಾನಸಭಾ ಚುನಾವಣೆಯ ಸೀಟು ಹಂಚಿಕೆ ವೇಳೆ ಈ 131ರಲ್ಲಿ 79 ಕ್ಷೇತ್ರಗಳನ್ನು ಬಿಜೆಪಿಗೆ ಹಂಚಿಕೆ ಮಾಡಲಾಗಿದೆ.

ಕಾಂಗ್ರೆಸ್‌ನ ‘ಸಂವಿಧಾನ ಉಳಿಸಿ’ ಅಭಿಯಾನದ ಪ್ರಭಾವವು ಕಳೆದ ನಾಲ್ಕು ತಿಂಗಳುಗಳಲ್ಲಿ ಬಹಳ ಕಡಿಮೆಯಾಗಿದೆ ಎಂದು ಬಿಜೆಪಿ ಭಾವಿಸಿದೆ. ಆದರೆ ಪ್ರಚಾರದ ಕೊನೆಯ ದಿನಗಳಲ್ಲಿ ಅದೇ ನಿರೂಪಣೆಯನ್ನು ಪುನರುಜ್ಜೀವನಗೊಳಿಸುವ ಕಾಂಗ್ರೆಸ್‌ನ ಹೊಸ ಪ್ರಯತ್ನಗಳ ಬಗ್ಗೆ ಜಾಗರೂಕವಾಗಿದೆ.

ಇದೇ ಕಾರಣದಿಂದ ಮತದಾರರನ್ನು ಭಾವನಾತ್ಮಕವಾಗಿ ಸೆಳೆಯಲು ಯೋಗಿ ಅವರ ಹೇಳಿಕೆಯನ್ನು ಮುನ್ನೆಲೆಗೆ ತಂದಿದೆ. ಯೋಗಿ ಹೇಳಿಕೆಯನ್ನು ಅನುಸರಿಸಿ ಪ್ರಧಾನಿ ನರೇಂದ್ರ ಮೋದಿ ಅವರು ‘ಏಕ್ ಹೇ ತೊ ಸೇಫ್ ಹೆ’ (ಒಗ್ಗಟ್ಟಿನಿಂದ ಇದ್ದರೆ ನಾವು ಸುರಕ್ಷಿತವಾಗಿರುತ್ತೇವೆ) ಎಂಬ ಹೇಳಿಕೆ ಕೊಟ್ಟಿದ್ದಾರೆ. ಜಾತಿ ಧ್ರುವೀಕರಣವೇ ಈ ಹೇಳಿಕೆಗಳ ಉದ್ದೇಶ ಎಂದು ವಿಶ್ಲೇಷಿಸಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೆಲ ದಿನಗಳ ಹಿಂದೆ ನಾಗ್ಪುರದಲ್ಲಿ ಪಕ್ಷದ ಪ್ರಚಾರ ಅಭಿಯಾನಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ ‘ಸಂವಿಧಾನದ ತತ್ವಗಳನ್ನು ಆರ್‌ಎಸ್‌ಎಸ್ ವಿರೋಧಿಸುತ್ತದೆ’ ಎಂದು ಆರೋಪಿಸಿದ್ದರು. ಜಾತಿಗಣತಿಗೆ ಒತ್ತಾಯಿಸಿದ್ದ ಅವರು ಮೀಸಲಾತಿ ಮೇಲಿನ ಶೇ 50ರ ಮಿತಿಯನ್ನು ಮರುಪರಿಶೀಲಿಸಬೇಕು ಎಂದಿದ್ದರು.

ಕಾಂಗ್ರೆಸ್‌ನ ತಂತ್ರಗಳಿಗೆ ಪ್ರತಿಯಾಗಿ ಬಿಜೆಪಿಯ ‘ಉಗ್ರ ಹಿಂದುತ್ವ’ ಪ್ರಚಾರವು ಶಿಂದೆ ನೇತೃತ್ವದ ಶಿವಸೇನಾಗೂ ಸರಿಹೊಂದುತ್ತದೆ. ಆದರೆ, ರಾಜಕೀಯವಾಗಿ ವಿಭಜಿತವಾಗಿರುವ ಮಹಾರಾಷ್ಟ್ರದಲ್ಲಿ ಈ ಪ್ರಚಾರ ತಂತ್ರ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದರಲ್ಲಿ ಯಾರಿಗೂ ಖಚಿತತೆಯಿಲ್ಲ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
1	ದಕ್ಷಿಣ–2	ಬೆಂಜಮಂ/ಕಾನಿಅ(ದ–2)/ಪಿಬಿ/1233 /2024–25 ದಿನಾಂಕ: 06.11.2024	ರೂ. 41,16,613/– ರೂ. 82,400/–	19.11.2024ರ ಸಂಜೆ 4.00 ಗಂಟೆಯವರೆಗೆ	21.11.2024ರ ಸಂಜೆ 04.30 ಗಂಟೆಯ ನಂತರ
2		ಬೆಂಜಮಂ/ಕಾನಿಅ(ದ–2)/ಪಿಬಿ/1235 /2024–25 ದಿನಾಂಕ: 06.11.2024	ರೂ. 46,46,143/– ರೂ. 93,000/–		
3		ಬೆಂಜಮಂ/ಕಾನಿಅ(ದ–2)/ಪಿಬಿ/1237 /2024–25 ದಿನಾಂಕ: 06.11.2024	ರೂ. 10,33,025/– ರೂ. 25,900/–		
4		ಬೆಂಜಮಂ/ಕಾನಿಅ(ದ–2)/ಪಿಬಿ/1239 /2024–25 ದಿನಾಂಕ: 06.11.2024 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 29,15,973/– ರೂ. 29,200/–		
5		ಬೆಂಜಮಂ/ಕಾನಿಅ(ದ–2)/ಪಿಬಿ/1245 /2024–25 ದಿನಾಂಕ: 06.11.2024 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 45,30,290/– ರೂ. 45,350/–		
6		ಬೆಂಜಮಂ/ಕಾನಿಅ(ದ–2)/ತಾಂಅ/ ಪಿಬಿ/1241/2024–25 ದಿನಾಂಕ: 06.11.2024	ರೂ. 87,30,337/– ರೂ. 1,74,650/–	29.11.2024ರ ಸಂಜೆ 4.00 ಗಂಟೆಯವರೆಗೆ	02.12.2024ರ ಸಂಜೆ 04.30 ಗಂಟೆಯ ನಂತರ
7		ಬೆಂಜಮಂ/ಕಾನಿಅ(ದ–2)/ತಾಂಅ/ ಪಿಬಿ/1243/2024–25 ದಿನಾಂಕ: 06.11.2024 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ. 50,75,816/– ರೂ. 50,800/–		
8		ಬೆಂಜಮಂ/ಕಾನಿಅ(ದ–2)/ತಾಂಅ/ ಪಿಬಿ/1247/2024–25 ದಿನಾಂಕ: 06.11.2024	ರೂ. 68,88,632/– ರೂ. 1,37,800/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–2)					
ಮುಖ್ಯ ಅಭಿಯಂತರರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
9	ಉತ್ತರ –ಪೂರ್ವ	ಬೆಂಜಮಂ/ಕಾನಿಅ(ಉ–ಪೂ)/ತಾಂಅ/ ಪಿಬಿ/2316/2024–25 ದಿನಾಂಕ: 06.11.2024	ರೂ. 27,40,143/– ರೂ. 54,850/–	19.11.2024ರ ಸಂಜೆ 4.00 ಗಂಟೆಯವರೆಗೆ	20.11.2024ರ ಮಧ್ಯಾಹ್ನ 03.00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪೂರ್ವ)					
10	ಉತ್ತರ–2	ಬೆಂಜಮಂ/ಇಎನ್‌ಟಿಇ/ಸಅ–1/1732 /2024–25 ದಿನಾಂಕ: 07.11.2024	ರೂ. 63,63,837/– ರೂ. 1,27,300/–	18.11.2024ರ ಮಧ್ಯಾಹ್ನ 3.00 ಗಂಟೆಯವರೆಗೆ	19.11.2024ರ ಸಂಜೆ 04.00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–2)					
11	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2127/2024–25 ದಿನಾಂಕ: 07.11.2024 (2ನೇ ಕರೆ)	ರೂ. 56,22,495/– ರೂ. 1,12,500/–	19.11.2024ರ ಸಂಜೆ 5.00 ಗಂಟೆಯವರೆಗೆ	20.11.2024ರ ಸಂಜೆ 05.30 ಗಂಟೆಯ ನಂತರ
12		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2129/2024–25 ದಿನಾಂಕ: 07.11.2024 (2ನೇ ಕರೆ)	ರೂ. 46,95,014/– ರೂ. 93,900/–		
13		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2131/2024–25 ದಿನಾಂಕ: 07.11.2024 (2ನೇ ಕರೆ) (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ. 59,26,468/– ರೂ. 59,300/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)					
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
14	ಪಶ್ಚಿಮ–1	ಬೆಂಜಮಂ/ಕಾನಿಅ(ಪ–1)/ಪಿಬಿ/3151 /2024–25 ದಿನಾಂಕ: 08.11.2024	ರೂ. 19,98,321/– ರೂ. 50,000/–	20.11.2024ರ ಸಂಜೆ 4.00 ಗಂಟೆಯವರೆಗೆ	21.11.2024ರ ಸಂಜೆ 04.30 ಗಂಟೆಯ ನಂತರ
15		ಬೆಂಜಮಂ/ಕಾನಿಅ(ಪ–1)/ಪಿಬಿ/3152 /2024–25 ದಿನಾಂಕ: 08.11.2024	ರೂ. 63,60,190/– ರೂ. 1,27,300/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–1)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/3121/Zen/2024-25



ನೇಮಕಾತಿ ರ‍್ಯಾಲಿ

ಟೆರಿಟೋರಿಯಲ್ ಆರ್ಮಿಯಲ್ಲಿನ ಸೈನಿಕರ ಹುದ್ದೆಗಳ ನೇಮಕಾತಿ ರ‍್ಯಾಲಿಗೆ ಬೆಳಗಾವಿಗೆ ಬಂದಿದ್ದ ಯುವಕರು ಭಾನುವಾರ ಸಿಪಿಎಡ್ ಮೈದಾನದ ಮುಂಭಾಗದ ರಸ್ತೆಯಲ್ಲಿ ಕುಳಿತಿದ್ದರು. ರ‍್ಯಾಲಿಗೆ 30 ಸಾವಿರಕ್ಕೂ ಅಧಿಕ ಯುವಕರು ಬಂದ ಕಾರಣ ನೂಕುನುಗ್ಗಲು ಉಂಟಾಗಿತ್ತು. ಅವರನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು. ಈ ವೇಳೆ ಇಬ್ಬರು ಗಾಯಗೊಂಡರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ


‘ಸಿ.ಎಂ. ಪತ್ನಿ ಬದಲಿಗೆ ಅಧಿಕಾರಿಯಿಂದ ಮುದ್ರಾಂಕ ಶುಲ್ಕ ಪಾವತಿ’

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮುಡಾದಿಂದ 50:50 ಅನುಪಾತದಲ್ಲಿ ಮಂಜೂರಾಗಿದ್ದ ಬದಲಿ ನಿವೇಶನದ ಕ್ರಯಪತ್ರ ಸಂದರ್ಭ ಖರೀದಿದಾರರಾದ ಪಾರ್ವತಿ ಬದಲಿಗೆ ಮುಡಾದ ವಿಶೇಷ ತಹಶೀಲ್ದಾರ್ ಮುದ್ರಾಂಕ ಶುಲ್ಕವನ್ನು ಪಾವತಿಸಿದ್ದಾರೆ. ಇದು ಪ್ರಕರಣದಲ್ಲಿ ಸಿದ್ದರಾಮಯ್ಯ ಪ್ರಭಾವ ಬೀರಿರುವುದಕ್ಕೆ ಸಾಕ್ಷಿಯಾಗಿದೆ’ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಈ ಕುರಿತು ಫೇಸ್‌ಬುಕ್ ಖಾತೆಯಲ್ಲಿ ದಾಖಲೆಗಳನ್ನು ಹಂಚಿಕೊಂಡಿರುವ ಕೃಷ್ಣ ‘ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳುವವರು ಅದಕ್ಕೆ ಸಂಬಂಧಿಸಿದ ಶುಲ್ಕಗಳನ್ನು ಪಾವತಿ ಮಾಡಬೇಕು. ಆದರೆ ಪಾರ್ವತಿ ಅವರಿಗೆ 2022ರ ಜ.12ರಂದು ಮುಡಾ ಮಾಡಿಕೊಟ್ಟಿರುವ ನಿವೇಶನದ ಕ್ರಯಪತ್ರ ದಾಖಲೆಯಲ್ಲಿ ಮಾರಾಟಗಾರರಾದ ಮುಡಾ ವಿಶೇಷ ತಹಶೀಲ್ದಾರ್ ನಿಗದಿತ ಮುದ್ರಾಂಕ ಶುಲ್ಕ ಕಟ್ಟಿದ್ದಾರೆ. ಇದಕ್ಕೆ ಜನತೆಗೆ ಸಿದ್ದರಾಮಯ್ಯ ಉತ್ತರಿಸುವರೇ’ ಎಂದು ಪ್ರಶ್ನಿಸಿದ್ದಾರೆ.

‘ಮೀಸಲು ಕಸಿದು ಮುಸ್ಲಿಮರಿಗೆ’

ಪ್ರಜಾವಾಣಿ ವಾರ್ತೆ



ಅಮಿತ್ ಶಾ

ಮುಂಬೈ: ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳ ಮೀಸಲಾತಿ ಕಸಿದು ಅದನ್ನು ಮುಸ್ಲಿಮರಿಗೆ ನೀಡಲು ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಆಡಳಿತಾರೂಢ ಮಹಾಯುತಿ ಮೈತ್ರಿಕೂಟದ ಪ್ರಣಾಳಿಕೆ ‘ಸಂಕಲ್ಪ ಪತ್ರ’ವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ‘ಮುಸ್ಲಿಂ ಧರ್ಮಗುರುಗಳ ನಿಯೋಗವು ತಮ್ಮ ಸಮುದಾಯದ ಹಲವಾರು ಬೇಡಿಕೆಗಳ ಕುರಿತ ಪತ್ರವನ್ನು ಈಚೆಗೆ ಸಲ್ಲಿಸಿದೆ ಎಂಬ ಕುರಿತ ವರದಿಯನ್ನು ನಾನು ನೋಡಿದ್ದೇನೆ. ಮುಸ್ಲಿಮರ ಮೀಸಲಾತಿಗೆ ಸಂಬಂಧಿಸಿದ ಬೇಡಿಕೆಯೂ ಅದರಲ್ಲಿತ್ತು. ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು ಆ ಬೇಡಿಕೆಯನ್ನು ಒಪ್ಪಿಕೊಂಡಿದ್ದಾರೆ’ ಎಂದರು.

‘ಎಸ್‌ಸಿ, ಎಸ್‌ಟಿ, ಆದಿವಾಸಿಗಳು ಮತ್ತು ಒಬಿಸಿಗಳ ಮೀಸಲಾತಿ ಹಕ್ಕನ್ನು ಕಸಿದು ಮುಸ್ಲಿಮರಿಗೆ ನೀಡುವವರ ಪರವಾಗಿ ಮಹಾರಾಷ್ಟ್ರದ ಜನರು ಇದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಅಂಬೇಡ್ಕರ್ ಅವರ ಸಂವಿಧಾನದಲ್ಲಿ, ಧರ್ಮದ ಆಧಾರದ ಮೇಲೆ ಮೀಸಲಾತಿಗೆ ಯಾವುದೇ ಅವಕಾಶವಿಲ್ಲ. ಆದರೆ, ಅಧಿಕಾರಕ್ಕೆ ಬರುವ ಮುನ್ನವೇ ಕಾಂಗ್ರೆಸ್ ಪಕ್ಷವು ಮೀಸಲಾತಿಯ ಭರವಸೆ ನೀಡಿದೆ. ಜನರು ಇದನ್ನು ಅರ್ಥಮಾಡಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಮಹಾಯುತಿ ಮೈತ್ರಿಕೂಟ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಮತಾಂತರ ತಡೆಗೆ ಕಠಿಣ ಕಾನೂನು ತರುವುದರ ಬಗ್ಗೆ ಚರ್ಚಿಸಲು ಸಮಿತಿಯನ್ನು ರಚಿಸಲಾಗುವುದು ಎಂದು ತಿಳಿಸಿದರು. ‘ಮಹಾಯುತಿ’ ಕೂಟದ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ, ‘ಏಕನಾಥ ಶಿಂದೆ ಅವರು ಈಗ ನಮ್ಮ ಮುಖ್ಯಮಂತ್ರಿ ಆಗಿದ್ದಾರೆ. ಚುನಾವಣೆಯ ಫಲಿತಾಂಶ ಹೊರಬಿದ್ದ ಬಳಿಕ ಮೈತ್ರಿಕೂಟದ ಮೂರು ಪಕ್ಷಗಳ ಮುಖಂಡರು ಚರ್ಚಿಸಿ ಮುಂದಿನ ಮುಖ್ಯಮಂತ್ರಿಯನ್ನು ನಿರ್ಧರಿಸುವರು’ ಎಂದರು.

ಉದ್ಧವ್ ವಿರುದ್ಧ ಟೀಕೆ: ಎಂವಿಎ ಜತೆ ಕೈಜೋಡಿಸಿರುವ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ವಿರುದ್ಧ ಹರಿಹಾಯ್ದ ಶಾ, ‘ರಾಮಮಂದಿರ, ಪೌರತ್ವ (ತಿದ್ದುಪಡಿ) ಕಾಯ್ದೆ, ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮತ್ತು ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸುವವರ ಜತೆ ಉದ್ಧವ್ ಇದ್ದಾರೆ’ ಎಂದರು.

‘ಸಾವರ್ಕರ್ ಮತ್ತು ಬಾಳಾಸಾಹೇಬ್ ಠಾಕ್ರೆ ಅವರನ್ನು ಹೊಗಳಿ ಕೆಲವು ಮಾತುಗಳನ್ನಾಡಲು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ವಿನಂತಿಸಬಹುದೇ ಎಂದು ಉದ್ಧವ್ ಠಾಕ್ರೆ ಅವರನ್ನು ಕೇಳಲು ಬಯಸುತ್ತೇನೆ’ ಎಂದು ಹೇಳಿದರು.

ಸಂವಿಧಾನ ಪ್ರತಿ ಪ್ರದರ್ಶನ ವಿರುದ್ಧದ ಟೀಕೆಗೆ ಖರ್ಗೆ ತಿರುಗೇಟು

‘ಜನರ ದಾರಿ ತಪ್ಪಿಸುವ ಮೋದಿ, ಶಾ’

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಸಂವಿಧಾನದ ಪ್ರತಿಯನ್ನು ‘ನಗರ ನಕ್ಸಲಿಸಂ’ ಜತೆ ಜೋಡಿಸುವ ಮೂಲಕ ದೇಶದ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಭೆಗಳು ಮತ್ತು ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಸಂವಿಧಾನದ ಪ್ರತಿ (ಕೆಂಪು ಬಣ್ಣದ ಪಾಕೆಟ್ ಬುಕ್) ಪ್ರದರ್ಶಿಸುತ್ತಾ ಬಂದಿದ್ದಾರೆ. ರಾಹುಲ್ ಅವರ ನಡೆಯನ್ನು ಮೋದಿ ಮತ್ತು ಶಾ ಟೀಕಿಸಿದ್ದರು.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲು ಮುಂಬೈನಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಖರ್ಗೆ ಅವರು ಪ್ರಧಾನಿ ಹಾಗೂ ಗೃಹ ಸಚಿವರಿಗೆ ತಿರುಗೇಟು ನೀಡಿದರು.

‘ರಾಹುಲ್ ಅವರ ಕೈಯಲ್ಲಿರುವ ಪುಸ್ತಕವನ್ನು ಮೋದಿ ಅವರು ‘ನಗರ ನಕ್ಸಲ್’ ಪುಸ್ತಕ ಎಂದು ಕರೆದಿದ್ದಾರೆ. ಅದರಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ಇದೆ ಎಂದಿದ್ದಾರೆ. ಆದರೆ ರಾಹುಲ್ ಅವರು ಇದೇ ರೀತಿಯ ಪುಸ್ತಕವನ್ನು ರಾಮನಾಥ್ ಕೋವಿಂದ್ ಅವರಿಗೆ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ಮರುದಿನ (2017ರ ಜುಲೈ 26) ನೀಡಿದ್ದರು’ ಎಂದರು. ನವದೆಹಲಿಯಲ್ಲಿ ಅಂದು ನಡೆದಿದ್ದ ಸಮಾರಂಭದ ಫೋಟೊಗಳನ್ನೂ ಖರ್ಗೆ ಪ್ರದರ್ಶಿಸಿದರು.

‘ಮಹಾರಾಷ್ಟ್ರದಲ್ಲೂ ಜಾತಿಗಣತಿ’

‘ಎಂವಿಎ ಅಧಿಕಾರಕ್ಕೆ ಬಂದರೆ ಮಹಾರಾಷ್ಟ್ರದಲ್ಲಿ ಜಾತಿಗಣತಿ ನಡೆಸಲಾಗುವುದು. ತೆಲಂಗಾಣದಲ್ಲಿ ಜಾತಿಗಣತಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ’ ಎಂದು ಖರ್ಗೆ ಹೇಳಿದರು.

‘ಜಾತಿಗಣತಿ ನಡೆಸುವುದು ದೇಶವನ್ನು ವಿಭಜಿಸಲು ಅಲ್ಲ. ಉದ್ಯೋಗದ ವಿವರ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ ಮತ್ತು ಇತರ ವಿಷಯಗಳ ಬಗ್ಗೆ ನಿಖರವಾದ ಮಾಹಿತಿಯನ್ನು ತಿಳಿಯುವುದು ಇದರ ಉದ್ದೇಶ. ಜಾತಿಗಣತಿ ವರದಿ ಆಧರಿಸಿ ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನಾವು ಯೋಜನೆ ರೂಪಿಸುತ್ತೇವೆ’ ಎಂದರು.

‘ಕೆಂಪು ಬಣ್ಣದ ಪುಸ್ತಕದ ಒಳಭಾಗದಲ್ಲಿ ಖಾಲಿ ಹಾಳೆಗಳಿವೆ ಎಂದು ಮೋದಿ ಹಾಗೂ ಶಾ ಹೇಳುತ್ತಾರೆ. ಇಡೀ ಸಂವಿಧಾನ ಈ ಪುಸ್ತಕದಲ್ಲಿ ಇಲ್ಲ. ಸಂವಿಧಾನದ ಸಾರಾಂಶವನ್ನು ಇದರಲ್ಲಿ ನೀಡಲಾಗಿದೆ. ವಕೀಲರು ಮತ್ತು ಚಿಂತಕರು ಇದೇ ಪುಸ್ತಕವನ್ನು ಟಿಪ್ಪಣಿಯಾಗಿ ಬಳಸುವರು’ ಎಂದು ವಿವರಿಸಿದರು.

ರಾಹುಲ್ ಅವರು ಕೆಂಪು ಬಣ್ಣದ ಪುಸ್ತಕ ಕೈಯಲ್ಲಿ ಹಿಡಿದುಕೊಂಡು ನಗರ ನಕ್ಸಲರು ಮತ್ತು ದಂಗೆಕೋರರ ಜತೆ ಮೈತ್ರಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಈಚೆಗೆ ಆರೋಪಿಸಿದ್ದರು.

ಶಬರಿಮಲೆ ಯಾತ್ರೆ ವಿಶೇಷ ರೈಲು

ಬೆಂಗಳೂರು: ಶಬರಿಮಲೆ ಯಾತ್ರಿಕರಿಗೆ ಅನುಕೂಲ ಆಗುವಂತೆ ಕೊಚುವೇಲಿ–ಬೆಂಗಳೂರು ಎಸ್‌ಎಂವಿಟಿ ನಡುವೆ ವಿಶೇಷ ರೈಲುಗಳನ್ನು ಓಡಿಸಲು ದಕ್ಷಿಣ ರೈಲ್ವೆ ನಿರ್ಧರಿಸಿದೆ. ಎರಡೂ ಕಡೆಯಿಂದ ತಲಾ 12 ಟ್ರಿಪ್ ಇರಲಿವೆ.

ನವೆಂಬರ್ 12ರಿಂದ ಜನವರಿ 28ರವರೆಗೆ ಪ್ರತಿ ಮಂಗಳವಾರ ಸಂಜೆ 6.05ಕ್ಕೆ ಕೊಚುವೇಲಿಯಿಂದ ರೈಲು ಹೊರಡಲಿದ್ದು, ಮರುದಿನ ಬೆಳಿಗ್ಗೆ 10.55ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ. ನ.13 ರಿಂದ ಜ.29ರವರೆಗೆ ಪ್ರತಿ ಬುಧವಾರ ಮಧ್ಯಾಹ್ನ 12.45ಕ್ಕೆ ಬೆಂಗಳೂರು ಎಸ್‌ಎಂವಿಟಿಯಿಂದ ಹೊರಟು ಮರುದಿನ ಬೆಳಿಗ್ಗೆ 6.45ಕ್ಕೆ ಕೊಚುವೇಲಿ ತಲುಪಲಿದೆ.

ಪ್ರಯಾಣಿಕರು ಅಧಿಕೃತ ವೆಬ್‌ಸೈಟ್: www.enquiry.indianrail.gov.inಗೆ ಭೇಟಿ ನೀಡಿ, ಎನ್‌ಟಿಇಎಸ್ ಅಪ್ಲಿಕೇಶನ್ ಬಳಸಿ ಅಥವಾ 139ಕ್ಕೆ ಡಯಲ್ ಮಾಡುವ ಮೂಲಕ ಈ ರೈಲುಗಳ ಸಮಯವನ್ನು ಪರಿಶೀಲಿಸಬಹುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಮೌನವು ಒಂದು ಸಮುದ್ರ, ಮಾತು ಒಂದು ನದಿ. ಸಮುದ್ರವು ನಿಮ್ಮನ್ನು ಹುಡುಕುತ್ತಿರುವಾಗ, ನದಿಯತ್ತ ತೆರಳಬೇಡಿ. ಸಮುದ್ರದ ಮಾತನ್ನು ಆಲಿಸಿ.

–ರೂಮಿ

ಖಾಸಗಿ ಸ್ವತ್ತಿನ ಸ್ವಾಧೀನ ವಿಷಯ ಕಾಲಕ್ಕೆ ಅನುಗುಣವಾದ ತೀರ್ಪು

ವ್ಯಕ್ತಿಯ ಎಲ್ಲ ಸ್ವತ್ತುಗಳನ್ನು ‘ಸಮುದಾಯದ ಭೌತಿಕ ಸಂಪನ್ಮೂಲ’ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠವು ತೀರ್ಪು ನೀಡಿದೆ. ಈಗಿನ ಕಾಲದ ಸಾಮಾಜಿಕ ಮತ್ತು ಆರ್ಥಿಕ ನಿಲುವುಗಳಿಗೆ ಅನುಗುಣವಾಗಿ ಈ ತೀರ್ಪು ಇದೆ. ಮೂರು ದಶಕಗಳಿಂದ ಈ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇತ್ತು. ಈ ಮೂರು ದಶಕಗಳು ಆರ್ಥಿಕ ಉದಾರೀಕರಣದ ಯುಗ. ಈ ಯುಗವು ವ್ಯಕ್ತಿಯ ಆಸ್ತಿ ಹೊಂದುವ ಹಕ್ಕು ಮತ್ತು ಅದನ್ನು ಅನುಭವಿಸುವ ಅವಕಾಶಕ್ಕೆ ಹೆಚ್ಚು ಮಹತ್ವ ಕೊಡುತ್ತದೆಯೇ ವಿನಾ ಸಾರ್ವಜನಿಕ ಬಳಕೆಗಾಗಿ ಸಮಾಜಕ್ಕೆ ಅದರ ಮೇಲೆ ಹಕ್ಕಿದೆ ಎಂಬುದಕ್ಕೆ ಅಲ್ಲ. ಸಂವಿಧಾನದ 39 (ಬಿ) ವಿಧಿಯ ಅಡಿಯಲ್ಲಿ, ಎಲ್ಲ ಖಾಸಗಿ ಸ್ವತ್ತುಗಳನ್ನು ‘ಸಮುದಾಯದ ಭೌತಿಕ ಸಂಪನ್ಮೂಲ’ ಎಂದು ಪರಿಗಣಿಸಿ ಮರು ಹಂಚಿಕೆ ಮಾಡಲು ಸಾಧ್ಯವಿಲ್ಲ ಎಂದು ನ್ಯಾಯಾಲಯವು ತೀರ್ಪಿನಲ್ಲಿ ಹೇಳಿದೆ. ಸಮುದಾಯದ ಭೌತಿಕ ಸಂಪನ್ಮೂಲದ ಮಾಲೀಕತ್ವ ಮತ್ತು ನಿಯಂತ್ರಣವು ಸಮಾಜದ ಅತ್ಯುತ್ತಮ ಹಿತಕ್ಕಾಗಿ ಮರುಹಂಚಿಕೆ ಆಗುವಂತೆ ಸರ್ಕಾರವು ನೀತಿ ರೂಪಿಸಬೇಕು ಎಂದು ಈ ವಿಧಿಯ ನಿರ್ದೇಶನಾತ್ಮಕ ತತ್ವವು ಹೇಳುತ್ತದೆ.

ಈ ವಿಷಯಕ್ಕೆ ಸಂಬಂಧಿಸಿ ಈ ಹಿಂದೆ ಭಿನ್ನವಾದ ಮತ್ತು ಪರಸ್ಪರ ವಿರುದ್ಧವಾದ ತೀರ್ಪುಗಳು ಬಂದಿವೆ. ಹಾಗಾಗಿ, ಈ ವಿಚಾರವನ್ನು ವಿಸ್ತೃತ ಪೀಠಕ್ಕೆ ವಹಿಸಲಾಗಿತ್ತು. ಈ ವಿಚಾರದಲ್ಲಿ ಸಂದರ್ಭಕ್ಕೆ ಅನುಗುಣವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು, ಅದು ಪ್ರಕರಣದಿಂದ ಪ್ರಕರಣಕ್ಕೆ ಭಿನ್ನವಾಗಿರಬಹುದು ಎಂದು ಸಂವಿಧಾನ ಪೀಠವು ಹೇಳಿದೆ. ಈ ಹಿಂದೆ ಈ ವಿಚಾರವನ್ನು ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಅವರು ರಂಗನಾಥ ರೆಡ್ಡಿ ಪ್ರಕರಣದಲ್ಲಿ 1978ರಲ್ಲಿ ವ್ಯಾಖ್ಯಾನಕ್ಕೆ ಒಳಪಡಿಸಿದ್ದರು. ಈ ವ್ಯಾಖ್ಯಾನವು ಸಂವಿಧಾನದ ಉದ್ದೇಶಕ್ಕೆ ವಿರುದ್ಧವಾಗಿದ್ದು, ನಿರ್ದಿಷ್ಟ ಆರ್ಥಿಕ ಸಿದ್ಧಾಂತವನ್ನು ಹೇರುವಂತಿದೆ ಎಂದು ಬಹುಮತದ ತೀರ್ಪಿನಲ್ಲಿ ಸಂವಿಧಾನ ಪೀಠವು ಹೇಳಿದೆ. ಸಾರ್ವಜನಿಕ ಉದ್ದೇಶಕ್ಕಾಗಿ ಸಂಪತ್ತಿನ ಮರುಹಂಚಿಕೆಗೆ ಹೆಚ್ಚಿನ ಮಹತ್ವ ಇರಬೇಕು ಎಂಬುದು ಆ ಕಾಲದ ಚಿಂತನೆಯಾಗಿತ್ತು; ಈ ಸಾಮಾಜಿಕ ತತ್ವಗಳು ಅಯ್ಯರ್ ಅವರ ವ್ಯಾಖ್ಯಾನದಲ್ಲಿ ಪ್ರತಿಫಲಿತವಾಗಿರಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಆರ್ಥಿಕ ನೀತಿಗೆ ಸಂಬಂಧಿಸಿ ಯಾವುದೇ ಸಿದ್ಧಾಂತ ಅಥವಾ ತತ್ವಗಳು ಸಂವಿಧಾನದಲ್ಲಿ ಉಲ್ಲೇಖವಾಗಿಲ್ಲ ಎಂಬುದನ್ನು ನ್ಯಾಯಾಲಯವು ಗುರುತಿಸಿದೆ. ಹಾಗಾಗಿ, ವ್ಯಕ್ತಿಗಳ ಖಾಸಗಿ ಸ್ವತ್ತುಗಳಿಗೆ ಸಂಬಂಧಿಸಿ ನಿರ್ದೇಶನಾತ್ಮಕ ತತ್ವಗಳಿಗೆ ಮಹತ್ವ ನೀಡುವುದು ಸರಿಯಲ್ಲ. ಸಂಪನ್ಮೂಲವು ನ್ಯಾಯಯುತವಾಗಿ ಹಂಚಿಕೆ ಆಗುವಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಹೊಣೆಗಾರಿಕೆ. ಆದರೆ, ಅದು ವೈಯಕ್ತಿಕ ಹಕ್ಕುಗಳಿಗೆ ಸಂಬಂಧಿಸಿದ ನಿಯಮಗಳ ಮಿತಿಯಲ್ಲಿಯೇ ಇರಬೇಕು.



ಮುಂದಿನ ದಿನಗಳಲ್ಲಿ ರೂಪುಗೊಳ್ಳುವ ಕಾಯ್ದೆಗಳು, ಸರ್ಕಾರದ ನಿರ್ಧಾರಗಳನ್ನು ಈ ತೀರ್ಪಿನ ಆಧಾರದಲ್ಲಿ ನಿಕಷಕ್ಕೆ ಒಳಪಡಿಸಬಹುದು

ಖಾಸಗಿ ಸಂಪನ್ಮೂಲವು ಸಮುದಾಯದ ಭೌತಿಕ ಸಂಪನ್ಮೂಲದ ಪರಿಧಿಯಲ್ಲಿ ಇದೆಯೇ ಎಂಬುದನ್ನು ನಿರ್ಧರಿಸಲು ನ್ಯಾಯಾಲಯವು ನಿರ್ದಿಷ್ಟ ಮಾನದಂಡಗಳನ್ನು ನೀಡಿದೆ. ಸಂಪನ್ಮೂಲದ ಲಕ್ಷಣಗಳು, ಅಂತಹ ಸಂಪನ್ಮೂಲದ ತೀವ್ರ ಕೊರತೆ ಮತ್ತು ಸಮಾಜದ ಅಭಿವೃದ್ಧಿಯ ಮೇಲೆ ಉಂಟಾಗುವ ಪರಿಣಾಮಗಳಂತಹ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬಹುದು ಎಂದು ಹೇಳಿದೆ. ಖಾಸಗಿ ಮಾಲೀಕತ್ವಕ್ಕೆ ರಕ್ಷಣೆ ನೀಡಿದಾಗಲೂ ಸಾರ್ವಜನಿಕ ಬಳಕೆಗೆ ಲಭ್ಯವಿರುವ ನೈಸರ್ಗಿಕ ನಿಕ್ಷೇಪಗಳು ಅಥವಾ ಸ್ಪೆಕ್ಟ್ರಂನಂತಹ ಸಂಪನ್ಮೂಲಗಳ ವಿಚಾರದಲ್ಲಿ ಈ ತೀರ್ಪು ಅಡ್ಡಿಯಾಗುವುದಿಲ್ಲ. ಸಂವಿಧಾನವು ನೀಡಿರುವ ವೈಯಕ್ತಿಕ ಹಕ್ಕುಗಳಿಗೆ ಅನುಗುಣವಾಗಿ ಆರ್ಥಿಕ ನೀತಿಯನ್ನು ರೂಪಿಸಬೇಕು ಎಂಬುದಕ್ಕೆ ತೀರ್ಪಿನಲ್ಲಿ ಮಹತ್ವ ನೀಡಲಾಗಿದೆ. ಈವರೆಗೆ ಇದ್ದ ಅಸಮತೋಲನವನ್ನು ಸರಿಪಡಿಸುವಂತೆಯೂ ನ್ಯಾಯಾಲಯ ಸೂಚಿಸಿದೆ. ‘ಆರ್ಥಿಕ ಪ್ರಜಾತಂತ್ರದ ನೆಲಗಟ್ಟು ರೂಪಿಸುವ ನೀತಿ ನಿರೂಪಕರ ಇಂಗಿತಕ್ಕೆ ನೆರವಾಗುವುದು ತನ್ನ ಕೆಲಸವೇ ಹೊರತು ಆರ್ಥಿಕ ನೀತಿ ರೂಪಿಸುವುದು ಅಲ್ಲ’ ಎಂದು ಕೋರ್ಟ್ ಹೇಳಿದೆ. ಮುಂದಿನ ದಿನಗಳಲ್ಲಿ ರೂಪುಗೊಳ್ಳುವ ಕಾಯ್ದೆಗಳು ಮತ್ತು ಸರ್ಕಾರದ ನಿರ್ಧಾರಗಳನ್ನು ಈ ತೀರ್ಪಿನ ಆಧಾರದಲ್ಲಿ ನಿಕಷಕ್ಕೆ ಒಳಪಡಿಸಬಹುದು.

ದಿನದ ಟ್ವೀಟ್

ಉತ್ತಮ ಆಹಾರ ನಮ್ಮ ಆಯ್ಕೆಯಾಗಲಿ



ಸ್ವಿಗ್ಗಿ, ಜೊಮಾಟೊ, ಬ್ಲಿಂಕಿಟ್ ಮತ್ತು ಜೆಪ್ಟೊವಿನ ಹಿಂದಿನ ವರ್ಷದ ಒಟ್ಟು ವರಮಾನ ₹ 35,000 ಕೋಟಿ. ಇದು, ಮನೆಯಲ್ಲಿ ಸ್ವತಃ ಅಡುಗೆ ಮಾಡಿಕೊಳ್ಳದೆ, 10 ನಿಮಿಷದಲ್ಲಿ ವಸ್ತುಗಳನ್ನು ತರಿಸಿಕೊಳ್ಳುವ ಅಪೇಕ್ಷೆಯಿಂದ ನಾವೇ ಸೃಷ್ಟಿಸಿರುವ ಉದ್ಯಮದ ಗಾತ್ರ.

ದಿಲೀಪ್ ಕುಮಾರ್, ಉದ್ಯಮಿ

ಕಿಡಿನುಡಿ



ಹಣಕಾಸಿನ ವಿಚಾರ ಅರಿತುಕೊಳ್ಳಲು ಇಂಟರ್ನೆಟ್ ಯುಗದಲ್ಲಿ ನೂರಾರು ಮಾರ್ಗಗಳಿವೆ. ಯೂಟ್ಯೂಬಿನಲ್ಲಿ ಸಾವಿರಾರು ವಿಡಿಯೊಗಳಿವೆ. ಬಹಳಷ್ಟು ಉಚಿತವಾಗಿ ಸಿಗುತ್ತವೆ, ಫೀಸ್ ಕೊಟ್ಟು ಪಡೆಯುವ ಒಂದಷ್ಟು ಕೋರ್ಸ್‌ಗಳು ಇರುತ್ತವೆ. ...ಜನರಿಗೆ ಟೋಪಿ ಹಾಕುವ ಕೋರ್ಸ್‌ಗಳೂ ಇವೆ. ಕಡೇ 10% ಸೀಟುಗಳು ಮಾತ್ರ ಬಾಕಿ ಇವೆ, 10% ರಿಯಾಯಿತಿಯಲ್ಲಿ ಬೇಗ ತೆಗೆದುಕೊಳ್ಳಿ ಅಂತೆಲ್ಲಾ ಹೇಳುತ್ತಾರೆ. ಇಂತಹ ಗಿಲೀಟು ಮಾತುಗಳಿಗೆ ಮರುಳಾಗಬೇಡಿ... ಕಾಸು ಮಾಡೋದು ಅಷ್ಟು ಸುಲಭ ಆಗಿದ್ದರೆ ಎಲ್ಲರೂ ಕೋಟ್ಯಧಿಪತಿಗಳು ಆಗಬೇಕಿತ್ತು. ಪೇಡ್ ಸರ್ವಿಸ್ ಪಡೆಯುವುದು ತಪ್ಪಲ್ಲ. ಅದಕ್ಕೆ ಸರಿಯಾದ ಚೌಕಟ್ಟು ಇರಬೇಕು...

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

25 ವರ್ಷಗಳ ಹಿಂದೆ

ಗುರುವಾರ, 11-11-1999

● ರಾಜ್ಯದಿಂದ ಒರಿಸ್ಸಾ ಕೇಂದ್ರಪಾಡ ಜಿಲ್ಲೆ ದತ್ತು

ಬೆಂಗಳೂರು, ನ. 10– ‘ಒರಿಸ್ಸಾದಲ್ಲಿ ಸಂಭವಿಸಿದ ಭೀಕರ ಚಂಡಮಾರುತದಲ್ಲಿ ಅಪಾರ ಹಾನಿಗೆ ಒಳಗಾಗಿರುವ ಐದು ಜಿಲ್ಲೆಗಳ ಪೈಕಿ ಕೇಂದ್ರಪಾಡ ಜಿಲ್ಲೆಯನ್ನು ಕರ್ನಾಟಕ ದತ್ತು ತೆಗೆದುಕೊಳ್ಳಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಪ್ರಕಟಿಸಿದರು.

ಚಂಡಮಾರುತ ಸಂತ್ರಸ್ತರಿಗೆ ಉಚಿತವಾಗಿ ವಿತರಣೆ ಮಾಡಲು ಸುಮಾರು 1.12 ಕೋಟಿ ರೂಪಾಯಿಗಳಷ್ಟು ಮೌಲ್ಯದ ಔಷಧಿ ಮತ್ತಿತರ ಅಗತ್ಯ ಸಾಮಗ್ರಿಗಳನ್ನು ತುಂಬಿದ 13 ಲಾರಿಗಳು ಭುವನೇಶ್ವರಕ್ಕೆ ತೆರಳಲು ಹಸಿರು ನಿಶಾನೆ ತೋರುವ ಮುನ್ನ ಅವರು ಮಾತನಾಡಿದರು.

ಕೇಂದ್ರಪಾಡ ಜಿಲ್ಲೆ ಹೆಚ್ಚಿನ ಪ್ರಮಾಣದಲ್ಲಿ ಜೀವ ಮತ್ತು ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡಿದೆ. ಇಲ್ಲಿನ ನಿರ್ಗತಿಕ ಜನರಿಗೆ ಗರಿಷ್ಠ ಪ್ರಮಾಣದಲ್ಲಿ ನೆರವು ನೀಡಲು ಪ್ರಯತ್ನಿಸಲಾಗುವುದು ಎಂದರು.

● ಭಾರತ– ಪಾಕಿಸ್ತಾನ ಷೆಲ್ ದಾಳಿ: 26 ಸಾವು

ಶ್ರೀನಗರ, ನ. 10– (ಯುಎನ್‌ಐ, ಪಿಟಿಐ)– ಉತ್ತರ ಕಾಶ್ಮೀರದ ಎರಡು ಠಾಣೆಗಳ ಮೇಲೆ ಪಾಕಿಸ್ತಾನಿ ಅತಿಕ್ರಮಣಕಾರರು ದಾಳಿ ನಡೆಸಿದ್ದರಿಂದ ಭಾರತ ಮತ್ತು ಪಾಕ್ ಪಡೆಗಳ ನಡುವೆ ಕಾಳಗ ನಡೆದು 9 ಮಂದಿ ಭಾರತೀಯ ಸೈನಿಕರು ಹಾಗೂ 17 ಮಂದಿ ಪಾಕ್ ಯೋಧರು ಸೇರಿದಂತೆ 26 ಮಂದಿ ಸತ್ತಿದ್ದಾರೆ. ಅಲ್ಲದೆ 12 ಮಂದಿ ಗಾಯಗೊಂಡಿದ್ದಾರೆ.

ಈ ನಡುವೆ, ಜಮ್ಮುವಿನ ರಜೌರಿ ವಲಯದ ನೌಷೇರಾ ಮತ್ತು ಲಾಮ್ ಪ್ರದೇಶದಲ್ಲಿ ಪಾಕಿಸ್ತಾನದ ನಾಲ್ಕು ಬಂಕರ್‌ಗಳನ್ನು ಧ್ವಂಸ ಮಾಡಲಾಗಿದೆ. ನಿನ್ನೆಯಿಂದ ವಾಸ್ತವ ನಿಯಂತ್ರಣ ರೇಖೆಯಲ್ಲಿ ಪಾಕಿಸ್ತಾನಿ ಪಡೆಗಳು ಅಪ್ರಚೋದಿತ ದಾಳಿ ನಡೆಸಿವೆ.

ಈ ದಾಳಿಯಿಂದ ಉಂಟಾದ ಸಾವು ನೋವಿನ ವಿವರಗಳು ಲಭ್ಯವಾಗಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 11-11-1974

● ಮನೆದೂಳು ಉಬ್ಬಸಕ್ಕೆ ಮೂಲ

ನವದೆಹಲಿ, ನ. 10– ಮನೆಯಲ್ಲಿ ದೂಳು ಸೇರಿದರೆ ಅಪಾಯ. ಅನೇಕರಿಗೆ ದೂಳು ಒಗ್ಗದೇ ಉಬ್ಬಸ ಬರುವುದುಂಟು. ಉಬ್ಬಸದಿಂದ ಪಾರಾಗಲು ಮನೆಯಲ್ಲಿ ದೂಳು ಸೇರದಂತೆ ನೋಡಿಕೊಳ್ಳಬೇಕು.

–ಉಬ್ಬಸ ಮತ್ತು ಶ್ವಾಸನಾಳಗಳ ಉರಿಯೂತ (ಬ್ರಾಂಕೈಟಿಸ್) ಕುರಿತ ವಿಶ್ವ ಸಮ್ಮೇಳನದಲ್ಲಿ ಭಾರತ, ಬ್ರಿಟನ್, ಥಾಯ್ಲೆಂಡ್ ಮತ್ತು ಹಾಂಗ್‌ಕಾಂಗ್‌ನ ವೈದ್ಯ ವಿಜ್ಞಾನಿಗಳು ಈ ಅಂಶವನ್ನು ಒತ್ತಿ ಹೇಳಿದರು.

ದೂಳಿನಲ್ಲಿ ಇರುವ ಡಿ. ಟರೋನಿಸಿನಿಸ್, ಡಿ.ಫಾರ್ನೇ ಎಂಬ ಎರಡು ಬಗೆಯ ಸೂಕ್ಷ್ಮ ಕಣಗಳು ಉಬ್ಬಸವನ್ನು ಕೆರಳಿಸುತ್ತವೆ ಎಂದು ಬ್ರಿಟನ್ನಿನ ಡಾ. ಡಿ.ಜಿ. ರೈತ್ ಹೇಳಿದರು.

● ಪ್ರಧಾನಿ ಜತೆ ಚರ್ಚಿಸಿದ ವರದಿ ನಿಜವಲ್ಲ: ಅರಸು

ಬೆಂಗಳೂರು, ನ. 10– ಕರ್ನಾಟಕ ಮಂತ್ರಿ ಮಂಡಲವನ್ನು ಇನ್ನಷ್ಟು ವಿಸ್ತರಿಸುವ ಸಂಬಂಧದಲ್ಲಿ ತಾವು, ನಿನ್ನೆ ಪ್ರಧಾನಿ ಅವರೊಡನೆ ಮಾತುಕತೆ ನಡೆಸಿದುದಾಗಿ ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ನಿರಾಕರಿಸಿದ್ದಾರೆ.

‘ಪ್ರಧಾನಿ ಜತೆ ನಾನೇನೂ ಮಾತನಾಡಿಲ್ಲ’ ಎಂದು, ಬೆಳಿಗ್ಗೆ ದೆಹಲಿಯಿಂದ ಮರಳಿದ ಶ್ರೀ ಅರಸು ಅವರು, ಮನೆಯಲ್ಲಿ ಭೇಟಿಯಾದ ವರದಿಗಾರರಿಗೆ ತಿಳಿಸಿದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿನ ಸಂವಾದಗಳಲ್ಲಿ ಎಡಪಂಥೀಯರದು ಯಥೋಚಿತವಲ್ಲದ ಪಾಲು

ಅಮೆರಿಕದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪಾಠ



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಭಾರತದಲ್ಲಿ ಕಾಂಗ್ರೆಸ್ ಪಕ್ಷವು ತನ್ನನ್ನು ಹೈಜಾಕ್ ಮಾಡಲು ತೀರಾ ಎಡಪಂಥೀಯರಿಗೆ ಅವಕಾಶ ಮಾಡಿಕೊಟ್ಟ ಬಗೆಯಲ್ಲೇ, ಅಮೆರಿಕದ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು ಎಡಪಂಥೀಯ ಬುದ್ಧಿಜೀವಿಗಳ ಬಲೆಗೆ ಬಿದ್ದರು. ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋಲು ಕಂಡರು.

ಡೆಮಾಕ್ರಟಿಕ್ ಪಕ್ಷವು ದುಡಿಯುವ ವರ್ಗದವರ ಪರ ಎನ್ನಲಾಗಿತ್ತು. ಆದರೆ ಹಲವು ವರ್ಷಗಳಿಂದ ಅದು ಅಮೆರಿಕದ ಜನಸಾಮಾನ್ಯರ ಭಾವನೆಗಳು, ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳಲಿಲ್ಲ. ದಕ್ಷಿಣ ಅಮೆರಿಕ ಮತ್ತು ಅರಬ್ ದೇಶಗಳಿಂದ ಅಕ್ರಮ ವಲಸಿಗರು ಭಾರಿ ಸಂಖ್ಯೆಯಲ್ಲಿ ಅಮೆರಿಕವನ್ನು ಪ್ರವೇಶಿಸಿ, ಅಲ್ಲಿ ಅಪರಾಧ ಪ್ರಕರಣಗಳು ಹೆಚ್ಚಿ, ಉದ್ಯೋಗ ಕಡಿತ ಎದುರಾದರೂ ಡೆಮಾಕ್ರಟಿಕ್ ಪಕ್ಷವು ಅಮೆರಿಕದ ಉನ್ನತ ವಿಶ್ವವಿದ್ಯಾಲಯಗಳಲ್ಲಿ ಹಮಾಸ್ ಪರವಾದ ರ‍್ಯಾಲಿಗಳಿಗೆ ಬೆಂಬಲ ನೀಡುವ ಕಾರ್ಯದಲ್ಲಿ ತೊಡಗಿತ್ತು. ಅಮೆರಿಕದ ಜನಸಾಮಾನ್ಯರ ಆರ್ಥಿಕ ಸಂಕಷ್ಟಕ್ಕಿಂತಲೂ ಹೆಚ್ಚಾಗಿ, ಅಕ್ರಮ ವಲಸಿಗರ ಸ್ಥಿತಿ ಹಾಗೂ ಅವರ ಮಾನವ ಹಕ್ಕುಗಳ ಬಗ್ಗೆ ಪಕ್ಷವು ಹೆಚ್ಚು ಚಿಂತಿತವಾಗಿದೆ ಎಂಬ ಅರ್ಥವನ್ನು ಪಕ್ಷದ ನಾಯಕರ ಹೇಳಿಕೆಗಳು ನೀಡುತ್ತಿದ್ದವು. ಅಲ್ಲಿನ ಬಹುಸಂಖ್ಯಾತರ– ಅಂದರೆ, ಬಿಳಿಯರು, ಕ್ರೈಸ್ತರು– ಭಾವನೆಗಳಿಗೆ ಬೆಲೆಯೇ ಇರಲಿಲ್ಲ. ಜನರು ಎದುರಿಸುತ್ತಿದ್ದ ಹಣದುಬ್ಬರದ ಸಮಸ್ಯೆ ಬಗ್ಗೆ ಕಮಲಾ ಅವರಿಗೆ ಅರಿವೇ ಇದ್ದಂತಿರಲಿಲ್ಲ.

ಇನ್ನೊಂದೆಡೆ, ಡೊನಾಲ್ಡ್ ಟ್ರಂಪ್ ಅವರು ನೇರವಾಗಿ, ಖಡಾಖಂಡಿತವಾಗಿ ಮಾತನಾಡುತ್ತಿದ್ದರು. ಜನರು ತಮಗೆ ಮತ ನೀಡಬೇಕು, ಆಗ ಅಪರಾಧ ಹಿನ್ನೆಲೆಯ ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕಲು ಸಾಧ್ಯವಾಗುತ್ತದೆ, ಮೆಕ್ಸಿಕೊ ಹಾಗೂ ಇತರ ದೇಶಗಳಿಂದ ಅಕ್ರಮ ವಲಸಿಗರು ದೇಶವನ್ನು ಪ್ರವೇಶಿಸುವುದನ್ನು ತಡೆಯಲು ಬೇಲಿ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ಟ್ರಂಪ್ ಹೇಳಿದರು. ಅಮೆರಿಕದಲ್ಲಿ ತಯಾರಿಕೆಗೆ ಉತ್ತೇಜನ ನೀಡಲಾಗುತ್ತದೆ, ಚೀನಾದ ವಸ್ತುಗಳ ಆಮದು ತಗ್ಗಿಸಲು ಅವುಗಳ ಮೇಲೆ ತೆರಿಗೆ ಹೆಚ್ಚಿಸಲಾಗುತ್ತದೆ, ಅಮೆರಿಕದ ಅರ್ಥವ್ಯವಸ್ಥೆಗೆ ಶಕ್ತಿ ನೀಡಲಾಗುತ್ತದೆ ಎಂದರು.

ಕಾಂಗ್ರೆಸ್ ಪಕ್ಷವು ಭಾರತದಲ್ಲಿ ವಿಭಜನಕಾರಿ ಶಕ್ತಿಗಳಿಗೆ ಹಾಗೂ ಅಕ್ರಮವಾಗಿ ವಲಸೆ ಬರುವ ರೊಹಿಂಗ್ಯಾ ಸಮುದಾಯದವರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲ ನೀಡುವ ರೀತಿಯಲ್ಲಿ, ಉತ್ತರ ಪ್ರದೇಶದಲ್ಲಿ ಕ್ರಿಮಿನಲ್‌ಗಳು ಮತ್ತು ಪಾತಕಿಗಳ ವಿರುದ್ಧ ಕ್ರಮ ಕೈಗೊಳ್ಳುವುದನ್ನು ವಿರೋಧಿಸುವ ರೀತಿಯಲ್ಲೇ ಅಮೆರಿಕದಲ್ಲಿ ಡೆಮಾಕ್ರಟಿಕ್ ಪಕ್ಷ ಕೂಡ ವರ್ತಿಸುತ್ತದೆ. ಪಾಕಿಸ್ತಾನದ ಭಯೋತ್ಪಾದಕರಿಗಾಗಿ ಕಣ್ಣೀರು ಸುರಿಸುವ ಫಾರೂಕ್ ಅಬ್ದುಲ್ಲಾ ಅವರಂಥವರು ಕಾಂಗ್ರೆಸ್ಸಿಗೆ ಮಿತ್ರರು.

ಎಡಪಂಥದ ಬಲೆಯಲ್ಲಿ ಸಿಲುಕಿದ ಅಮೆರಿಕದ ಮಾಧ್ಯಮಗಳ ಒಂದು ದೊಡ್ಡ ವರ್ಗವು ರಿಪಬ್ಲಿಕನ್ ಪಕ್ಷ ಹಾಗೂ ಟ್ರಂಪ್ ವಿರುದ್ಧ ವಿಷಕಾರುತ್ತಿತ್ತು. ಅಧ್ಯಕ್ಷೀಯ ಚುನಾವಣೆಯ ಗತಿಯ ವಿಚಾರವಾಗಿ ಅಮೆರಿಕದ ಜನರನ್ನು ತಪ್ಪುದಾರಿಗೆ ಎಳೆಯಲು ಯತ್ನಿಸಿತು. ಕಮಲಾ ಅವರು ಚುನಾವಣೆಯಲ್ಲಿ ಮುಂದಿದ್ದಾರೆ ಎಂದು ಜಗತ್ತಿನ ಇತರೆಡೆಗಳಲ್ಲಿನ ಜನ ನಂಬುವಂತೆ ಮಾಡಿದರೂ ಅಮೆರಿಕದ ಜನ ಮೋಸ ಹೋಗಲಿಲ್ಲ, ಅವರು ಇಂಥವರಿಗೆ ಪಾಠ ಕಲಿಸಲು ತೀರ್ಮಾನಿಸಿದರು.

ಕಮಲಾ ಮತ್ತು ಅವರ ತಂಡದ ಸದಸ್ಯರು ಟ್ರಂಪ್ ಅವರನ್ನು ‘ಹಿಟ್ಲರ್’, ಸರ್ವಾಧಿಕಾರಿ, ಜನಾಂಗೀಯವಾದಿ, ಸ್ತ್ರೀದ್ವೇಷಿ, ನಂಬಲು ಅರ್ಹರಲ್ಲ, ಅವಲಕ್ಷಣದ ವ್ಯಕ್ತಿ, ಸಾರ್ವಜನಿಕ ಹುದ್ದೆಯನ್ನು ಹೊಂದಲು ಅನರ್ಹ’ ಎಂದೆಲ್ಲ ಕರೆದರು. ಕಮಲಾ ಪರವಾಗಿ ಮಾತನಾಡಲು ಇದ್ದ ಬಹುತೇಕರು ಹಾರ್ವರ್ಡ್, ಸ್ಟ್ಯಾನ್‌ಫೋರ್ಡ್ ಮತ್ತು ಯೇಲ್‌ನಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ ಬಂದವರು.

ಇಂಥದ್ದು ಭಾರತದಲ್ಲಿಯೂ ಆಗಿದ್ದನ್ನು ಗುರುತಿಸಬಹುದು. ನಮ್ಮ ದೇಶದಲ್ಲಿ ಪ್ರತಿಷ್ಠಿತ ಎಂದು ಕರೆಸಿಕೊಂಡ ಜೆಎನ್‌ಯುನಂತಹ ವಿಶ್ವವಿದ್ಯಾಲಯಗಳು, ಸೇಂಟ್ ಸ್ಟೀಫನ್ಸ್‌ನಂತಹ ಕಾಲೇಜಿನಿಂದ ಬಂದವರು ದೇಶವನ್ನು ನಡೆಸಬೇಕಿರುವುದು ಹೇಗೆಂಬುದು ತಮಗೆ ತಿಳಿದಿದೆ ಎಂದು ಭಾವಿಸಿದ್ದಾರೆ. ತಮ್ಮ ಮಾತೇ ಅಂತಿಮವಾಗಬೇಕು ಎಂದು ಭಾವಿಸಿರುವ ಇವರು, ಮಾಧ್ಯಮಗಳ ಕಾರ್ಯಸೂಚಿ ಏನಿರಬೇಕು ಎಂಬುದನ್ನು ನಿರ್ಧರಿಸಲು ಯತ್ನಿಸುತ್ತಾರೆ. ಇವರಲ್ಲಿ ಬಹುತೇಕರು ಬಿಜೆಪಿ ಹಾಗೂ ನರೇಂದ್ರ ಮೋದಿ ಅವರನ್ನು ದ್ವೇಷಿಸುತ್ತಾರೆ. ಕಮ್ಯುನಿಸ್ಟ್ ಅಥವಾ ಎಡಪಂಥದ ಒಲವು ಇಲ್ಲದವರು ನಮ್ಮ ಪ್ರಜಾತಂತ್ರದಲ್ಲಿ ಸ್ಥಾನ ಹೊಂದಿರಬಾರದು ಎಂದು ಇವರು ನಂಬಿದ್ದಾರೆ. ಇಂಥ ಮನಃಸ್ಥಿತಿಯಿಂದ ಇವರು ಮೋದಿ ಅವರನ್ನು ಗುರಿಯಾಗಿಸಿ ಕಳೆದ ಎರಡು ದಶಕಗಳಲ್ಲಿ ಬಹಳ ಕೆಟ್ಟ ನಿಂದನೆಗಳನ್ನು ಸುರಿಸಿದ್ದಾರೆ, ಮೋದಿ ಅವರನ್ನು ರಾಜಕೀಯವಾಗಿ ‘ಮುಗಿಸಲು’ ತಮ್ಮಿಂದಾದ ಎಲ್ಲ ತಂತ್ರಗಳನ್ನೂ ಪ್ರಯೋಗಿಸಿದ್ದಾರೆ. ಆದರೆ, ಎಡಪಂಥದ ಒಲವಿರುವ ಈ ಅಲ್ಪಸಂಖ್ಯಾತರು ಆಲೋಚಿಸಿದಂತೆ ದೇಶದ ಬಹುಜನರು ಆಲೋಚಿಸುವುದಿಲ್ಲವಾದ ಕಾರಣ ಮೋದಿ ಅವರು ಈ ದಾಳಿಗಳ ನಡುವೆಯೂ ಉಳಿದುಕೊಂಡಿದ್ದಾರೆ.

ಭಾರತ ಮತ್ತು ಅಮೆರಿಕದಂತಹ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಈ ಎಡಪಂಥೀಯ ಅಲ್ಪಸಂಖ್ಯಾತರು ಹಲವು ದಶಕಗಳಿಂದ ಸಾರ್ವಜನಿಕ ಸಂವಾದಗಳಲ್ಲಿ ಯಥೋಚಿತವಲ್ಲದ ಪ್ರಮಾಣದಲ್ಲಿ ಪಾಲು ಹೊಂದಿದ್ದಾರೆ. ಜನರಿಂದ ಸಂಪೂರ್ಣವಾಗಿ ತಿರಸ್ಕೃತಗೊಂಡಿದ್ದರೂ ಅವರು ಟಿ.ವಿ. ಸ್ಟುಡಿಯೊಗಳ ಮೂಲಕ ತಮ್ಮ ‘ಜ್ಞಾನ’ವನ್ನು ನಿರಂತರವಾಗಿ ಹಂಚಿಕೊಳ್ಳುತ್ತಿರುತ್ತಾರೆ. ಉದಾಹರಣೆಗೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಸಿಪಿಐ ಹಾಗೂ ಸಿಪಿಎಂ ಪಕ್ಷಗಳ ಒಟ್ಟು ಮತಗಳಿಕೆ ಪ್ರಮಾಣವು ಶೇಕಡ 2.26ರಷ್ಟು ಮಾತ್ರ. ಅಂದರೆ, ಭಾರತದ ಜನರು ಇವರನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬುದನ್ನು ಇದು ಹೇಳುತ್ತದೆ. ಆದರೆ, ಜೆಎನ್‌ಯು, ಸೇಂಟ್ ಸ್ಟೀಫನ್ಸ್‌ನಂತಹ ಪ್ರತಿಷ್ಠಿತ ಸಂಸ್ಥೆಗಳನ್ನು ಬಳಸಿಕೊಂಡು ಇವರು ಕಾರ್ಯಸೂಚಿ ಏನಿರಬೇಕು ಎಂಬುದನ್ನು ನಿರ್ಧರಿಸಲು ಯತ್ನಿಸುತ್ತಾರೆ. ಕಳೆದ 24 ವರ್ಷಗಳಲ್ಲಿ ಈ ಕಾರ್ಯಸೂಚಿಗಳಲ್ಲಿ ಒಂದು, ಮೋದಿ ಅವರ ರಾಜಕೀಯ ಬದುಕನ್ನು ನಾಶ ಮಾಡುವುದು.


ಅಮೆರಿಕದಲ್ಲಿ ಟ್ರಂಪ್ ಅವರನ್ನು ದ್ವೇಷಿಸುವ ಕೆಲವು ವಾಹಿನಿಗಳು, ಟ್ರಂಪ್ ಅವರನ್ನು ಕೆಟ್ಟ ರೀತಿಯಲ್ಲಿ ಬಿಂಬಿಸುವಂತೆ ಅವರ ಚುನಾವಣಾ ಪ್ರಚಾರದ ಕೆಲವು ದೃಶ್ಯಗಳನ್ನು ಮತ್ತೆ ಮತ್ತೆ ತೋರಿಸುತ್ತಿದ್ದವು. ಇದು ಟ್ರಂಪ್ ಅವರ ವಿರುದ್ಧದ ಪ್ರಚಾರಾಂದೋಲನ ಆಗಿತ್ತು. ಈ ವಾಹಿನಿಗಳ ಪ್ರಕಾರ, ಕಮಲಾ ಅವರು ತಪ್ಪು ಮಾಡುವವರೇ ಅಲ್ಲ. ಕಮಲಾ ಅವರು ಲೋಪರಹಿತರು.

ನವೆಂಬರ್ 5ರ ಮತದಾನ ನಡೆಯಬೇಕಿದ್ದ ಸಂದರ್ಭದಲ್ಲಿ ಐಯೋವಾಕ್ಕೆ ಸಂಬಂಧಿಸಿದ ಚುನಾವಣಾ ಸಮೀಕ್ಷೆಯನ್ನು ಪ್ರಕಟಿಸಿ, ಜನರನ್ನು ತಪ್ಪುದಾರಿಗೆ ಎಳೆಯಲು ಯತ್ನಿಸಿದ್ದು ಬಹಳ ಆಘಾತಕಾರಿಯಾಗಿತ್ತು. ಆ ರಾಜ್ಯದಲ್ಲಿ ಕಮಲಾ ಅವರು ಟ್ರಂಪ್ ಅವರಿಗಿಂತ ಮುಂದಿದ್ದಾರೆ ಎಂದು ವಾಹಿನಿಯೊಂದರಲ್ಲಿ ತೋರಿಸಲಾಯಿತು. ಇಲ್ಲಿ ಹಿಂದಿನ ಎರಡು ಚುನಾವಣೆಗಳಲ್ಲಿ ಟ್ರಂಪ್ ಅವರಿಗೆ ಹೆಚ್ಚು ಮತಗಳು ಬಂದಿದ್ದವು. ಇದು ರಿಪಬ್ಲಿಕನ್ ಪಕ್ಷದ ಭದ್ರ ನೆಲೆ ಇರುವ ರಾಜ್ಯ ಎಂದು ಪರಿಗಣಿತವಾಗಿದ್ದರೂ ಕುಚೋದ್ಯ ಮಾಡುವ ಇವರ ಯತ್ನವು ಟ್ರಂಪ್ ಅವರು ನಿಜಕ್ಕೂ ತೊಂದರೆಗೆ ಸಿಲುಕಿದ್ದಾರೆ ಎಂದು ಮತದಾರರಿಗೆ ಹೇಳುವುದಾಗಿತ್ತು.

ಹಾರ್ವರ್ಡ್, ಸ್ಟ್ಯಾನ್‌ಫೋರ್ಡ್, ಯೇಲ್‌ನಿಂದ ಬಂದ ಎಡಪಂಥೀಯರು ನಡೆಸಿದ ಕುಚೋದ್ಯವನ್ನು ಗುರುತಿಸಿದ ಅಮೆರಿಕದ ಜನರು ಕಮಲಾ ಅವರನ್ನು ತಿರಸ್ಕರಿಸಿದರು. ಇದರಲ್ಲಿ ಭಾರತದ ಕಾಂಗ್ರೆಸ್ ಪಕ್ಷಕ್ಕೆ ಒಂದು ಪಾಠವಿದೆ. ಕಾಂಗ್ರೆಸ್ ಪಕ್ಷವು ತನ್ನ ಕಾರ್ಯಸೂಚಿ ಏನಿರಬೇಕು ಎಂಬುದನ್ನು ನಿರ್ಧರಿಸಲು ಎಡಪಂಥೀಯರಿಗೆ ಅವಕಾಶ ಕೊಡುವಷ್ಟೂ ಕಾಲ, ಅಲ್ಪಸಂಖ್ಯಾತರ ತುಷ್ಟೀಕರಣದಲ್ಲಿ ತೊಡಗಿರುವಷ್ಟೂ ಕಾಲ, ಬಹುಸಂಖ್ಯಾತರ ವಿರುದ್ಧವಾಗಿ ನಿಲುವು ತೆಗೆದುಕೊಳ್ಳುವಷ್ಟೂ ಕಾಲ, ಅದು 2024ರಲ್ಲಿ ಅಮೆರಿಕದಲ್ಲಿ ಡೆಮಾಕ್ರಟಿಕ್ ಪಕ್ಷಕ್ಕೆ ಎದುರಾದ ಸ್ಥಿತಿಯನ್ನೇ ಕಾಣಲಿದೆ.



ಚುರುಮುರಿ



ವಿಚಿತ್ರ ವಿದಾಯ

● ಸುಮಂಗಲಾ

ಬೆಕ್ಕಣ್ಣ ಪೇಪರಿನಲ್ಲಿ ಸುದ್ದಿಯೊಂದನ್ನು ಓದಿ, ಫೋಟೊಗೆ ನಮಸ್ಕಾರ ಮಾಡಿತು. ‘ಯಾರಿಗೆ ನಮಸ್ಕಾರ?’ ಅಚ್ಚರಿಯಿಂದ ಕೇಳಿದೆ. ‘ಕಾರಿಗೆ ನಮಸ್ಕಾರ. ಭಾವಪೂರ್ಣ ವಿದಾಯ’ ಎಂದು ಹನಿಗಣ್ಣಾಗಿ ಹೇಳಿತು.

‘ಗುಜರಾತಿನ ಬಿಲ್ಡರ್ ಒಬ್ಬನಿಗೆ ಕಾರಿನಿಂದಲೇ ಅದೃಷ್ಟ ಖುಲಾಯಿಸಿ, ಬಹಳ ಆಸ್ತಿ ಮಾಡಿದನಂತೆ. ಹದಿನೆಂಟು ವರ್ಷದಿಂದ ಜೊತೆಗಿದ್ದ ಅದೃಷ್ಟದ ಕಾರನ್ನು ಸಾವಿರಾರು ಮಂದಿ ಎದುರು ಸಮಾಧಿ ಮಾಡಿ, ಗೌರವಪೂರ್ಣ ವಿದಾಯ ಹೇಳಿದನಂತೆ’ ಎನ್ನುತ್ತ ಹದಿನೈದು ಅಡಿ ಆಳದ ಗುಂಡಿಯಲ್ಲಿ ಹೂಹಾರಗಳೊಡನೆ ಸಮಾಧಿಯಾಗುತ್ತಿದ್ದ ಕಾರಿನ ಫೋಟೊ ತೋರಿಸಿತು.

‘ಈ ವಿಚಿತ್ರ ವಿದಾಯ ಹೇಳೋ ವಿಧಾನದಿಂದ ಬೇರೆಯವರು ಸ್ಫೂರ್ತಿ ಹೊಂದಿದರೆ ಕಷ್ಟ. ಕುರ್ಚಿಯಿಂದಲೇ ಅದೃಷ್ಟ ಖುಲಾಯಿಸಿ, ಮಸ್ತ್ ಆಸ್ತಿ ಮಾಡಿದೆವು ಅಂತ ಸರ್ಕಾರಿ ಅಧಿಕಾರಿಗಳು ನಿವೃತ್ತಿಯಾಗುವಾಗ ತಮ್ಮ ಕುರ್ಚಿಯನ್ನೇ ಸಮಾಧಿ ಮಾಡಿದರೆ?’ ಬೆಕ್ಕಣ್ಣ ಚಿಂತೆಯಿಂದ ಹೇಳಿತು.

‘ಹತ್ತು ಹದಿನೈದು ವರ್ಷ ಮಂತ್ರಿಯಾಗಿ ಇದೇ ಕುರ್ಚಿಯ ಮೇಲೆ ಕುಳಿತಿದ್ದೆ. ಇದರಿಂದಲೇ ನನ್ನ ಭಾಗ್ಯದ ಬಾಗಿಲು ತೆರೆಯಿತು. ಲಕ್ಷಾಧಿಪತಿಯಿಂದ ಕೋಟ್ಯಧಿಪತಿಯಾದೆ ಅಂತ ರಾಜಕಾರಣಿಗಳು ತಮ್ಮ ಕುರ್ಚಿಯನ್ನೇ ಸಮಾಧಿ ಮಾಡಿದರೆ?’

ಪಟ್ಟು ಮುಂದುವರಿಸಿದ ಬೆಕ್ಕಣ್ಣ, ‘ಕ್ರಿಕೆಟ್ ಆಟಗಾರರು ನಿವೃತ್ತಿ ಹೇಳುವಾಗ ತಮ್ಮ ಬ್ಯಾಟನ್ನೇ ಸಮಾಧಿ ಮಾಡಿದರೆ? ವೈದ್ಯರು ತಮ್ಮ ಆಪರೇಷನ್ ಉಪಕರಣಗಳನ್ನೇ ಸಮಾಧಿ ಮಾಡಿದರೆ? ಅಂವಾ ಒಂದು ಕಾರು ಸಮಾಧಿ ಮಾಡಿದ, ನಾ ಹತ್ತು ಕಾರಿಗೆ ಸಮಾಧಿ ಮಾಡತೀನಿ ಅನ್ನೋರಿಗೇನೂ ಕಡಿಮೆಯಿಲ್ಲ’ ಎಂದಿತು.

‘ಅದ್ರೂ ಎಂಥಾ ಹುಚ್ಚು ಅಂತೀನಿ! ಮನ್ಯಾಗೆ ಮ್ಯೂಸಿಯಂ ಮಾಡಿ, ಗಾಜಿನ ಪೆಟ್ಟಿಗೆಯೊಳಗೆ ಆ ಹಳೆಯ ಕಾರನ್ನು ಇಟ್ಟಿದ್ದರೆ ಮುಂದೆ ಮೊಮ್ಮಕ್ಕಳು, ಮರಿಮೊಮ್ಮಕ್ಕಳೂ ನೋಡಬಹುದಿತ್ತು. ಇನ್ನೊಂದೈವತ್ತು ವರ್ಷವಾದ ಮ್ಯಾಗೆ ಆ್ಯಂಟಿಕ್ ಕಾರು ಪ್ರದರ್ಶನ ಮಾಡಬೌದಿತ್ತು’ ಎಂದೆ.

‘ಕಾರುಗೀರು ಸಮಾಧಿ ಮಾಡಕ್ಕಿಂತ ಮೊದಲು ನಿಮ್ಮೊಳಗಿನ ದುರಾಸೆ, ಜಾತೀಯತೆ, ಭ್ರಷ್ಟಾಚಾರದಂತಹ ದುರ್ಗುಣಗಳನ್ನು ಸಮಾಧಿ ಮಾಡಿ, ಮನುಷ್ಯರಾಗಿ’ ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು!

ಸಂಗತ

ವ್ಯಕ್ತಿ ವೈಭವ: ಇದೇ ವಾಸ್ತವ!

ಉಪಚುನಾವಣೆಯು ವ್ಯಕ್ತಿಕೇಂದ್ರಿತ ರಾಜಕಾರಣದ ತುದಿ ತಲುಪಿರುವುದು ದುರಂತ

● ನಾ.ದಿವಾಕರ

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯ ಅಂತಿಮ ಫಲಿತಾಂಶ ಏನೇ ಆಗಬಹುದು, ಆದರೆ ಈ ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ನಡೆಯುತ್ತಿರುವ ಪ್ರಚಾರದ ವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕರ್ನಾಟಕದ ರಾಜಕೀಯವು ತನ್ನ ಪಾರಂಪರಿಕ ಮೌಲ್ಯಗಳನ್ನು ಕಳೆದುಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕುಟುಂಬ ರಾಜಕಾರಣ ಮತ್ತು ವಂಶಾಡಳಿತದ ಕಲ್ಪನೆಗಳನ್ನು ರಾಜಕೀಯ ಪಕ್ಷಗಳು ತಮಗೆ ಬೇಕಾದಂತೆ ಹಿಗ್ಗಿಸಿಕೊಳ್ಳುವ ನಡೆಯು ಮೌಲ್ಯಗಳ ಅಧಃಪತನದ ಸಂಕೇತವಾಗಿ ಕಾಣುತ್ತದೆ. ರಾಜ್ಯ ಹಾಗೂ ರಾಷ್ಟ್ರದ ರಾಜಕಾರಣವನ್ನು ಹತ್ತಿರದಿಂದ ಅವಲೋಕಿಸಿದವರಿಗೆ, ಇಂತಹ ಸ್ಥಿತಿಯು ಸ್ಪಷ್ಟವಾಗಿ ತಿಳಿಯುತ್ತದೆ.

ಅಜ್ಜ- ಅಪ್ಪ- ಮಗ- ಹೆಂಡತಿ- ಸೊಸೆ- ಮೊಮ್ಮಗ- ಮರಿಮಗ ಹೀಗೆ ವಿಸ್ತರಿಸುತ್ತಲೇ ಹೋಗುವ ಊಳಿಗಮಾನ್ಯ ಧೋರಣೆಯ ರಾಜಕಾರಣವು ಪ್ರಜಾಪ್ರಭುತ್ವದ ಮುನ್ನಡೆಯ ಹಾದಿಯಲ್ಲಿ ಸೃಷ್ಟಿಸುತ್ತಿರುವ ಹೊಂಡಗಳನ್ನು ವರ್ತಮಾನದ ಯುವಪೀಳಿಗೆಯಾದರೂ ಗುರುತಿಸಬೇಕಾದದ್ದು ಅನಿವಾರ್ಯ. ಈ ಸರಪಳಿಯನ್ನು ಪ್ರಜಾಸತ್ತಾತ್ಮಕ ಭಾರತ ಎಂದೋ ತುಂಡರಿಸಬೇಕಿತ್ತು. ಆದರೆ ಮುಖ್ಯವಾಹಿನಿಯ ಯಾವುದೇ ರಾಜಕೀಯ ಪಕ್ಷದಲ್ಲೂ ಈ ರೀತಿಯ ಆಲೋಚನೆ ಸಹ ಸುಳಿಯದಿರುವುದು ವರ್ತಮಾನದ ದುರಂತಗಳಲ್ಲಿ ಒಂದು.

ರಾಜಕೀಯ ಪ್ರವೇಶವು ಪ್ರತಿ ವ್ಯಕ್ತಿಯ ಸಾಂವಿಧಾನಿಕ ಹಕ್ಕು. ಅಧಿಕಾರ ಪಡೆಯುವುದು ಸಹ ಪ್ರಜಾಸತ್ತಾತ್ಮಕ ಹಕ್ಕು. ಆದರೆ ಅಧಿಕಾರ ರಾಜಕಾರಣವನ್ನು ಎಂಟೂ ದಿಕ್ಕುಗಳಿಂದ ಆವರಿಸಿಕೊಳ್ಳುವ ಸ್ವಹಿತಾಸಕ್ತಿಯ ರಾಜಕೀಯ ತಂತ್ರಗಾರಿಕೆಯು ಈ ಸಾಂವಿಧಾನಿಕ ಹಕ್ಕುಗಳ ಪಾವಿತ್ರ್ಯವನ್ನು ಹಾಳುಗೆಡವುತ್ತದೆ. ಈ ಸೂಕ್ಷ್ಮವನ್ನು ಯುವ ತಲೆಮಾರು ಗ್ರಹಿಸಬೇಕಿದೆ.

ಸಂಡೂರು, ಚನ್ನಪಟ್ಟಣ ಮತ್ತು ಶಿಗ್ಗಾವಿಯಲ್ಲಿ ನಡೆಯುತ್ತಿರುವ ಉಪಚುನಾವಣೆಯಲ್ಲಿ ರಾಜಕೀಯ ನಾಯಕರ ಅಟಾಟೋಪವನ್ನು ಗಮನಿಸಿದರೆ, ಅಲ್ಲಿ ‘ಮತದಾರ’ ಎಂದು ಕರೆಯಲಾಗುವ ಬಡಪಾಯಿಯ ಅಸ್ತಿತ್ವವೇ ಮಾಯವಾಗಿರುವುದನ್ನು ಕಾಣಬಹುದು. ಮೂರೂ ಕ್ಷೇತ್ರಗಳು ‘ಪ್ರತಿಷ್ಠಿತ’ ಎನಿಸಿಕೊಂಡಿರುವುದು ಅಲ್ಲಿನ ಸಮಾಜಗಳು, ಸಮುದಾಯಗಳು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕಾರಣಕ್ಕಲ್ಲ. ಬದಲಾಗಿ, ಈ ಮೂರೂ ಕ್ಷೇತ್ರಗಳಲ್ಲಿ ಒಂದೊಂದು ಪ್ರಭಾವಿ ಕುಟುಂಬದ ಭವಿಷ್ಯ ಅಡಗಿದೆ. ಇಲ್ಲಿ ಮತದಾರರ ಕೃಪೆಯಿಂದ ಒಂದು ಅಡಿಗಲ್ಲು ಇಡುವುದಕ್ಕೆ ಸಾಧ್ಯವಾದರೂ, ಅದು ಮುಂದಿನ ಎರಡು–ಮೂರು ದಶಕಗಳ ಕಾಲ ಕುಟುಂಬಗಳ ರಾಜಕೀಯ ಸಾಮ್ರಾಜ್ಯದ ವಿಸ್ತರಣೆಗೆ ತಳಹದಿಯಾಗಲಿದೆ. ಇದರ ಮತ್ತೊಂದು ಆಯಾಮವನ್ನು ಗಮನಿಸುವುದಾದರೆ, ಈ ವಿಸ್ತರಿಸಲ್ಪಡುವ ಸಾಮ್ರಾಜ್ಯದಲ್ಲಿ ಒಂದು ಹೊಸ ಪೀಳಿಗೆಯು ರಾಜಕೀಯ ಅಸ್ತಿತ್ವವನ್ನೇ ಕಾಣಲಾಗುವುದಿಲ್ಲ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ.

ಈ ಕ್ಷೇತ್ರಗಳ ಪ್ರಚಾರದಲ್ಲಿ ಢಾಳಾಗಿ ಕಾಣುವ ವಾಸ್ತವ ಎಂದರೆ, ರಾಜಕೀಯ ನಾಯಕರ ಭಾಷಣಗಳಲ್ಲಿ ‘ಜನ’ ಎಂದು ಕರೆಯಲಾಗುವ ಮತದಾರ ಮಾಯವಾಗಿರುವುದು. ಈ ಜನರ ಪೈಕಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಸುಳಿವೂ ಕಾಣದಂತೆ, ಈ ಸಮಾಜವು ನಿತ್ಯ ಎದುರಿಸುತ್ತಿರುವ ನಿರುದ್ಯೋಗ, ಬೆಲೆ ಏರಿಕೆ, ಅಭದ್ರತೆ, ಅಪೌಷ್ಟಿಕತೆಯಂತಹ ಅಸಮಾನತೆಯ ವಾಸ್ತವಗಳನ್ನು ಮರೆತು ರಾಜಕೀಯ ನಾಯಕರು ವ್ಯಕ್ತಿಕೇಂದ್ರಿತ ರಾಜಕಾರಣದಲ್ಲಿ ತೊಡಗಿರುವುದು ದುರಂತವೇ ಸರಿ.

‘ನನ್ನ ಕಟ್ಟಕಡೆಯ ಉಸಿರಿರುವವರೆಗೂ ಈ ಕ್ಷೇತ್ರದ ಜನರ ಏಳಿಗೆಗಾಗಿ ಶ್ರಮಿಸುತ್ತೇನೆ’ ಎಂಬ ಭಾವನಾತ್ಮಕ ಘೋಷಣೆಗಳು ವರ್ತಮಾನದ ಪ್ರಜಾಪ್ರಭುತ್ವದಲ್ಲಿ ಕ್ಲೀಷೆಗಳಾಗಿ ಪರಿಣಮಿಸಿವೆ. ಏಕೆಂದರೆ ಮತದಾರರು ಮಹತ್ವಾಕಾಂಕ್ಷೆಗಳೊಂದಿಗೆ ಚಲಾಯಿಸುವ ಮತಗಳನ್ನು ಪಕ್ಷಾಂತರದ ಮೂಲಕ ಅಪಮೌಲ್ಯಗೊಳಿಸಲಾಗುತ್ತದೆ.



ಈ ಅಪಮೌಲ್ಯೀಕರಣಕ್ಕೆ ಪಕ್ಷಾಂತರ ಎಂಬ ಪಿಡುಗು ಕಾರಣವಾದರೂ, ಇಂದಿನ ರಾಜಕೀಯ ಪರಿಭಾಷೆಯಲ್ಲಿ ಇದನ್ನು ‘ಮರಳಿ ತವರಿಗೆ’ ಎಂದು ವ್ಯಾಖ್ಯಾನಿಸಬಹುದಾಗಿದೆ. ತಮ್ಮ ರಾಜಕೀಯ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಸಲುವಾಗಿ ತತ್ವ, ಸಿದ್ಧಾಂತ ಮತ್ತು ರಾಜಕೀಯ ಮೌಲ್ಯಗಳಿಗೆ ತಿಲಾಂಜಲಿ ನೀಡಿರುವ ರಾಜಕೀಯ ನಾಯಕರು, ಸ್ವ-ಹಿತಾಸಕ್ತಿಯ ರಾಜಕೀಯ ನಡೆಯನ್ನು ವೈಭವೀಕರಿಸುವ ಸಲುವಾಗಿ ‘ಜನಸೇವೆ’ ಎಂಬ ಉದಾತ್ತ ಪರಿಕಲ್ಪನೆಯನ್ನೂ ಅಪಭ್ರಂಶಗೊಳಿಸಿದ್ದಾರೆ.

ಶಾಸನಸಭೆಯನ್ನು ಪ್ರವೇಶಿಸುವ ಆತುರದಲ್ಲಿ ಇತರ ಎಲ್ಲ ಪ್ರಜಾಸತ್ತಾತ್ಮಕ ಮೌಲ್ಯಗಳನ್ನೂ ಕಡೆಗಣಿಸುತ್ತಾ ಮುನ್ನಡೆಯುವ ಈ ರಾಜಕೀಯ ಗಜನಡೆಗೆ ಸಿಲುಕಿ ನಲುಗುತ್ತಿರುವುದು ಕರ್ನಾಟಕದ ಪೇಟೆಂಟ್ ಎನ್ನಬಹುದಾದ ‘ಮೌಲ್ಯಾಧಾರಿತ ರಾಜಕೀಯ’. ಈ ಬಲಿಪೀಠವನ್ನೇ ಅಧಿಕಾರ ಪೀಠವನ್ನಾಗಿ ಪರಿಭಾವಿಸಲು ಕೌಟುಂಬಿಕ ಸಂಬಂಧಗಳು ನೆರವಾಗುತ್ತಿರುವುದು ಇನ್ನೂ ದೊಡ್ಡ ದುರಂತ.

ತನ್ನ ಈ ವಿಕೃತ ಸ್ವರೂಪವನ್ನು ಉಳಿಸಿಕೊಳ್ಳುವ ಸಲುವಾಗಿಯೇ ಅಧಿಕಾರ ರಾಜಕಾರಣವು ವ್ಯಕ್ತಿನಿಂದನೆ ಮತ್ತು ದೂಷಣೆಗಳನ್ನೇ ಪ್ರಚಾರ ಸಾಮಗ್ರಿಯಾಗಿ ಬಳಸಿಕೊಳ್ಳುವ ಹೊಸ ಪರಂಪರೆಗೆ ಎಡೆಮಾಡಿ ಕೊಟ್ಟಿರುವಂತಿದೆ. ಇಲ್ಲಿ ಕಡೆಗಣಿಸಲಾಗುವ ‘ಜನಪರ ಕಾಳಜಿ’ ಎಂಬ ಉದಾತ್ತ ಕಲ್ಪನೆಗೆ ಮರುಹುಟ್ಟು ನೀಡುವುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಶೋಧಿಸುತ್ತಲೇ, ಮೌಲ್ಯದ ಅವನತಿಯನ್ನು ತಡೆಗಟ್ಟುವ ದಿಸೆಯಲ್ಲಿ ಗಂಭೀರವಾಗಿ ಆಲೋಚನೆ ಮಾಡಬೇಕಿದೆ.

ವಾಚಕರ ವಾಣಿ

ಬ್ಯಾಂಕ್ ಶುಲ್ಕ ಜನಸ್ನೇಹಿ ಆಗಲಿ

2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ₹ 19,782 ಕೋಟಿ ನಿವ್ವಳ ಲಾಭ ಗಳಿಸಿರುವುದಾಗಿ ವರದಿಯಾಗಿದೆ. ಖಾತೆ ನಿರ್ವಹಣೆ, ಚೆಕ್ ಪುಸ್ತಕ ಪಡೆಯಲು, ಎಟಿಎಂ ಕಾರ್ಡಿಗೆ, ಎಟಿಎಂನಿಂದ ನಗದು ಪಡೆಯಲು, ಹೆಚ್ಚಿನ ಪ್ರಮಾಣದ ನಗದು ಜಮಾವಣೆ, ಹೆಚ್ಚುವರಿ ವಹಿವಾಟಿನ ವಿವರಕ್ಕೆ, ಎಸ್‌ಎಂಎಸ್... ಹೀಗೆ ಹಲವಾರು ಸೇವೆಗಳಿಗೆ ಭಾರಿ ಎಂಬಂತಹ ಶುಲ್ಕ ವಿಧಿಸುತ್ತಿದ್ದರೆ ಕೋಟಿಗಟ್ಟಲೆ ಲಾಭ ಬರದೆ ಇನ್ನೇನಾದೀತು? ಕೆಲವು ಶುಲ್ಕಗಳು ತಂತಾನೇ ಖಾತೆಯಿಂದ ಕಡಿತ ಆಗಿರುತ್ತವೆ. ಈ ರೀತಿಯ ಶುಲ್ಕಗಳನ್ನು ದಶಕಗಳ ಹಿಂದೆ ವಿಧಿಸುತ್ತಿರಲಿಲ್ಲ, ಎಲ್ಲವನ್ನೂ ಉಚಿತವಾಗಿ ನೀಡಲಾಗುತ್ತಿತ್ತು ಎಂಬುದು ಗಮನಾರ್ಹ. ಲಾಭ ಗಳಿಸಬೇಕು ಎಂಬುದು ನಿಜವೇ ಆದರೂ ಅದೇ ಪ್ರಧಾನವಲ್ಲ. ಕಾರಣ, ಬ್ಯಾಂಕ್ ಎಂಬುದು ಸೇವೆಯೇ ವಿನಾ ಉದ್ದಿಮೆ ಅಲ್ಲ. ಶುಲ್ಕ ವಿಧಿಸಬೇಕು ಎಂಬುದು ಒಪ್ಪತಕ್ಕದ್ದಾದರೂ ಅದು ಅತ್ಯಲ್ಪ ಪ್ರಮಾಣದಲ್ಲಿದ್ದು ಗ್ರಾಹಕರಿಗೆ ಹೊರೆ ಆಗದಂತೆ ಇರಬೇಕಾದುದು ಸೂಕ್ತ.

ಬ್ಯಾಂಕಿನಿಂದ ಸಾಲ ಪಡೆದು ಬದುಕನ್ನು ಉತ್ತಮಪಡಿಸಿಕೊಂಡು ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ, ಸ್ವಂತ ಸೂರು, ಕಾರು, ಉನ್ನತ ಶಿಕ್ಷಣ ಪಡೆದ ಅನೇಕರ ಉದಾಹರಣೆಗಳು ಇವೆ. ಅವರೆಲ್ಲರೂ ಬ್ಯಾಂಕಿಗೆ ಪರೋಕ್ಷವಾಗಿ ಋಣಿಗಳೇ ಹೌದು. ಆದರೆ, ಸೇವೆಗೆ ವಿಧಿಸುವ ಶುಲ್ಕದ ಪ್ರಮಾಣವನ್ನು ಇಳಿಸುವ ಮೂಲಕ ಬ್ಯಾಂಕ್ ಮತ್ತಷ್ಟು ಜನಸ್ನೇಹಿ ಆಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಗಾದೆ ಮಹಿಮೆ

ಹಳೆ ಗಾದೆ:
ಪ್ರತ್ಯಕ್ಷವಾಗಿ ಕಂಡರೂ
ಪ್ರಮಾಣಿಸಿ ನೋಡು.
ಹೊಸ ಗಾದೆ:
ನಿಂದೇ ಜಾಗ ಅನ್ನೋ
ಖಾತರಿಯಿದ್ದರೂ ‘ಪಹಣಿ’
ತೆಗೆಸಿ ನೋಡು!

ಆರ್.ನಾಗರಾಜ್, ಗೊರೂರು, ಹಾಸನ

ಇನ್ನೆಷ್ಟು ದಿನ ‘ಬಿ’ ಖಾತಾ ಗುಮ್ಮ?

ಬೆಂಗಳೂರು ಎಂಬ ಮಾಯಾನಗರಿಯಲ್ಲಿ ಒಂದು ಸ್ವಂತ ಮನೆ ಅಥವಾ ವಾಸಯೋಗ್ಯ ನಿವೇಶನ ಹೊಂದಬೇಕೆಂಬ ಆಸೆ ಆಕಾಂಕ್ಷೆಯಿಂದ ಲಕ್ಷಾಂತರ ಮಂದಿ ತಮ್ಮ ಜೀವಮಾನದ ಸಂಪಾದನೆ, ಉಳಿತಾಯದ ಹಣವನ್ನು ಹೂಡುತ್ತಾರೆ ಅಥವಾ ಬ್ಯಾಂಕ್ ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಕೆಲವು ಬಡಾವಣೆಗಳಲ್ಲಿ ನಿವೇಶನ, ಮನೆಯನ್ನು ಖರೀದಿಸುತ್ತಾರೆ. ನಂತರ ಅದೇ ಸಂತೋಷದಲ್ಲಿ ಖಾತೆ ಪಡೆಯಲು ಪ್ರಯತ್ನಿಸಿದಾಗ, ಆ ಬಡಾವಣೆಯೇ ಅನಧಿಕೃತ ಎಂದು ಹೇಳಿ ಬಿಬಿಎಂಪಿಯು ಖಾತಾ ಪತ್ರ ನೀಡಲು ನಿರಾಕರಿಸುತ್ತದೆ. ‘ಬಿ’ ಖಾತಾ ಪ್ರದೇಶ ಎಂದು ನಮೂದಿಸಿ ತೆರಿಗೆ ವಸೂಲು ಮಾಡುತ್ತದೆ. ಆ ‘ಬಿ’ ಖಾತೆದಾರರು ವೈಯಕ್ತಿಕವಾಗಿ ‘ಎ’ ಖಾತೆ ಪಡೆಯುವುದಕ್ಕಾಗಿ ನಿಗದಿತ ಅಭಿವೃದ್ಧಿ ಶುಲ್ಕ ನೀಡಲು ತಯಾರಿದ್ದರೂ ವೈಯಕ್ತಿಕವಾಗಿ ‘ಎ’ ಖಾತೆ ನೀಡಲು ಸರ್ಕಾರದಿಂದ ಸೂಚನೆ ಇಲ್ಲ ಎನ್ನುತ್ತಾ ಅವರಿಗೆ ‘ಎ’ ಖಾತೆ ನೀಡುವುದಿಲ್ಲ. ಇಂತಹ ತ್ರಿಶಂಕು ಸ್ಥಿತಿಯಲ್ಲೂ ‘ಬಿ’ ಖಾತೆದಾರರಿಗೆ ಮನೆ ಕಟ್ಟಲು ಬ್ಯಾಂಕ್, ಹಣಕಾಸು ಸಂಸ್ಥೆಗಳು ಸಾಲ, ಬೆಸ್ಕಾಂ ವಿದ್ಯುತ್ ಸಂಪರ್ಕ ಹಾಗೂ ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸಂಪರ್ಕವನ್ನು ನೀಡುತ್ತವೆ. ಹೀಗಿರುವಾಗ, ಬಿಬಿಎಂಪಿ ಖಾತಾ ನೀತಿ ನಿಯಮ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಸರ್ಕಾರವೇ ವಾಸಯೋಗ್ಯ ಬಡಾವಣೆಗಳನ್ನು ನಿರ್ಮಿಸಿದ್ದರೆ ಇಂತಹ ಪರಿಸ್ಥಿತಿ ಬರುತ್ತಿತ್ತೇ? ಈಗ ಇ-ಖಾತೆಯನ್ನು ಎಲ್ಲಾ ತರಹದ ಆಸ್ತಿಗಳ ಖಾತಾ ಗುಣ ಪರಿಶೀಲಿಸಿ, ‘ಎ’ ಖಾತೆ ಇರುವವಕ್ಕೆ ‘ಎಇ’ ಎಂದೂ ‘ಬಿ’ ಖಾತೆ ಇರುವವಕ್ಕೆ ‘ಬಿಇ’ ಎಂದೂ ನೀಡುತ್ತಾರಂತೆ! ಅಂದರೆ ಅಳಿಯ ಅಲ್ಲ ಮಗಳ ಗಂಡ ಎನ್ನುವಂತಾಯಿತು. ಸರ್ಕಾರ ಮೊದಲಿಗೆ ‘ಬಿ’ ಖಾತೆದಾರರಿಗೆ ಇರುವ ತೊಂದರೆಗಳನ್ನು ನಿವಾರಿಸಿ ನಂತರ ಇ- ಖಾತೆ ವಿಚಾರ ತೆಗೆದುಕೊಳ್ಳಬಹುದಿತ್ತು. ಸರ್ಕಾರವೇ ಅನಧಿಕೃತ ಬಡಾವಣೆಗಳ ಸೃಷ್ಟಿಗೆ ಪ್ರೋತ್ಸಾಹಿಸುತ್ತಿದೆ. ಹೀಗಿರುವಾಗ, ಯಾವುದೋ ನೆಪ ಹೇಳಿ ‘ಬಿ’ ಖಾತೆದಾರರನ್ನು ಇನ್ನೆಷ್ಟು ಕಾಲ ಹಿಂಸಿಸಬೇಕೆಂದಿದೆ? ಸರ್ಕಾರ ರೂಪಿಸಿರುವ ನಿಯಮಗಳನ್ನು ಪಾಲಿಸದೆ ಬಡಾವಣೆ ನಿರ್ಮಿಸಿ, ರಾಜಾರೋಷವಾಗಿ ಓಡಾಡುವವರಿಗೆ ಶಿಕ್ಷೆ ನೀಡುವುದರ ಬದಲು, ಆ ಬಡಾವಣೆಗಳಲ್ಲಿ ನಿವೇಶನ ಅಥವಾ ಮನೆ ಕೊಂಡವರಿಗೆ ಶಿಕ್ಷೆ ನೀಡುವುದು ಎಷ್ಟು ಸರಿ?

ರಮೇಶ್, ಬೆಂಗಳೂರು

ಮೂರು– ಹದಿಮೂರು!

ಇಡೀ ರಾಜ್ಯದಲ್ಲಿ
ಅವರಿಗೆ ಕಾಣುತ್ತಿರುವುದು
ಈಗ ಮೂರೇ ಊರು!
ಚನ್ನಪಟ್ಟಣ, ಶಿಗ್ಗಾವಿ
ಸಂಡೂರು.
ಪಾಪ, ರಾಜಕಾರಣಿಗಳು
ಇದೇ ಹದಿಮೂರು
ಕಳೆಯೋವರೆಗೆ ಗಲ್ಲಿಗಲ್ಲಿಗಳಲ್ಲಿ
ಅದೆಷ್ಟು ಹರಿಸುವರೋ
ಬೆವರು, ಕಣ್ಣೀರು?!

ಮ.ಗು.ಬಸವಣ್ಣ, ಮೈಸೂರು

ಮೂರು ಪರೀಕ್ಷೆ: ಬದಲಾಗಲಿ ದಿನಾಂಕ

ಕೆ-ಸೆಟ್, ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಡೆಯುವ ಪರೀಕ್ಷೆ ಮತ್ತು ಯುಪಿಎಸ್‌ಸಿ ಪರೀಕ್ಷೆ ಎಲ್ಲವೂ ಇದೇ 24ರಂದೇ ನಡೆಯಲಿದ್ದು, ಮೂರೂ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿರುವ ಪರೀಕ್ಷಾರ್ಥಿಗಳಿಗೆ ಒಂದೇ ದಿನ ಈ ಪರೀಕ್ಷೆಗಳನ್ನು ಬರೆಯುವುದು ಕಷ್ಟವಾಗುತ್ತದೆ. ಇವೆಲ್ಲವೂ ಮಹತ್ವದ ಪರೀಕ್ಷೆಗಳೇ ಆಗಿವೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಪರೀಕ್ಷೆಗೆ ಕೆಲ ಅಭ್ಯರ್ಥಿಗಳು ನೆಟ್ ಅಥವಾ ಕೆ-ಸೆಟ್ ಅರ್ಹತೆಯ ಆಧಾರದ ಮೇಲೆ, ಇನ್ನು ಕೆಲವರು ನೆಟ್ ಅಥವಾ ಕೆ-ಸೆಟ್ ಅರ್ಹತೆ ಹೊಂದದೆ ಪಿಎಚ್.ಡಿ. ಅರ್ಹತೆಯ ಆಧಾರದ ಮೇಲೆ ಅರ್ಜಿ ಸಲ್ಲಿಸಿದ್ದಾರೆ. ಈಗ ಇವರು ಯಾವುದಾದರೂ ಒಂದು ಪರೀಕ್ಷೆಗೆ ಮಾತ್ರ ಹಾಜರಾಗಬೇಕಾಗುತ್ತದೆ. ಆದ್ದರಿಂದ ಈ ಪರೀಕ್ಷೆಗಳನ್ನು ಬೇರೆ ಬೇರೆ ದಿನಾಂಕಗಳಂದು ನಡೆಸುವ ಮೂಲಕ ಪರೀಕ್ಷಾರ್ಥಿಗಳಿಗೆ ಸರ್ಕಾರ ಅನುಕೂಲ ಕಲ್ಪಿಸಬೇಕಾಗಿದೆ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಅರಣ್ಯ ಉತ್ಪನ್ನವಲ್ಲ ಕಬ್ಬಿಣ ಅದಿರು ● 24 ಗಂಟೆ ಗಣಿಗಾರಿಕೆ

ಅರಣ್ಯ, ಪರಿಸರ ವ್ಯವಸ್ಥೆಗೆ ತೀರ್ಮಾನ ಮಾರಕವೇ?

ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನಗಳ ವ್ಯಾಪ್ತಿಯಿಂದ ಹೊರಗಿಡಲು ಕಾಯ್ದೆಗೆ ತಿದ್ದುಪಡಿ ಮಾಡುವುದು ಮತ್ತು ಜೀವ ವೈವಿಧ್ಯ ಹಾಗೂ ವನ್ಯಜೀವಿ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ದಿನದ 24 ಗಂಟೆಗಳೂ ಗಣಿಗಾರಿಕೆ ನಡೆಸಲು ಅನುಮತಿ ನೀಡುವ ಪ್ರಸ್ತಾವಗಳಿಗೆ ಇದೇ 14ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದರೆ, ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಪೂರಕವಾಗಿ ಮಸೂದೆಗಳು ಮಂಡನೆ ಆಗಲಿವೆ. ಇವೆರಡರ ಪರಿಣಾಮ ಕರ್ನಾಟಕದ ಶ್ರೀಮಂತ ಅರಣ್ಯ, ಜೀವವೈವಿಧ್ಯ, ವನ್ಯಜೀವಿ ಮತ್ತು ಪರಿಸರ ವ್ಯವಸ್ಥೆ ದೊಡ್ಡ ಮಟ್ಟದ ಗಂಡಾಂತರಕ್ಕೆ ಸಿಲುಕಲಿದೆ. ಬಳ್ಳಾರಿ ಜಿಲ್ಲೆಯಲ್ಲಿ ದಶಕದ ಹಿಂದೆ ಆದ ಅನಾಹುತ ಇಡೀ ರಾಜ್ಯಕ್ಕೆ ವ್ಯಾಪಿಸಲಿದೆ ಎಂಬ ಆತಂಕ ಪರಿಸರ ಪ್ರೇಮಿಗಳಿಂದ ವ್ಯಕ್ತವಾಗಿದೆ

> ಕರ್ನಾಟಕ ಅರಣ್ಯ ಕಾಯ್ದೆಗೆ 1980 ಮತ್ತು 1989ರ ನಡುವೆ ಹಲವು ತಿದ್ದುಪಡಿಗಳನ್ನು ತಂದು, ಕೆಲವು ಅರಣ್ಯ ಉತ್ಪನ್ನಗಳ ಮೇಲೆ ಶೇ 12ರಷ್ಟು ತೆರಿಗೆ ವಿಧಿಸಲು ಅವಕಾಶ ಮಾಡಿಕೊಡಲಾಗಿದೆ. ಅರಣ್ಯ ಪ್ರದೇಶದಲ್ಲಿ ಗುತ್ತಿಗೆ ಅಥವಾ ಪರವಾನಗಿ ಪಡೆದು ಸಂಗ್ರಹಿಸುವ ಉತ್ಪನ್ನಗಳಿಗೆ ಈ ತೆರಿಗೆ ಅನ್ವಯವಾಗುತ್ತದೆ ಎಂದು ಹೇಳಲಾಗಿದೆ.

• ಎಸ್.ರವಿಪ್ರಕಾಶ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 30ರಂದು ಅರಣ್ಯ ಮತ್ತು ಗಣಿ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆದಿತ್ತು. ಈ ಎರಡೂ ವಿಷಯಗಳ ಸಂಬಂಧ ಪ್ರಸ್ತಾವ ಮಂಡಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಿದ್ದರಾಮಯ್ಯ ಸ್ಪಷ್ಟ ನಿರ್ದೇಶನ ನೀಡಿದ್ದರು. ಮುಖ್ಯಮಂತ್ರಿ ಅವರ ನಿರ್ದೇಶನದಂತೆ ಪ್ರಸ್ತಾವ ಮಂಡಿಸಬೇಕೆಂಬ ಸೂಚನೆಯೊಂದಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಅರಣ್ಯ ಇಲಾಖೆ ಹೆಚ್ಚುವರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅನುಮೋದನೆಯಲ್ಲಿ ಈ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಗಣಿ ಬಾಬ್ತಿನಿಂದ ನಿರೀಕ್ಷಿತ ಪ್ರಮಾಣದಲ್ಲಿ ರಾಜಸ್ವ ಸಂಗ್ರಹವಾಗುತ್ತಿಲ್ಲ. ಗಣಿ ಇಲಾಖೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಸಂಗ್ರಹಿಸುವ ಉದ್ದೇಶದಿಂದ ಗಣಿಗಾರಿಕೆಗೆ ಅಡ್ಡಿಯಾಗಿರುವ ಕಠಿಣ ನಿಯಮಗಳನ್ನು ಬದಿಗೆ ಸರಿಸಲು ಸೂಚನೆ ನೀಡಲಾಗಿದೆ. ಗಣಿ ಇಲಾಖೆಯ ಮೂಲಗಳಿಂದ ಈ ವರ್ಷ ₹9,000 ಕೋಟಿ ತೆರಿಗೆ ಸಂಗ್ರಹದ ಗುರಿ ನೀಡಲಾಗಿತ್ತು. ಆದರೆ, ಸದ್ಯಕ್ಕೆ ತೆರಿಗೆ ಸಂಗ್ರಹ ಪ್ರಮಾಣ ಶೇ 46 ದಾಟಿಲ್ಲ. ಹೀಗಾಗಿ ಗಣಿ ಇಲಾಖೆ ಅಧಿಕಾರಿಗಳು ಈ ಎರಡೂ ನಿಯಮಗಳನ್ನು ಸಡಿಲಿಸುವುದು ಅತ್ಯಗತ್ಯವೆಂದು ಬಲವಾಗಿ ಪ್ರತಿಪಾದಿಸಿದಾಗ, ಮುಖ್ಯಮಂತ್ರಿಯವರು ಅದನ್ನು ಒಪ್ಪಿಕೊಂಡಿದ್ದಾರೆ. 'ಹಲವು ರಾಜ್ಯಗಳಲ್ಲಿ ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಅರಣ್ಯ ಉತ್ಪನ್ನ ಎಂದು ಪರಿಗಣಿಸಲಾಗುತ್ತಿದೆ. ಈ ವ್ಯವಸ್ಥೆ ಬದಲಿಸಲು ಪ್ರಸ್ತಾವ ಸಲ್ಲಿಸಿ' ಎಂದು ಸಿದ್ದರಾಮಯ್ಯ ಅರಣ್ಯ ಅಧಿಕಾರಿಗಳಿಗೆ ತಾಕೀತು ಮಾಡಿದ್ದರು ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

'ಅರಣ್ಯ ಇಲಾಖೆ ಅಧಿಕಾರಿಗಳು ರಾಜ್ಯದ ಹಿತಾಸಕ್ತಿ ಮತ್ತು ಅಭಿವೃದ್ಧಿಗೆ ಧಕ್ಕೆ ಮಾಡಿದರೆ ಸಹಿಸುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದ್ದರು.

'ಗಣಿ ಇಲಾಖೆಯು ಅರಣ್ಯ ಇಲಾಖೆಯೊಂದಿಗಿನ ಗೊಂದಲಗಳನ್ನು ನಿವಾರಿಸಿಕೊಂಡು ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಗಣಿ ಇಲಾಖೆಯ ರಾಜಸ್ವ ಸಂಗ್ರಹದ ಪ್ರಗತಿಯು ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 54ರಷ್ಟು ಇತ್ತು. ಪ್ರಸಕ್ತ ಸಾಲಿನಲ್ಲಿ ಶೇ 46ರಷ್ಟು ಮಾತ್ರ ಇದೆ. ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಸಾಲಿನಲ್ಲಿ ರಾಜಸ್ವ ಸಂಗ್ರಹಣೆ ಗುರಿ ₹9,000 ಕೋಟಿ ನಿಗದಿ ಮಾಡಲಾಗಿತ್ತು. ಅಕ್ಟೋಬರ್‌ವರೆಗಿನ ರಾಜಸ್ವ ಸಂಗ್ರಹ ₹4,070.22 ಕೋಟಿ. ಗಣಿಗಾರಿಕೆಗೆ ಸಂಬಂಧಿಸಿದಂತೆ ಗಣಿ ಇಲಾಖೆ ಗುರುತಿಸಿರುವ ಬ್ಲಾಕ್‌ಗಳ ಮಾಹಿತಿ ಪಡೆದು ರಾಜಸ್ವ ಸಂಗ್ರಹ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ.

ಅರಣ್ಯ ಉತ್ಪನ್ನದಿಂದ ಕಬ್ಬಿಣದ ಅದಿರು ಹೊರಕ್ಕೆ?

ಅರಣ್ಯ ಉತ್ಪನ್ನದ ಪಟ್ಟಿಯಿಂದ ಕಬ್ಬಿಣದ ಅದಿರನ್ನು ತೆಗೆಯಬೇಕು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನ ಅರಣ್ಯ ಇಲಾಖೆಯಲ್ಲಿ ತಲ್ಲಣ ಸೃಷ್ಟಿಸಿದೆ. ಶೇ 80ರಷ್ಟು ಕಬ್ಬಿಣದ ಅದಿರು ನಿಕ್ಷೇಪಗಳು ವಿವಿಧ ರೀತಿಯ ಅರಣ್ಯಗಳ ವ್ಯಾಪ್ತಿಯಲ್ಲೇ ಬರುತ್ತವೆ.

'ಕಾಯ್ದೆಗೆ ತಿದ್ದುಪಡಿಯಾದರೆ, ಕಬ್ಬಿಣ ಅದಿರು ಗಣಿಗಾರಿಕೆ ಮತ್ತು ಅಕ್ರಮಗಳಿಗೆ ದಿಡ್ಡಿ ಬಾಗಿಲು ತೆರೆದಂತೆ ಆಗುತ್ತದೆ. ರಾಜಧನದ ಜತೆ ತೆರಿಗೆಯ ಮೂಲಕವೂ ಹೆಚ್ಚು ಆದಾಯ ಗಳಿಸಬಹುದು ಎಂಬ ಉದ್ದೇಶ ಸರ್ಕಾರಕ್ಕೆ ಇರಬಹುದು. ಆದರೆ ರಾಜ್ಯದ ಅರಣ್ಯ ಮತ್ತು ಪರಿಸರದ ಹಿತದೃಷ್ಟಿಯಿಂದ ಇದು ತಪ್ಪು ನಿರ್ಧಾರ' ಎನ್ನುತ್ತಾರೆ ನಿವೃತ್ತ ಪಿಸಿಸಿಎಫ್ ಪರಮೇಶ್ವರಪ್ಪ.

'80ರ ದಶಕದಲ್ಲಿ ಅರಣ್ಯ ಕಾಯ್ದೆಗೆ ತಿದ್ದುಪಡಿ ತಂದಾಗ ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನದ ವ್ಯಾಪ್ತಿಗೆ ತರಲಾಯಿತು. ಇದರಿಂದ ಬೇಕಾಬಿಟ್ಟಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಕಡಿವಾಣ ಬಿದ್ದಿತು ಮತ್ತು ಎಲ್ಲೆಲ್ಲಿ ಗಣಿಗಾರಿಕೆ ಆಗುತ್ತದೆಯೋ ಪರ್ಯಾಯವಾಗಿ ಸಸಿಗಳನ್ನು ನೆಟ್ಟು ಅರಣ್ಯ ಬೆಳೆಸಬೇಕು ಎಂಬ ನಿಯಮವೂ ಜಾರಿಗೆ ಬಂದಿತು. ಹೊಸ ನಿಯಮ ಜಾರಿಗೆ ಬಂದರೆ, ಎಲ್ಲವನ್ನೂ ಗಾಳಿಗೆ ತೂರಿ ಗಣಿಗಾರಿಕೆ ನಡೆಸುವ ಅಪಾಯವಿದೆ' ಎನ್ನುವುದು ಅವರ ವಾದ.



3,530 ಕೋಟಿ ಟನ್ ಭಾರತದಲ್ಲಿರುವ ಕಬ್ಬಿಣದ ಅದಿರಿನ (ಹೆಮಟೈಟ್, ಮ್ಯಾಗ್ನಟೈಟ್ ಸೇರಿ) ಅಂದಾಜು ಪ್ರಮಾಣ

2,410 ಕೋಟಿ ಟನ್ ಭಾರತದಲ್ಲಿ ಲಭ್ಯವಿರುವ ಹೆಮಟೈಟ್‌ನ ಅಂದಾಜು ಪ್ರಮಾಣ

284 ಕೋಟಿ ಟನ್ ಕರ್ನಾಟಕದಲ್ಲಿರುವ ಹೆಮಟೈಟ್‌ನ ಅಂದಾಜು ಪ್ರಮಾಣ

1,120 ಕೋಟಿ ಟನ್ ದೇಶದಲ್ಲಿರುವ ಮ್ಯಾಗ್ನೆಟೈಟ್ ಅಂದಾಜು ಪ್ರಮಾಣ

780 ಕೋಟಿ ಟನ್ ರಾಜ್ಯದಲ್ಲಿರುವ ಮ್ಯಾಗ್ನೆಟೈಟ್‌ನ ಅಂದಾಜು ಪ್ರಮಾಣ

ಆಧಾರ: ಇಂಡಿಯನ್ ಬ್ಯೂರೋ ಆಫ್ ಮೈನ್ಸ್‌ನ 'ಇಂಡಿಯನ್ ಮಿನರಲ್ ಇಯರ್ ಬುಕ್–2021'

ಪ್ರಮುಖ ಅರಣ್ಯ ಉತ್ಪನ್ನಗಳು

ಹಣ್ಣುಗಳು, ಬೀಜಗಳು, ಅಣಬೆಗಳು, ಜೇನುತುಪ್ಪ ಮತ್ತು ಖಾದ್ಯ ಎಲೆಗಳು, ಔಷಧೀಯ ಸಸ್ಯಗಳು, ಬಿದಿರು, ರಾಳಗಳು, ಅಂಟುಗಳು, ವಾರ್ನಿಷ್‌ಗಳು, ಇದ್ದಿಲು, ಮರದ ಎಣ್ಣೆ, ತೊಗಟೆ, ಲ್ಯಾಕ್, ಸುಗಂಧದ ಹೂವುಗಳು, ಮರಗಳು, ಎಲೆಗಳು, ಹುಲ್ಲು, ಬಳ್ಳಿ, ಕೊಂಬು, ಮೂಳೆ, ಗೂಡು, ರೇಷ್ಮೆ, ಜೇನುಮೇಣ, ಪ್ರಾಣಿ ಉತ್ಪನ್ನಗಳು, ಮೇಲ್ಮೈ ಮಣ್ಣು, ಬಂಡೆಗಳು, ಉಪ ಖನಿಜಗಳು, ಅದಿರುಗಳು, ಖನಿಜ ಎಣ್ಣೆ, ಸುಣ್ಣದ ಕಲ್ಲು, ಲ್ಯಾಟರೈಟ್.

24 ಗಂಟೆ ಗಣಿಗಾರಿಕೆಯಿಂದ ಹಲವು ತೊಂದರೆ

ಗಣಿಗಾರಿಕೆ, ಸ್ಫೋಟದಿಂದ ವಾಯು ಮಾಲಿನ್ಯ ಮತ್ತು ಜಲಮಾಲಿನ್ಯ ಉಂಟಾಗುತ್ತದೆ. ಇದರಿಂದ ನೀರಿನ ಮೂಲಗಳು ಕಲುಷಿತವಾಗಿ ಮನುಷ್ಯರು ಮತ್ತು ಜಾನುವಾರುಗಳು ಕಾಯಿಲೆಗಳಿಗೆ ಒಳಗಾಗಬೇಕಾಗುತ್ತದೆ. ವಾಯು ಮಾಲಿನ್ಯದಿಂದ ಶ್ವಾಸಕೋಶದ ತೊಂದರೆಗೆ ಸಿಲುಕಬೇಕಾಗುತ್ತದೆ. ಗಣಿ ಪ್ರದೇಶದ ಸುತ್ತಮುತ್ತಲಿನ ಪ್ರದೇಶ ದೂಳುಮಯವಾಗುತ್ತದೆ ಎನ್ನುತ್ತಾರೆ ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ.

ಜೀವ ವೈವಿಧ್ಯ ಮತ್ತು ವನ್ಯಜೀವಿಧಾಮಗಳಲ್ಲದ ಅರಣ್ಯ ಪ್ರದೇಶಗಳಲ್ಲೂ ನಾನಾ ರೀತಿಯ ವನ್ಯಜೀವಿಗಳು ಇರುತ್ತವೆ. ಹುಲಿ, ಕರಡಿ, ನರಿ, ತೋಳ ಇರುತ್ತವೆ. ಬಳ್ಳಾರಿ, ವಿಜಯನಗರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಗಣಿಗಾರಿಕೆ ಹೆಚ್ಚಾಗಿ ನಡೆಯುತ್ತಿದ್ದು, ಇಲ್ಲಿ ಈ ರೀತಿಯ ಪ್ರಾಣಿಗಳಿಗೆ ತೊಂದರೆ ಆಗಿವೆ. ಮಾನವ- ವನ್ಯಜೀವಿ ಸಂಘರ್ಷಕ್ಕೂ ಇದೇ ಕಾರಣವಾಗಿದೆ. 24 ಗಂಟೆ ಗಣಿಗಾರಿಕೆ ಅವಕಾಶ ನೀಡಿದ್ದೇ ಆದರೆ, ಅನಾಹುತ ಊಹಿಸಲೂ ಸಾಧ್ಯವಿಲ್ಲ. ಚಿರತೆ, ಕರಡಿ ಮುಂತಾದವು ಊರಿಗೆ ನುಗ್ಗಿ ಹಾವಳಿ ಎಬ್ಬಿಸುವ ಸಾಧ್ಯತೆ ಹೆಚ್ಚು ಎನ್ನುವುದು ಅವರ ವಾದ. ಇವೆರಡೂ ನಿಯಮಗಳು ಜಾರಿಯಾದರೆ, ಅರಣ್ಯ ಇಲಾಖೆ ಎನ್‌ಒಸಿ ಬೇಕಾಗುವುದಿಲ್ಲ. ಆಗ ಅರಣ್ಯ ಸಂಪತ್ತನ್ನು ಬೇಕಾಬಿಟ್ಟಿ ಲೂಟಿ ಮಾಡಲಾಗುತ್ತದೆ ಎನ್ನುತ್ತಾರೆ.

ಈಶ್ವರ ಖಂಡ್ರೆ ವಿರೋಧ?

ಈ ಎರಡೂ ಪ್ರಸ್ತಾವಗಳ ಬಗ್ಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಸಹಮತವಿಲ್ಲ. ಅವುಗಳನ್ನು ವಿರೋಧಿಸಲು ಮತ್ತು ಅರಣ್ಯ ಇಲಾಖೆಯ ವಾದವನ್ನು ಸಮರ್ಥವಾಗಿ ಮಂಡಿಸಲು ಟಿಪ್ಪಣಿಯೊಂದನ್ನು ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿಯವರು ನಡೆಸಿದ ಸಭೆಯಲ್ಲಿ ಭಾಗವಹಿಸಿದ್ದ ಅರಣ್ಯ ಇಲಾಖೆ ಹಿರಿಯ ಅಧಿಕಾರಿ ಈ ಬಗ್ಗೆ ಚಕಾರ ಎತ್ತದೇ ಒಪ್ಪಿಕೊಂಡು ಬಂದ ಬಗ್ಗೆ ಅರಣ್ಯ ಇಲಾಖೆಯಲ್ಲಿ ದೊಡ್ಡ ಮಟ್ಟದ ಅಸಮಾಧಾನ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

'ಸುಪ್ರೀಂ ಕೋರ್ಟ್ ಕೆಂಗಣ್ಣಿಗೆ ಗುರಿಯಾಗಬೇಕಾದೀತು'

ರಾಜ್ಯ ಸರ್ಕಾರದ ಈ ಎರಡೂ ನಡೆಯಿಂದ ಸುಪ್ರೀಂ ಕೋರ್ಟ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಏಕೆಂದರೆ ಗಣಿ ಕಂಪನಿಗಳು, ಅರಣ್ಯ ಬೆಳೆಸುವುದಕ್ಕಾಗಿ ಅರಣ್ಯ ಅಭಿವೃದ್ಧಿ ತೆರಿಗೆ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ಪಾವತಿಸಿದ್ದ ₹3,400 ಕೋಟಿ ಮೊತ್ತವನ್ನು ಬಳಸಿಲ್ಲ ಎಂಬ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಇದೆ. ಅದು ಇನ್ನೂ ಇತ್ಯರ್ಥವಾಗಿಲ್ಲ.

ಸರ್ಕಾರ ಕಬ್ಬಿಣದ ಅದಿರು ಅರಣ್ಯ ಉತ್ಪನ್ನ ಅಲ್ಲ ಎಂದು ನಿರ್ಧಾರ ತೆಗೆದುಕೊಂಡರೆ, ಗಣಿ ಕಂಪನಿಗಳು ಅದನ್ನು ಪ್ರಶ್ನಿಸುತ್ತವೆ. ಅಲ್ಲದೇ, ತಮ್ಮ ಹಣ ವಾಪಸ್ ಮಾಡುವಂತೆ ತಕರಾರು ತೆಗೆಯುತ್ತವೆ. ಏನಾದರೂ ಮಾಡಿ ಹೆಚ್ಚು ಆದಾಯ ಸಂಗ್ರಹಿಸಬೇಕು ಎಂಬ ಧಾವಂತದಲ್ಲಿ ರಾಜ್ಯ ಸರ್ಕಾರ ಎಡವಟ್ಟು ಮಾಡಿ ಕೊಳ್ಳಲು ಹೊರಟಿದೆ. ಗಣಿ ಇಲಾಖೆ ಯಾವ ಕಾರಣಕ್ಕೆ ಹೆಚ್ಚು ಆದಾಯ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ ಮತ್ತು ಎಲ್ಲಿ ಲೋಪವಾಗಿದೆ ಎಂಬ ಅಧ್ಯಯನ ಮಾಡದೇ, ಗಣಿ ಅಧಿಕಾರಿಗಳ ಸಲಹೆಯನ್ನು ಕಣ್ಣು ಮುಚ್ಚಿ ಕಾನೂನಾಗಿ ಜಾರಿ ಮಾಡಿದರೆ ಸುಪ್ರೀಂ ಕೋರ್ಟ್‌ನ ಚಾಟಿ ಏಟಿನಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಅದಿರು ಗಣಿಗಾರಿಕೆ ವಿಚಾರ 'ಸುಪ್ರೀಂ' ಕಣ್ಗಾವಲಿನಲ್ಲಿ ಇದೆ ಎಂಬುದನ್ನು ಸರ್ಕಾರ ಮರೆತಿರಬೇಕು ಎಂಬುದು ಕಾನೂನು ಪಂಡಿತರ ಅಭಿಮತ. 24 ಗಂಟೆ ಗಣಿಗಾರಿಕೆಗೆ ಅನುಮತಿ ನೀಡಬೇಕು ಎಂದು ಇವರಿಗೆ ಸಲಹೆ ಕೊಟ್ಟವರು ಯಾರು? ಇದಕ್ಕೆ ಕೇಂದ್ರ ಅರಣ್ಯ ಇಲಾಖೆಯ ಅನುಮತಿ ಬೇಕು ಎಂಬುದು ಗೊತ್ತಿಲ್ಲವೇ? ಒಡಿಶಾದಲ್ಲಿ ರಾತ್ರಿ ವೇಳೆ ಮಾತ್ರ ಅದಿರನ್ನು ಸಾಗಿಸುತ್ತಾರೆ. 24 ಗಂಟೆ ಸಾಗಿಸುವುದಿಲ್ಲ. ಕರ್ನಾಟಕದಲ್ಲಿ ಹಗಲು- ರಾತ್ರಿ ಗಣಿಗಾರಿಕೆ ಮಾಡಿ ಸಾಗಣೆ ಮಾಡಿ ಜನರನ್ನು ಏನು ಮಾಡಬೇಕು ಅಂತಿದ್ದಾರೆ. ಜನರು ಬದುಕಬೇಕೋ ಬೇಡವೋ. ಗಣಿಗಾರಿಕೆಯ ಹಳೇ ದುರ್ದಿನಗಳನ್ನು ಸ್ಥಾಪಿಸಲು ಹೊರಟಂತಿದೆ ಎನ್ನುತ್ತಾರೆ ಅವರು.

ಅರಣ್ಯ ಮತ್ತು ಪರಿಸರವನ್ನು ಅತಿಯಾಗಿ ಶೋಷಣೆ ಮಾಡುವ ಮೂಲಕ ಏನು ಮಾಡಲು ಹೊರಟಿದ್ದಾರೆ? ಇವರ ಉದ್ದೇಶವೇನು? ಯಾಕಾಗಿ ಹೆಚ್ಚು ಸಂಪನ್ಮೂಲ ಸಂಗ್ರಹಿಸಲು ಹೊರಟಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಇಂತಹ ಅದ್ಭುತ ಯೋಚನೆಗಳು ಎಲ್ಲಿಂದ ಬರುತ್ತವೆ ಎಂದು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ತಜ್ಞರೊಬ್ಬರು ಪ್ರಶ್ನಿಸಿದರು.

'ರಿಪ್ಪನ್ ಸ್ವಾಮಿ'ಗೆ ಅಶ್ವಿನಿ ನಾಯಕಿ



ವಿಜಯ್ ರಾಘವೇಂದ್ರ ನಟನೆಯ 'ರಿಪ್ಪನ್ ಸ್ವಾಮಿ' ಚಿತ್ರದ ನಾಯಕಿಯಾಗಿ ಅಶ್ವಿನಿ ಚಂದ್ರಶೇಖರ್ ಕಾಣಿಸಿಕೊಂಡಿದ್ದಾರೆ. ಇವರು ಈ ಹಿಂದೆ 'ಪ್ರೇಮ ಪಲ್ಲಕ್ಕಿ' ಸೇರಿದಂತೆ ಕೆಲ ಸಿನಿಮಾಗಳಲ್ಲಿ ನಟಿಸಿದ್ದರು.

ಕಿಶೋರ್ ಮೂಡಬಿದರೆ ನಿರ್ದೇಶನದ ಚಿತ್ರ ಪಂಚಾನನ ಬ್ಯಾನರ್ ಅಡಿಯಲ್ಲಿ ನಿರ್ಮಾಣಗೊಂಡಿದೆ. 'ವಿಜಯ್ ರಾಘವೇಂದ್ರ ಪತ್ನಿಯಾಗಿ ಕಾಣಿಸಿಕೊಂಡಿದ್ದೇನೆ. ಚಿತ್ರದ ಒಂದು ಪ್ರಮುಖ ಪಾತ್ರ. ಇದರ ಜೊತೆಗೆ ಕೆಲ ತಮಿಳು, ತೆಲುಗು ಚಿತ್ರಗಳಲ್ಲಿ ಸಕ್ರಿಯವಾಗಿರುವೆ. ತಮಿಳಿನಲ್ಲಿ ನನ್ನ ನಟನೆಯ ಎರಡು ಸಿನಿಮಾಗಳು ಬಿಡುಗಡೆಗೆ ಸಿದ್ಧವಿವೆ. ಮಲಯಾಳಂನಲ್ಲಿ ಎರಡು ಚಿತ್ರಗಳ ಚಿತ್ರೀಕರಣ ಮುಗಿದಿದೆ' ಎಂದಿದ್ದಾರೆ ಅಶ್ವಿನಿ.

'ಚಿತ್ರದಲ್ಲಿ ಅಶ್ವಿನಿ ವೈದ್ಯೆಯಾಗಿ ಕಾಣಿಸಿಕೊಂಡಿದ್ದಾರೆ. ನಾಯಕನಿಗಿರುವಷ್ಟೇ ಮಹತ್ವ ಈ ಪಾತ್ರಕ್ಕಿದೆ. ಸದ್ಯ ಸಿನಿಮಾ ಸೆನ್ಸಾರ್ ಅಂಗಳದಲ್ಲಿದ್ದು, ಶೀಘ್ರವೇ ತೆರೆಗೆ ಬರಲಿದೆ' ಎಂದಿದೆ ಚಿತ್ರತಂಡ.

ಭಗತ್ ರಾಯ್ ಡಿ.6ರಂದು ತೆರೆಗೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಧೀರ ಭಗತ್ ರಾಯ್' ಚಿತ್ರ ಡಿಸೆಂಬರ್ 6ರಂದು ತೆರೆಗೆ ಬರಲಿದೆ. ಕರ್ಣನ್ ಅವರ ಚೊಚ್ಚಲ ನಿರ್ದೇಶನದ ಚಿತ್ರವಿದು.

'ಪುಷ್ಪ–2 ಚಿತ್ರ ಬಿಡುಗಡೆ ದಿನವೇ ತೆರೆಗೆ ಬರುತ್ತಿದ್ದೇವೆ. ತೆಲುಗಿನ 'ಬಾಹುಬಲಿ' ಎದುರು 'ರಂಗಿತರಂಗ' ಚಿತ್ರ ತೆರೆ ಕಂಡು ಯಶಸ್ವಿಯಾಗಿತ್ತು. ಅದೇ ರೀತಿ ನಮ್ಮ ಚಿತ್ರವನ್ನು ಜನ ಗೆಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ. 'ಜೈಭೀಮ್', 'ವಿಸಾರಣೈ' ಚಿತ್ರಗಳ ಛಾಯೆ ನಮ್ಮ ಚಿತ್ರದಲ್ಲಿದೆ ಎನ್ನುತ್ತಿದ್ದಾರೆ. 'ಧೀರ ಭಗತ್ ರಾಯ್' ಅಸಲಿ ಕಥೆಯೇನು?, 'ಕಾಟೇರ' ಮುಂದುವರೆದ ಅಧ್ಯಾಯವಾ? ಎಂಬುದಕ್ಕೆ ಚಿತ್ರಮಂದಿರದಲ್ಲಿಯೇ ಉತ್ತರ ಸಿಗಲಿದೆ' ಎಂದರು ನಿರ್ದೇಶಕ ಕರ್ಣನ್.



ಸುಚರಿತಾ


ಭೂ ಸುಧಾರಣೆ ಕಾಯ್ದೆ ಹಿನ್ನೆಲೆಯ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ರಾಕೇಶ್ ದಳವಾಯಿಗೆ ಸುಚರಿತಾ ಜೋಡಿಯಾಗಿದ್ದಾರೆ. ಶರತ್ ಲೋಹಿತಾಶ್ವ, ನೀನಾಸಂ ಅಶ್ವಥ್ ಮುಂತಾದವರು ಚಿತ್ರದಲ್ಲಿದ್ದಾರೆ. ವೈಟ್ ಲೋಟಸ್ ಎಂಟರ್‌ಟೈನ್‌ಮೆಂಟ್ ಮತ್ತು ಶ್ರೀ ಓಂ ಸಿನಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ, ಸೆಲ್ವಂ ಜಾನ್ ಛಾಯಾ ಚಿತ್ರಗ್ರಹಣ, ಎನ್.ಎಂ ವಿಶ್ವ ಸಂಕಲನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಕಮಲಾ ಹ್ಯಾರಿಸ್ ಅವರನ್ನು ಮಣಿಸುವ ಮೂಲಕ ಡೊನಾಲ್ಡ್ ಟ್ರಂಪ್ ದಾಖಲೆ ನಿರ್ಮಿಸಿದ ನಂತರ ಅವರ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಚುನಾವಣೆಯಲ್ಲಿ ಗೆದ್ದ ನಂತರ ಟ್ರಂಪ್ ಅವರು 'ನಾನು ಹಿಂದೂ ಸಮುದಾಯದ ದೊಡ್ಡ ಅಭಿಮಾನಿ ಮತ್ತು ಭಾರತದ ದೊಡ್ಡ ಅಭಿಮಾನಿ' ಎಂದು ಹೇಳಿದ್ದಾಗಿ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ಇನ್‌ವಿಡ್ ಟೂಲ್ ಸರ್ಚ್ ಮೂಲಕ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಹಲವು ಕೀಫ್ರೇಮ್‌ಗಳು ಕಂಡುಬಂದವು. ಇದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ತಿಳಿದುಬಂತು. ಕೀವರ್ಡ್ ಬಳಸಿ ಹುಡುಕಾಟ ನಡೆಸಿದಾಗ, ಇದು ಹಳೆಯ ವಿಡಿಯೊ ಎಂದು ಮಾಧ್ಯಮಗಳು ವರದಿ ಮಾಡಿರುವುದು ಕಂಡುಬಂತು. ಟ್ರಂಪ್ ಅವರ ಈ ಹೇಳಿಕೆಯು 2016ರ ಅಕ್ಟೋಬರ್ 16ರಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಮತ್ತಷ್ಟು ಹುಡುಕಾಡಿದಾಗ, ಟ್ರಂಪ್ ಅವರ ಹೇಳಿಕೆ ಇರುವ ಪೂರ್ಣ ವಿಡಿಯೊ ಸಿಕ್ಕಿತು. 2016ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಅವರು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿದ್ದಾಗ ಧನಸಂಗ್ರಹ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ವೇಳೆ ಮಾತನಾಡಿದ್ದ ವಿಡಿಯೊ ಅದು. ಹಳೆಯ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಗಳೊಂದಿಗೆ ಈಗ ಹಂಚಿಕೊಳ್ಳಲಾಗುತ್ತಿದೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಮನಸ್ಸು ಮಹಾದೇವನ ಗೂಡು!

ನುಡಿ ಬೆಳಗು 63



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಮನಸ್ಸಿನ ಆರೋಗ್ಯ ಚೆನ್ನಾಗಿರಬೇಕು ಅಂದರ ಏನು ಮಾಡಬೇಕು? ಮನವೆಂಬುದಿದೇನು ಮಹಾದೇವನ ಇರುವು ನೋಡಾ ಅಂತಾರ ಶರಣರು. ಮನಸ್ಸು ಕೂಡ ಮಹಾದೇವನ ಸ್ವರೂಪ. ಮನುಷ್ಯ ನೆಮ್ಮದಿ ಇಲ್ಲದವನಾಗ್ಯಾನ. ಮನುಷ್ಯ ದೆವ್ವಗಳ ಹಾಗೆ ಆಡ್ತಾನ. ಒಂದು ತಿಳಕೋಬೇಕು, ಮನುಷ್ಯರು ಮಾತ್ರ ದೆವ್ವಗಳಾಗ್ಯಾರ, ಕುರಿ, ಕೋಳಿ, ದನ ಯಾವುದೂ ದೆವ್ವಗಳಾಗಿಲ್ಲ. ಅವು ಯಾಕೆ ಆಗಿಲ್ಲ? ಯಾಕೆಂದರ ಅವುಗಳಿಗೆ ಮಾನಸಿಕ ಸಮಸ್ಯೆಗಳಿಲ್ಲ. ಪಶು ಪಕ್ಷಿಗಳಿಗೆ ಮಾನಸಿಕ ಆಸ್ಪತ್ರೆಗಳಿಲ್ಲ. ಅವು ಇರೋದು ಬರೀ ಮನುಷ್ಯರಿಗೆ ಮಾತ್ರ. ಪಶು ಆಸ್ಪತ್ರೆಗಳಿದಾವಲ್ಲ ಅಂತ ನೀವು ಕೇಳಬಹುದು. ಮನುಷ್ಯನ ಸಂಪರ್ಕಕ್ಕೆ ಬಂದ ಪ್ರಾಣಿಗಳಿಗೆ ಮಾತ್ರ ಆಸ್ಪತ್ರೆಗಳಿದಾವೆ. ಕಾಡಿನಲ್ಲಿರುವ ಪ್ರಾಣಿಗಳಿಗೆ ದವಾಖಾನೆ ಇಲ್ಲ. ಕುಂತ್ರೆ, ನಿಂತ್ರೆ ಮನುಷ್ಯನ ಮನಸ್ಸಿಗೆ ಸಮಾಧಾನ ಇಲ್ಲ.

ಮನಸ್ಸು ಯಾಕೆ ವಿಕೃತ ಆತು ಅಂಬೋದನ್ನು ನೋಡಬೇಕಲ್ಲ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಶರೀರ ಶಾಸ್ತ್ರ ಅಂತ ಇರ್ತದ. ಹೆಣಗಳನ್ನು ಸೀಳಿ ಸೀಳಿ ದೇಹದ ಯಾವ ಯಾವ ಭಾಗಗಳು ಎಲ್ಲಿವೆ, ತೊಂದರೆಗಳು ಎಲ್ಲೆಲ್ಲಿ ಬರ್ತವೆ ಅಂತ ತಿಳಿಸುತ್ತಾರೆ. ದೇಹ ಕಾಣಿಸ್ತದೆ ತೋರಿಸ್ತಾರೆ. ಆದರೆ ಮನಸ್ಸಿನ ತೊಂದರೆಗಳನ್ನು ತೋರಿಸುವುದು ಹೇಗೆ? ಅದಕ್ಕೆ ಗಾತ್ರವೂ ಇಲ್ಲ, ಹಿಡಿಯಲೂ ಆಗಲ್ಲ. ಮುಟ್ಟಲೂ ಆಗಲ್ಲ. ಆದರೆ ನಮ್ಮ ಋಷಿ ಮುನಿಗಳು ಇದಕ್ಕೂ ಒಂದು ಪ್ರಯತ್ನ ಮಾಡಿದರು. ಮನಸ್ಸನ್ನು ಬಗೆದು ನೋಡುವ ಕೆಲಸ ಮಾಡಿದರು. ಮನಸ್ಸಿನಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಬರುತ್ತವೆ. ಮನಸ್ಸಿನಲ್ಲಿ ಎಲ್ಲಿ ಹುಟ್ಟುತ್ತವೆ ಇವು? ಅದರ ಗಂಗೋತ್ರಿ ಎಲ್ಲೈತಿ? ಅದನ್ನು ಹುಡುಕಲು ಯತ್ನಿಸಿದರು.

ಮನುಷ್ಯನೊಬ್ಬ ಸುಮ್ಮನೆ ಒಂದು ವಸ್ತು ನೋಡಿದ. ಸುಂದರ ಐತಿ ಅಂದ. ಸುಂದರ ಐತಿ ಅಂದರೆ ಏನರ್ಥ? ಅದು ನನಗೆ ಬೇಕು ಎನ್ನುವುದೇ ಪರೋಕ್ಷ ಅರ್ಥ. ಕಣ್ಣು ನೋಡಿದ್ದನ್ನು ಬಯಸುತ್ತದೆ. ಬಯಸಿದ್ದು ಸಿಗದಿದ್ದರೆ ಸಿಟ್ಟು ಶುರುವಾಗುತ್ತದೆ. ಏನಾದರೂ ಮಾಡಿ ಪಡಕೋಬೇಕು ಎಂಬ ಮೋಹ ಹುಟ್ಟುತ್ತದೆ. ಮೊದಲು ಬಯಕೆ ಬಂತು. ನಂತರ ಕ್ರೋಧ. ಆ ಮೇಲೆ ಮೋಹ. ಮೋಹ ಆತು ಅಂದ್ರೆ ಬುದ್ಧಿ ಕಳಕೋತೀವಿ. ವಿವೇಕ ಕಳಕೋತೀವಿ. ಸಿಟ್ಟು ಬಂತು ಅಂದರ ಏನ್ ಬೇಕಾರು ಮಾಡ್ತೀವಿ. ಸಿಟ್ಟಿನ ಕೈಯಾಗ ಬುದ್ಧಿ ಕೊಡಬೇಡ ಅಂತಾರ ನಮ್ಮ ಗ್ರಾಮೀಣ ಜನ. ಮನುಷ್ಯ ವಿವೇಕ ಶೀಲದಿಂದ ವರ್ತನೆ ಮಾಡಬೇಕು. ಸಿಟ್ಟಿನ ಕೈಗೆ ಬುದ್ಧಿ ಕೊಡಬಾರದು.

ಮನುಷ್ಯನಿಗೆ ಅಧಿಕಾರದ ದಾಹ. ಯಾರೋ ಕುಂತವರನ್ನು ನೋಡ್ತಾರ. ನಾವೂ ಹೀಂಗೆ ಕುರ್ಚಿ ಮೇಲೆ ಕೂಡಬೇಕು, ಕೆಂಪು ಗೂಟದ ಕಾರಿನಲ್ಲಿ ಓಡಾಡಬೇಕು ಅನಸತೈತಿ. ಏನಾರಮಾಡಿ ಪಡಕೋಬೇಕು ಅಂತ ಹೊಲ, ಮನೆ ಮಾರಿ ಎಲ್ಲ ಕಳಕೋತಾರ. ಕುರ್ಚಿ ಇರಬೇಕು, ಕುರ್ಚಿ ಸಿಕ್ಕಾಗ ಸಮಾಜಕ್ಕಾಗಿ ಕೆಲಸ ಮಾಡಬೇಕು. ಕುರ್ಚಿ ಮೇಲೆ ನಾವು ಕುಂತಿರಬೇಕು. ಆದರೆ ಕುರ್ಚಿ ಬಂದು ನಮ್ಮ ತಲೆಯಾಗ ಕುಂತಿರಬಾರದು. ಇದೇ ಅಧ್ಯಾತ್ಮ. ಕುರ್ಚಿ ಮೇಲೆ ಕೂಡಬೇಡ ಅಂತ ಅಧ್ಯಾತ್ಮ ಹೇಳಲ್ಲ. ಸಂಸಾರ ಮಾಡಬೇಡ ಎಂದು ಅಧ್ಯಾತ್ಮ ಹೇಳುವುದಿಲ್ಲ. ಆದರ ಸಂಸಾರ ತಲೆಗೆ ತಗಂಡು ತಿರುಗಬ್ಯಾಡ ಅನತೈತಿ ಅಧ್ಯಾತ್ಮ. ಇದನ್ನು ಮನುಷ್ಯ ತಿಳಕೋಬೇಕು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ನವೆಂಬರ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದಶಮಿ ಗಂ. 18-47 ನಕ್ಷತ್ರ: ಶತಭಿಷ ಗಂ. 09-40 ಯೋಗ: ವ್ಯಾಘಾತ ಗಂ. 22-36 ಕರಣ: ತೈತಿಲ ಗಂ. 07-58, ತುಲಾ ಮಾಸದ 25 ನೇ ದಿನ, ಮಳೆನಕ್ಷತ್ರ: ವಿಶಾಖ 2.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-32 **ಸೂರ್ಯಾಸ್ತ :** 05-57
ಮುಸ್ಲಿಂ ದಿನಾಂಕ : 08 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 6, 4

ಮೇಷ: ಕಚೇರಿಯ ವಿಷಯದಂತೆಯೇ ಮನೆಯ ವಿಷಯಗಳ ಕಡೆಗೂ ಈ ದಿನ ಹೆಚ್ಚಿನ ಗಮನವಹಿಸುವುದು ಒಳ್ಳೆಯದು. ನಿಮ್ಮ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ದಿನ ಸಿಗುವ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ.

ವೃಷಭ: ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರಶಸ್ತಿ, ಗೌರವ ಸಿಗುವುದು. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು. ದೀರ್ಘಕಾಲಿಕ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿವೆ.

ಮಿಥುನ: ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ನಿಷ್ಫಲ ವಿಚಾರದಲ್ಲಿ ಸಮಯಹರಣವೂ, ಕೀರ್ತಿಹಾನಿಯೂ ಸಂಭವಿಸಲಿದೆ. ಎಚ್ಚರದಿಂದ ಇರಿ.

ಕರ್ಕಾಟಕ: ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶುಭ ಸಮಯವಾಗಿದ್ದು ಅವರು ಪಟ್ಟ ಶ್ರಮಕ್ಕೆ ಅತಿ ಹೆಚ್ಚಿನ ಅಂಕ ಪಡೆದು ತಮ್ಮ ಗುರಿ ಮುಟ್ಟುವ ಸಾಧ್ಯತೆಗಳಿವೆ. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ಅಸ್ತಿತ್ವವನ್ನು ಕಾಪಾಡಿಕೊಳ್ಳಿ.

ಸಿಂಹ: ಕುಟುಂಬದ ಹಾಗೂ ಕಾರ್ಯಕ್ಷೇತ್ರದ ಸಮಸ್ಯೆಯನ್ನು ಸುಧಾರಣೆ ಮಾಡುವಿರಿ. ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವಿರಿ. ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ್ಯ ನಿಮ್ಮಲ್ಲಿದೆ.

ಕನ್ಯಾ: ವ್ಯಾಪಾರಕ್ಕೆ ಸಂಬಂಧಿತ ವಿಷಯಗಳನ್ನು ನಾನಾ ಮೂಲಗಳಿಂದ ಸಂಗ್ರಹಿಸಿ. ಅಧಿಕಾರಿಗಳಿಗೆ ನಿಮ್ಮ ಮೇಲೆ ಅಪನಂಬಿಕೆ ಮೂಡುವಂತಹ ಘಟನೆಗಳು ಸಂಭವಿಸಬಹುದು. ಸಾಲ ಕೊಡುವಾಗ ಸರಿಯಾಗಿ ಯೋಚಿಸಿ.

ತುಲಾ: ಸಂಸ್ಥೆಯ ವತಿಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗಪಡಿಸಿಕೊಳ್ಳಿ. ನಿಮ್ಮ ಪ್ರವೃತ್ತಿಯಿಂದ ಮನೆಯ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು. ಆರೋಗ್ಯ ಉತ್ತಮವಾಗಿರುವುದು.

ವೃಶ್ಚಿಕ: ಕೆಲಸದ ಮುಕ್ತಾಯದ ಸಮಯದಲ್ಲಿ ಬಹಳ ಆಯಾಸವಾಗಲಿದೆ. ವಿದ್ಯಾರ್ಥಿ ವರ್ಗಕ್ಕೆ ಕೆಲವು ಮುಖ್ಯವಾದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸೂಕ್ತವಾದ ದಿನವಾಗಿದೆ. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಧನು: ತಾಂತ್ರಿಕ ವಿದ್ಯೆಯನ್ನು ವ್ಯಾಸಾಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸಲಿದೆ. ದುಡುಕದೇ ಸಮಾಧಾನದಿಂದ ವ್ಯವಹರಿಸಿ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಮಕರ: ಅಂಕಣಕಾರರಿಗೆ ಅಥವಾ ವೃತ್ತಿಪರ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆತು ಆದಾಯ ವೃದ್ಧಿಗೊಳ್ಳಲಿದೆ. ಮುಂಜಾನೆ ಏಳುವಾಗಲೇ ಉತ್ಸಾಹಿಗಳಾಗಿರುತ್ತೀರಿ. ಹಳೆ ಬಾಕಿ ಸಂದಾಯವಾಗುವುದು.

ಕುಂಭ: ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಕಷ್ಟಗಳನ್ನು ಎದುರಿಸುವ ಉತ್ತಮ ಆತ್ಮವಿಶ್ವಾಸ ಹೊಂದುವಿರಿ. ಬರಹಗಾರರಿಗೆ ವೃತ್ತಿಯಲ್ಲಿ ಅಡಚಣೆ ಉಂಟಾಗಬಹುದು.


ಮೀನ: ಮನೆಯಲ್ಲಿ ವಾರ್ಷಿಕ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲು ತೀರ್ಮಾನಿಸುವಿರಿ. ಎಂಥಹ ಪರಿಸ್ಥಿತಿಯನ್ನಾದರೂ ನಿಭಾಯಿಸುವ ಸಾಮರ್ಥ್ಯ ದುರ್ಗಾಪರಮೇಶ್ವರಿಯ ಆರಾಧನೆಯಿಂದ ಪ್ರಾಪ್ತಿಯಾಗಲಿದೆ.

ಪದಬಂಧ 5858

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನಡುವಿರುವ ಲಾಯದಿಂದ ತಪ್ಪಿಸಿಕೊಳ್ಳುವಿಕೆ! (4)
3. ವರ್ಣವುಳ್ಳ ಅಕ್ಷರಮಾಲೆ (4)
5. ಕನ್ನಡಕವನ್ನು ನೋಡುತ್ತಿರುವ ತಿಳಿಗೇಡಿ! (3)
7. ಸರಾಗವಾಗಿ ಕೆಲಸ ಮಾಡುತ್ತಿರುವ ಮೋಚಿ (4)
9. ಅಶೋಕ ವೃಕ್ಷದ ಹತ್ತಿರ ತೋಡಿಕೊಂಡ ವ್ಯಸನ (2)
10. ಭಕ್ತಿಯನ್ನು ಸಲ್ಲಿಸುವವ ತಿರುಗಿದ್ದಾನಲ್ಲಾ? (2)
11. ದಿನಮಣಿ ಹಾಗೂ ರಜನೀಕರ ಒಟ್ಟಿಗಿದ್ದಾರೆ (4)
14. ವನದ ಹತ್ತಿರ ಕಟ್ಟಿರುವ ಮನೆ (3)
17. ಬರ ಬಂದಾಗಿನ ನಗ್ನತೆ (4)
18. ಹಸುವಿನ ಸಮೀಪ ಆಡುತ್ತಿರುವ ಚಿಕ್ಕ ಮಗು (4)

ಮೇಲಿಂದ ಕೆಳಕ್ಕೆ
1. ಪದ ಹಾಡಿ ಬಹುಮಾನವಾಗಿ ಪಡೆದ ಬಿಲ್ಲೆ (3)
2. ನಿನ್ನೆ ನುಡಿದಿರುವುದೆಲ್ಲಾ ಸತ್ಯ! (2)
3. ಮನಸ್ಸನ್ನು ಸೆಳೆದ ಕಾಡು ಹೂ (4)
4. ಬರೆಯುವ ಸಾಧನ (3)
6. ನಿಖರವಾಗಿ ವ್ಯಕ್ತವಾದ ಮರುಕ (4)
7. ಮುದ್ರಣದಲ್ಲಿ ತೋರಿಸಿದ ಕಡಲು (3)
8. ವಕ್ತಾರನಲ್ಲಿ ನೆತ್ತರು ಸುರಿಯುವಿಕೆ! (4)
12. ಚಂದದಿಂದ ವಂತಿಗೆ ನೀಡುವವನು (4)
13. ಬುಡದಲ್ಲಿ ಭದ್ರವಾಗಿರುವ ಪಾಯ (3)
15. ಇದು ಕನಸಲ್ಲ! ಸತ್ಯ! (3)
16. ಸಂದೇಹ ಪಡುವವನ ಶರೀರ (2)



5857ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾಚಾಮಗೋಚರ 4.ನವಿಲು
7.ರಕ 9.ಉರಗ
11.ವಿನಂತಿ 13.ರದನ
14.ಸಂಪದ 16.ಸಕ
17.ಪ್ರಗತಿ 20.ಬಂಡವಾಳಶಾಹಿ

ಮೇಲಿಂದ ಕೆಳಕ್ಕೆ:
2.ಮಜ್ಜೆ 3.ಚದರ
5.ವಿಧುರ 6.ಸವಿಗನಸು
8.ಕಲಾವಿದ 9.ಉಪವಾಸ
10.ಗಟಾರ 11.ತಿತಸಂ
15.ಪರಾಗ 17.ಕರಂಡ
18.ಕೋಳ

ಸುಡೊಕು 6243

2		4		9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6242 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

‘ಕೆನಡಾದಲ್ಲಿ ಎಸ್‌ಬಿಐ ವ್ಯವಹಾರ ಸುಸೂತ್ರ’

ಮುಂಬೈ (ಪಿಟಿಐ): ‘ಪ್ರಸ್ತುತ ಭಾರತ ಮತ್ತು ಕೆನಡಾ ನಡುವೆ ತಲೆದೋರಿರುವ ಬಿಕ್ಕಟ್ಟು ಕೆನಡಾದಲ್ಲಿರುವ ಬ್ಯಾಂಕ್‌ನ ಶಾಖೆಗಳ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ’ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಅಧ್ಯಕ್ಷ ಸಿ.ಎಸ್. ಸೆಟ್ಟಿ ತಿಳಿಸಿದ್ದಾರೆ.

1982ರಿಂದ ಕೆನಡಾದಲ್ಲಿ ಎಸ್‌ಬಿಐ ಕಾರ್ಯಾಚರಣೆ ನಡೆಸುತ್ತಿದೆ. ಇದನ್ನು ಅಲ್ಲಿನವರು ಸ್ಥಳೀಯ ಬ್ಯಾಂಕ್‌ನಂತೆಯೇ ಭಾವಿಸಿದ್ದಾರೆ. ತೊಂದರೆಯಾಗಿರುವ ಬಗ್ಗೆ ಯಾವುದೇ ಗ್ರಾಹಕರಿಂದ ದೂರು ಸಲ್ಲಿಕೆಯಾಗಿಲ್ಲ. ಬ್ಯಾಂಕಿಂಗ್ ವ್ಯವಹಾರವು ಸುಸೂತ್ರವಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಟೊರಾಂಟೊ, ಬ್ರಾಂಪ್ಟನ್ ಹಾಗೂ ವ್ಯಾಂಕೋವರ್ ಸೇರಿ ಎಂಟು ಕಡೆ ಬ್ಯಾಂಕ್‌ನ ಶಾಖೆಗಳಿವೆ.

‘ಬ್ಯಾಂಕ್‌ನ ಬಡ್ಡಿ ವರಮಾನ ಹೆಚ್ಚಳಕ್ಕೆ ಒತ್ತು ನೀಡಲಾಗಿದೆ. ಇದಕ್ಕೆ ಪೂರಕವಾಗಿ ಎಲ್ಲಾ ದಿಕ್ಕಿನಲ್ಲೂ ಕಾರ್ಯ ನಿರ್ವಹಿಸಲಾಗುತ್ತಿದೆ’ ಎಂದು ಸೆಟ್ಟಿ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಆಹ್ವಾನ

ಶ್ರೀ ಜೆ. ಕೃಷ್ಣಪ್ಪ
ಅಧ್ಯಕ್ಷರು, ರಾಷ್ಟ್ರೀಯ ಬಹುಸಂಖ್ಯಾತ ಸ್ವಯಂ ಸೇವಕ ಸಂಘ, ಮಾಜಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರು, ಮಾಜಿ ವರ್ತೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು.
ಇವರು ದಿನಾಂಕ 01.11.2024 (ಶುಕ್ರವಾರ) ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯಕ್ರಮವನ್ನು ದಿನಾಂಕ 11/11/2024 ರಂದು ಸೋಮವಾರ ಮೃತರ ಸ್ವಗೃಹ ವರ್ತೂರಿನಲ್ಲಿ ಏರ್ಪಡಿಸಲಾಗಿದೆ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು:
ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು.
Mo: 7277227333/ 9945413981

3ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ ಎಸ್. ರಾಮಚಂದ್ರಪ್ಪ
ವ್ಯವಸ್ಥಾಪಕರು, ಆರ್.ಆರ್. ಫ್ಯಾಬ್ ಕನ್‌ಸ್ಟ್ರಕ್ಷನ್ಸ್ ಮತ್ತು ಸಂಪ್ರಸಿದ್ಧಿ ಇನ್‌ಫ್ರಾಟೆಕ್
“ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರೂ ನಿಮ್ಮ ವಿಚಾರಧಾರೆ, ಅಗಾಧ ಪ್ರತಿಭೆ, ಜೀವನ ಮೌಲ್ಯ ಆದರ್ಶಮಯ ಬದುಕೇ ನಮಗೆ ಸ್ಫೂರ್ತಿ”
ನಿಮ್ಮ ಸವಿನೆನಪಿನೊಂದಿಗೆ–
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗ
ಮೊಬೈಲ್: 98452 90541

LOOKING FOR JOB OPPORTUNITY
Refer Classifieds on Wednesday


₹20 ಸಾವಿರ ಕೋಟಿ ಎಫ್‌ಪಿಐ ವಾಪಸ್

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಿಂದ ನವೆಂಬರ್ 4ರಿಂದ 8ರ ವರೆಗಿನ ಐದು ದಿನಗಳ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ₹20 ಸಾವಿರ ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

ಸೆಪ್ಟೆಂಬರ್‌ನಲ್ಲಿ ₹57,724 ಕೋಟಿ ಹೂಡಿಕೆಯಾಗಿದ್ದು, ದಾಖಲೆಯಾಗಿತ್ತು. ಅಕ್ಟೋಬರ್‌ನಲ್ಲಿ ₹94,017 ಕೋಟಿ ಬಂಡವಾಳ ವಾಪಸ್ ಪಡೆಯಲಾಗಿತ್ತು.

‘ಚೀನಾದ ಆರ್ಥಿಕತೆಯು ಮಂದಗತಿಯಲ್ಲಿದೆ. ಇದಕ್ಕೆ ಚೇತರಿಕೆ ನೀಡುವ ನಿಟ್ಟಿನಲ್ಲಿ ಅಲ್ಲಿನ ಸರ್ಕಾರವು ವಿದೇಶಿ ಬಂಡವಾಳದ ಆಕರ್ಷಣೆಗೆ ಪೂರಕವಾದ ಹಲವು ಕ್ರಮಗಳನ್ನು ಕೈಗೊಂಡಿದೆ. ಹಾಗಾಗಿ, ವಿದೇಶಿ ಹೂಡಿಕೆದಾರರು ಚೀನಾದ ಮಾರುಕಟ್ಟೆಯತ್ತ ಹೊರಳಿದ್ದಾರೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಬಂಡವಾಳದ ಹೊರಹರಿವು ಹೆಚ್ಚಳವಾಗಿದೆ’ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹440-546
ದ್ವಿತಳಿ (ಬಿ.ವಿ)	₹421-675

ಚಿನ್ನದ ಎಂ.ಎಫ್: ಹೂಡಿಕೆ ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

2023ರ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಒಂದು ಗ್ರಾಂ ಚಿನ್ನದ ಬೆಲೆಯು ₹6,028 ಇತ್ತು. ಈ ವರ್ಷದ ದೀಪಾವಳಿ ವೇಳೆಗೆ ₹7,857ಕ್ಕೆ ಜಿಗಿದಿದೆ. ಅಂದರೆ ಒಂದು ವರ್ಷದ ಅವಧಿಯಲ್ಲಿ ಚಿನ್ನದ ದರವು ಬರೋಬ್ಬರಿ ಶೇ 30ರಷ್ಟು ಹೆಚ್ಚಳ ಕಂಡಿದೆ.

ಕಳೆದ 10 ವರ್ಷದ ಗಳಿಕೆಯ ಲೆಕ್ಕಾಚಾರ ನೋಡಿದಾಗಲೂ ಚಿನ್ನವು ಸರಾಸರಿ ಶೇ 10ರಿಂದ ಶೇ 11ರಷ್ಟು ಲಾಭ ಕೊಟ್ಟಿದೆ. 2025ರಲ್ಲೂ ಚಿನ್ನ ಶೇ 15ರ ವರೆಗೂ ಗಳಿಕೆ ತಂದುಕೊಡುವ ಸಾಧ್ಯತೆಯಿದೆ ಎಂದು ಪರಿಣತರು ಅಂದಾಜಿಸಿದ್ದಾರೆ. ಈ ಹೊತ್ತಿನಲ್ಲಿ ಗೋಲ್ಡ್ ಮ್ಯೂಚುವಲ್ ಫಂಡ್‌ಗಳ (ಎಂ.ಎಫ್) ಮೇಲೆ ಹೂಡಿಕೆ ಮಾಡಿ ಲಾಭ ಗಳಿಸುವುದು ಹೇಗೆ ಎನ್ನುವ ವಿವರ ಇಲ್ಲಿದೆ.

ಚಿನ್ನದ ಮೇಲೆ ಹೂಡಿಕೆ ಯಾಕೆ ಮುಖ್ಯ?: ನಮ್ಮ ಬಳಿ ಹೂಡಿಕೆಗೆ ₹100 ಇದೆ ಎಂದಾದರೆ ₹10 ರಿಂದ ₹12 ಅನ್ನು ಚಿನ್ನದ ಮೇಲೆ ಹೂಡಿಕೆ ಮಾಡಬೇಕು ಎನ್ನುವುದು ಒಂದು ಮಾನದಂಡ. ಸಾಮಾನ್ಯವಾಗಿ ಷೇರು ಮಾರುಕಟ್ಟೆ ಕುಸಿತದ ಹಾದಿಯಲ್ಲಿ ಇರುವಾಗ ಬಂಗಾರದ ಬೆಲೆ ಏರಿಕೆಯ ದಿಕ್ಕಿನಲ್ಲಿರುತ್ತದೆ. ಚಿನ್ನದ ಹೂಡಿಕೆಗೆ ಹಣದುಬ್ಬರ (ಬೆಲೆ ಏರಿಕೆ) ಮೀರಿ ಲಾಭ ತಂದುಕೊಡುವ ಸಾಮರ್ಥ್ಯವಿದೆ.

ಚಿನ್ನ ಅತ್ಯಂತ ಸುರಕ್ಷಿತ ಹೂಡಿಕೆ ಎಂಬ ಭಾವನೆ ಜನರಲ್ಲಿದೆ. ಒಟ್ಟಾರೆಯಾಗಿ ಮಾರುಕಟ್ಟೆಯ ಏರಿಳಿತ ನಿಭಾಯಿಸಲು ಮತ್ತು ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಲು ಚಿನ್ನದ ಮೇಲೆ ಒಂದಷ್ಟು ಹೂಡಬೇಕು.

ಯಾವ ಚಿನ್ನದ ಮೇಲೆ ಹೂಡಿಕೆ ಮಾಡಬೇಕು?: ಒಡವೆ ಖರೀದಿಯಿಂದ ನಿಮಗೆ ಖುಷಿಯಾಗುತ್ತದೆ. ಮದುವೆ, ಸಮಾರಂಭ, ಶುಭ ಕಾರ್ಯದ ಸಂದರ್ಭದಲ್ಲಿ ಅದನ್ನು ತೊಟ್ಟು ಸಂಭ್ರಮಿಸಬಹುದು. ಆದರೆ, ಆಭರಣ ಚಿನ್ನ ನಿಜವಾದ ಹೂಡಿಕೆಯಾಗುವುದಿಲ್ಲ. ಏಕೆಂದರೆ, ಒಡವೆ ಚಿನ್ನ ಖರೀದಿಸಿದಾಗ ಮೇಕಿಂಗ್ ಚಾರ್ಜಸ್‌ಗೆ ಶೇ 15ರಿಂದ ಶೇ 30ರಷ್ಟು ಹಣ ಹೋಗುವ ಜೊತೆಗೆ ಶೇ 3ರಷ್ಟು ಜಿಎಸ್‌ಟಿ ಕೂಡ ಇರುತ್ತದೆ.

ಆಭರಣದ ಗುಣಮಟ್ಟ ಖಾತರಿಯು ಮತ್ತೊಂದು ತಲೆನೋವು. ಸರಿಯಾದ ಹಾಲ್ ಮಾರ್ಕ್ ಚಿನ್ನವನ್ನು ಅಂಗಡಿಯವರು ನೀಡಿದ್ದಾರಾ ಎನ್ನುವ ಆತಂಕ ನಿಮ್ಮನ್ನು ಕಾಡುತ್ತದೆ. ಅಲ್ಲದೆ ಖರೀದಿ ನಂತರ ಚಿನ್ನವನ್ನು ಸುರಕ್ಷಿತವಾಗಿ ಇಡುವುದು ಹೇಗೆ ಎಂಬ ಪ್ರಶ್ನೆ ಎದುರಾಗುತ್ತದೆ. ಆಗ ಬ್ಯಾಂಕ್ ಲಾಕರ್‌ಗಾಗಿಯೂ ನೀವು ವೆಚ್ಚ ಮಾಡಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಒಡವೆ ಚಿನ್ನ ಖರೀದಿಯನ್ನು ನಿಜವಾದ ಹೂಡಿಕೆ ಎಂದು ಪರಿಗಣಿಸಲು ಸಾಧ್ಯವಿಲ್ಲ.

ಚಿನ್ನದ ಮೇಲೆ ಹೂಡಿಕೆ ಅಂತ ಬಂದಾಗ ಗೋಲ್ಡ್ ಇಟಿಎಫ್, ಗೋಲ್ಡ್ ಮ್ಯೂಚುವಲ್ ಫಂಡ್, ಡಿಜಿಟಲ್ ಗೋಲ್ಡ್ ಮತ್ತು ಸಾವರಿನ್ ಗೋಲ್ಡ್ ಬಾಂಡ್ ಉತ್ತಮ ಆಯ್ಕೆಗಳಾಗಿವೆ.

ಗೋಲ್ಡ್ ಮ್ಯೂಚುವಲ್ ಫಂಡ್ ಎಂದರೇನು?: ಚಿನ್ನ ಅಥವಾ ಚಿನ್ನಕ್ಕೆ ಸಂಬಂಧಿಸಿದ ಸ್ವತ್ತುಗಳ ಮೇಲೆ ಹೂಡಿಕೆ ಮಾಡುವ ಫಂಡ್‌ಗಳನ್ನು ಗೋಲ್ಡ್ ಮ್ಯೂಚುವಲ್ ಫಂಡ್ ಎನ್ನುತ್ತಾರೆ. ಗೋಲ್ಡ್ ಮ್ಯೂಚುವಲ್ ಫಂಡ್ ಅನ್ನು ಪೇಪರ್ ಗೋಲ್ಡ್ ಎಂದು ಸಹ ಕರೆಯುತ್ತಾರೆ. ಏಕೆಂದರೆ, ಇಲ್ಲಿ ಹೂಡಿಕೆದಾರನಿಗೆ ಘನ ರೂಪದ ಚಿನ್ನ ನೀಡುವುದಿಲ್ಲ.

ಬದಲಿಗೆ ಚಿನ್ನದ ಯೂನಿಟ್‌ಗಳನ್ನು ಎಲೆಕ್ಟ್ರಾನಿಕ್ ದಾಖಲೆ ರೂಪದಲ್ಲಿ ಒದಗಿಸಲಾಗುತ್ತದೆ. ಗೋಲ್ಡ್ ಮ್ಯೂಚುವಲ್ ಫಂಡ್‌ಗಳು ಮೂಲತಃ ಗೋಲ್ಡ್ ಎಕ್ಸ್‌ಚೇಂಜ್, ಗೋಲ್ಡ್ ಮೈನಿಂಗ್, ಚಿನ್ನದ ಮಾರ್ಕೆಟಿಂಗ್ ಅಥವಾ ಚಿನ್ನದ ಉತ್ಪನ್ನಗಳನ್ನು ಮಾರಾಟ ಮಾಡುವ ನೋಂದಾಯಿತ ಕಂಪನಿಗಳ ಮೇಲೆ ಹೂಡಿಕೆ ಮಾಡುತ್ತವೆ. ಚಿನ್ನದ ಬೆಲೆಯ ಏರಿಕೆ ಅಥವಾ ಇಳಿಕೆಯು ಗೋಲ್ಡ್ ಮ್ಯೂಚುವಲ್ ಫಂಡ್‌ಗಳ ಮೇಲೆ ಪರಿಣಾಮ ಬೀರುತ್ತದೆ.

ಉತ್ತಮ ಹೂಡಿಕೆ ಏಕೆ?: ಮ್ಯೂಚುವಲ್ ಫಂಡ್ ಹೂಡಿಕೆಯ ಮಾದರಿಯಲ್ಲೇ ಗೋಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲೂ ಹೂಡಿಕೆ ಸಾಧ್ಯವಿದೆ. ಕನಿಷ್ಠ ₹100 ಮೊತ್ತದಿಂದಲೂ ಗೋಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಗೋಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಆಭರಣ ಚಿನ್ನದಲ್ಲಿರುವ ಮೇಕಿಂಗ್ ಚಾರ್ಜ್, ಜಿಎಸ್‌ಟಿ ಮುಂತಾದ ಹೆಚ್ಚುವರಿ ವೆಚ್ಚಗಳಿರುವುದಿಲ್ಲ.

ಒಂದಷ್ಟು ಎಕ್ಸ್‌ಪೆನ್ಸ್ ರೇಷಿಯೊ (ವೆಚ್ಚ ಅನುಪಾತ/ ಕಮಿಷನ್) ಮಾತ್ರ ಇರುತ್ತದೆ. ಅಲ್ಲದೆ ಚಿನ್ನದ ಸುರಕ್ಷತೆ, ಗುಣಮಟ್ಟದ ಬಗ್ಗೆ ಇಲ್ಲಿ ತಲೆಕೆಡಿಸಿಕೊಳ್ಳಬೇಕಿಲ್ಲ. ಹಣ ಬೇಕಾದಾಗ ನಗದೀಕರಣ ಮಾಡಿಕೊಳ್ಳುವ ಅವಕಾಶವೂ ಗೋಲ್ಡ್ ಮ್ಯೂಚುವಲ್ ಫಂಡ್‌ನಲ್ಲಿ ಇದೆ. ಎಲ್ಲದಕ್ಕಿಂತಲೂ ಪ್ರಮುಖವಾಗಿ ಚಿನ್ನದ ಬೆಲೆ ಏರಿಕೆಗೆ ಅನುಗುಣವಾಗಿ ಗೋಲ್ಡ್ ಫಂಡ್‌ನ ಮೌಲ್ಯವೂ ವೃದ್ಧಿಸುತ್ತದೆ.

ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮೂಲಕ ಅಂದರೆ ಪ್ರತಿ ತಿಂಗಳು ಗೋಲ್ಡ್ ಫಂಡ್‌ನಲ್ಲಿ ನಿಗದಿತ ಮೊತ್ತದ ಹೂಡಿಕೆಯನ್ನು ಮಾಡುತ್ತಾ ಸಾಗಬಹುದು. ಇಲ್ಲ ದೊಡ್ಡ ಮೊತ್ತದ ಹೂಡಿಕೆ ಮಾಡುತ್ತೇವೆ ಎಂದರೆ ಅದಕ್ಕೂ ಅವಕಾಶವಿದೆ. ಜೀರೊ ಕಮಿಷನ್ ಡೈರೆಕ್ಟ್ ಮ್ಯೂಚುವಲ್ ಫಂಡ್ ಆ್ಯಪ್, ಮ್ಯೂಚುವಲ್ ಫಂಡ್ ಕಂಪನಿಗಳ ವೆಬ್‌ಸೈಟ್, ಷೇರು ಬ್ರೋಕಿಂಗ್ ಸಂಸ್ಥೆಗಳ ಸಹಾಯದಿಂದ, ಸೆಬಿ ನೋಂದಾಯಿತ ಮ್ಯೂಚುವಲ್ ಫಂಡ್ ವಿತರಕರ ಮೂಲಕ ಗೋಲ್ಡ್ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಸಾಧ್ಯ. ಆದರೆ ಗೊತ್ತಿರಲಿ, ಜೀರೊ ಕಮಿಷನ್ ಮ್ಯೂಚುವಲ್ ಫಂಡ್ ಆ್ಯಪ್‌ಗಳ ಮೂಲಕ ಮತ್ತು ಮ್ಯೂಚುವಲ್ ಫಂಡ್ ಕಂಪನಿ ವೆಬ್‌ಸೈಟ್ ಮೂಲಕ ಹೂಡಿಕೆ ಮಾಡಿದಾಗ ಕಮಿಷನ್ (ಎಕ್ಸ್‌ಪೆನ್ಸ್ ರೇಷಿಯೊ) ಕಡಿಮೆ ಇರುತ್ತದೆ. ಇನ್ನಿತರ ಮಾರ್ಗಗಳಲ್ಲಿ ಹೂಡಿಕೆ ಮಾಡಿದಾಗ ಕಮಿಷನ್ (ಎಕ್ಸ್‌ಪೆನ್ಸ್ ರೇಷಿಯೋ) ಸ್ವಲ್ಪ ಜಾಸ್ತಿ ಇರುತ್ತದೆ.

ಕೆಲವು ಉದಾಹರಣೆಗಳು: ಮಾರುಕಟ್ಟೆಯಲ್ಲಿ ಹತ್ತಾರು ಗೋಲ್ಡ್ ಫಂಡ್ ಆಯ್ಕೆಗಳಿವೆ. ಎಸ್‌ಬಿಐ ಗೋಲ್ಡ್ ಡೈರೆಕ್ಟ್ ಪ್ಲಾನ್ ಗ್ರೋಥ್, ಎಕ್ಸಿಸ್ ಗೋಲ್ಡ್ ಪ್ಲಾನ್ ಗ್ರೋಥ್, ಎಚ್‌ಡಿಎಫ್‌ಸಿ ಗೋಲ್ಡ್ ಡೈರೆಕ್ಟ್ ಪ್ಲಾನ್ ಗ್ರೋಥ್, ಕ್ವಾಂಟಂ ಗೋಲ್ಡ್ ಸೇವಿಂಗ್ಸ್ ಪ್ಲಾನ್ ಗ್ರೋಥ್ ಕೆಲ ಉದಾಹರಣೆಗಳಾಗಿವೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಸೆನ್ಸೆಕ್ಸ್, ನಿಫ್ಟಿ ಏರಿಳಿತ

ಷೇರುಪೇಟೆ

ನವೆಂಬರ್ 8ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. 79,486 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.3ರಷ್ಟು ತಗ್ಗಿದೆ. 24,148 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 0.64ರಷ್ಟು ಇಳಿಕೆ ದಾಖಲಿಸಿದೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷ ಗಾದಿಗೇರಲಿದ್ದಾರೆ ಎಂಬ ಸುದ್ದಿ ಹೊರಬೀಳುತ್ತಿದ್ದಂತೆಯೇ ಸೆನ್ಸೆಕ್ಸ್ ಮತ್ತು ನಿಫ್ಟಿ ಪುಟಿದೆದ್ದಿದ್ದವು. ಆದರೆ, ನಂತರದ ಎರಡು ದಿನಗಳಲ್ಲಿ ಸೂಚ್ಯಂಕಗಳು ಗಳಿಕೆಯತ್ತ ಸಾಗಲು ಸಾಧ್ಯವಾಗಲಿಲ್ಲ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ, ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ಸಾಮಾನ್ಯ ಸಾಧನೆ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 3.85ರಷ್ಟು ಕುಸಿದಿದೆ. ಮಾಧ್ಯಮ ಶೇ 3.44, ಎನರ್ಜಿ ಶೇ 3.19, ಅನಿಲ ಮತ್ತು ತೈಲ ಶೇ 2.02, ಎಫ್‌ಎಂಸಿಜಿ ಶೇ 1.77, ಫಾರ್ಮಾ ಶೇ 1.11, ಲೋಹ ಶೇ 0.81, ಬ್ಯಾಂಕ್ ಶೇ 0.48, ಆಟೊ ಶೇ 0.22ರಷ್ಟು ಇಳಿಕೆಯಾಗಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4.09ರಷ್ಟು ಜಿಗಿದಿದ್ದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.02ರಷ್ಟು ಏರಿಕೆ ಕಂಡಿದೆ.

ಇಳಿಕೆ–ಏರಿಕೆ: ನಿಫ್ಟಿಯಲ್ಲಿ ಟ್ರೆಂಟ್ ಶೇ 11.71, ಕೋಲ್ ಇಂಡಿಯಾ ಶೇ 6.71, ಏಷ್ಯನ್ ಪೇಂಟ್ಸ್ ಶೇ 5.81, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 5.8, ಗ್ರಾಸಿಮ್ ಶೇ 5.62, ಹೀರೊ ಮೋಟೊಕಾರ್ಪ್ ಶೇ 5.12, ಟಾಟಾ ಮೋಟರ್ಸ್ ಶೇ 4.49, ಶ್ರೀರಾಮ್ ಫೈನಾನ್ಸ್ ಶೇ 4.47, ರಿಲಯನ್ಸ್ ಇಂಡಸ್ಟ್ರೀಸ್ ಶೇ 4.11, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 3.87, ಒಎನ್‌ಜಿಸಿ ಶೇ 3.49 ಮತ್ತು ಎನ್‌ಟಿಪಿಸಿ ಶೇ 3.35ರಷ್ಟು ಕುಸಿದಿವೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 5.76, ಅಪೋಲೊ ಹಾಸ್ಪಿಟಲ್ಸ್ ಶೇ 5.22, ಟೆಕ್ ಮಹೀಂದ್ರ ಶೇ 4.96, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 4.14, ಟಿಸಿಎಸ್ ಶೇ 4, ಇನ್ಫೊಸಿಸ್ ಶೇ 3.67, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.28, ವಿಪ್ರೊ ಶೇ 3.21, ಭಾರತ್ ಎಲೆಕ್ಟ್ರಾನಿಕ್ಸ್ ಶೇ 3.06, ಎಸ್‌ಬಿಐ ಶೇ 2.7, ಸಿಪ್ಲಾ ಶೇ 2.09 ಮತ್ತು ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 1.5 ರಷ್ಟು ಜಿಗಿದಿವೆ.

ಮುನ್ನೋಟ: ಈ ವಾರ ಒಎನ್‌ಜಿಸಿ, ಹಿಂಡಾಲ್ಕೊ, ಬ್ರಿಟಾನಿಯಾ, ಎನ್‌ಎಂಡಿಸಿ, ಬಿಇಎಂಎಲ್, ಗ್ರಾಫೈಟ್ ಇಂಡಿಯಾ, ಫಿನೋಲೆಕ್ಸ್ ಕೇಬಲ್ಸ್, ಬಾಷ್, ಐಷರ್, ಕಲ್ಯಾಣ ಜ್ಯುವೆಲರ್ಸ್, ದೀಪಕ್ ನೈಟ್ರೇಟ್, ಅಪೋಲೊ ಟೈಯರ್, ಎಚ್‌ಎಎಲ್, ಹೀರೊ ಮೋಟೊಕಾರ್ಪ್, ಮುತ್ತೂಟ್ ಫೈನಾನ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ. ಉಳಿದಂತೆ ಜಾಗತಿಕ ಹಾಗೂ ದೇಶೀಯ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಕೆಲಸಕ್ಕೆ ಹಾಜರಾಗಲು ಸೂಚನೆಗೆ,
ಚೇತನ್ ಗೌಡ
ಕಾರ್ಮಿಕ ಸಂಖ್ಯೆ : PNY0038
ನೀವು ದಿನಾಂಕ: 24.05.2024 ರಿಂದ ಇಲ್ಲಿಯವರೆಗೂ ಕೆಲಸಕ್ಕೆ ಗೈರು ಹಾಜರಾಗಿರುತ್ತೀರಾ.
ಕಡತದಲ್ಲಿ ಇರುವ ವಿಳಾಸಕ್ಕೆ ಅಂಚೆ ಮೂಲಕ ಕೆಲಸಕ್ಕೆ ಹಾಜರಾಗಲು ತಿಳಿಸಿರುತ್ತೇವೆ. ಆದರೂ ಸಹ ನೀವು ಕೆಲಸಕ್ಕೆ ಹಾಜರಾಗಲು ನಿರಾಕರಿಸಿರುತ್ತೀರಿ. ಹಾಗಿದ್ದರೂ ಸಹ ನಿಮಗೆ ಮತ್ತೊಂದು ಕಾಲಾವಕಾಶ ನೀಡುವ ಸಲುವಾಗಿ ಈ ಪತ್ರಿಕೆಯ ಮೂಲಕ ತಿಳಿಸುವುದೇನೆಂದರೆ, ಜಾಹೀರಾತಿನ ದಿನಾಂಕದಿಂದ 3(ಮೂರು) ದಿನಗಳ ಒಳಗೆ ತಪ್ಪದೇ ಕೆಲಸಕ್ಕೆ ಹಾಜರಾಗಬೇಕೆಂದು ಸೂಚಿಸಲಾಗಿದೆ, ತಪ್ಪಿದ್ದಲ್ಲಿ ನಿಮಗೆ ಕೆಲಸಕ್ಕೆ ಹಾಜರಾಗಲು ಇಷ್ಟವಿಲ್ಲ ಎಂದು ಮತ್ತು ಕೆಲಸವನ್ನು ತ್ಯಜಿಸಿರುವಿರಿ ಎಂದು ಪರಿಗಣಿಸಿ ನಿಮ್ಮ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.
(ಜಿ. ರವಿಕುಮಾರ್)
ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ (HR)
ನ್ಯಾಶ್ ಇಂಡಸ್ಟ್ರೀಸ್ ಪ್ರೈ.ಲಿ.
ನಂ.236–237/2, 8ನೇ ಮುಖ್ಯರಸ್ತೆ, 3ನೇ ಕ್ರಾಸ್, 3ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು.
ಬೆಂಗಳೂರು ತಾ: 11.11.2024

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000- 17,000. 8951315839, 9141634619

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕು ಹೆಚ್ಚು ಸಂಪಾದಿಸಿ ತರಭೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

04.01.2025 12.03.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 13.01.2025 ದುಬೈ,ಅಬುದಾಬಿ 6 ದಿನಗಳು. 23.12.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 7 ದಿನಗಳು. 10.12.2024 08.01.2025 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248 7022547922

ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ 6 ದಿನಗಳ ದುಬೈ, 6 ದಿನಗಳ ಬಾಲಿ, 6 ದಿನಗಳ ಶ್ರೀ ಲಂಕಾ, 7/11 ದಿನಗಳ ಸಿಂಗಪುರ್, ಮಲೇಷ್ಯಾ, ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ & ಟೂರ್ಸ್ 9844037295 9844166555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ನಿತ್ಯ 1.35 ಕೋಟಿ ವಂಚನೆ ಕರೆಗೆ ತಡೆ

ಮೇ ತಿಂಗಳೊಳಗೆ ಬಿಎಸ್‌ಎನ್‌ಎಲ್ 5ಜಿ ಸೇವೆ: ಕೇಂದ್ರ

ನವದೆಹಲಿ (ಪಿಟಿಐ): ವಂಚನೆ ಪತ್ತೆ ವ್ಯವಸ್ಥೆಯ ಅಳವಡಿಕೆಯಿಂದಾಗಿ ಪ್ರತಿದಿನ 1.35 ಕೋಟಿ ವಂಚನೆ ಕರೆಗಳಿಗೆ ತಡೆ ಬಿದ್ದಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

ಗ್ರಾಹಕರಿಗೆ ಮೋಸ ಮಾಡುವ ಉದ್ದೇಶದಿಂದ ವಿದೇಶಗಳಿಂದ ಹೆಚ್ಚಾಗಿ ಅನಪೇಕ್ಷಿತ ಮೊಬೈಲ್ ಕರೆಗಳು ಬರುತ್ತವೆ. ಇಂತಹ ಸ್ಪ್ಯಾಮ್‌ಗಳನ್ನು ಪತ್ತೆಹಚ್ಚಿ ತಡೆಗಟ್ಟಲಾಗುತ್ತಿದೆ. ಇದರಿಂದ ಇಲ್ಲಿಯವರೆಗೆ ಸಾರ್ವಜನಿಕರಿಗೆ ಆಗುತ್ತಿದ್ದ ₹2,500 ಕೋಟಿ ನಷ್ಟವನ್ನು ತಪ್ಪಿಸಲಾಗಿದೆ ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಟೆಲಿಕಾಂ ವಂಚನೆ ತಡೆಗಟ್ಟುವ ನಿಟ್ಟಿನಲ್ಲಿ ಈಗಾಗಲೇ ‘ಸಂಚಾರ ಸಾಥಿ’ ಪೋರ್ಟಲ್ ಅನ್ನು ರೂಪಿಸಲಾಗಿದೆ. ಇದು ಮೊಬೈಲ್ ಕಳ್ಳತನ ಪ್ರಕರಣ ಪತ್ತೆ ಹಚ್ಚಲು ನೆರವಾಗಿದೆ. ಅಲ್ಲದೆ, ‘ಚಕ್ಷು’ ಪೋರ್ಟಲ್ ವಂಚನೆ ಕರೆಗಳು ಮತ್ತು ಸಂದೇಶದ ಬಗ್ಗೆ ಗ್ರಾಹಕರಿಗೆ ಎಚ್ಚರಿಕೆ ನೀಡುತ್ತದೆ ಎಂದು ಹೇಳಿದ್ದಾರೆ.



ಜ್ಯೋತಿರಾದಿತ್ಯ ಸಿಂಧಿಯಾ

ವಂಚನೆ ಪತ್ತೆ ವ್ಯವಸ್ಥೆಯು 2.9 ಲಕ್ಷ ಮೊಬೈಲ್ ಫೋನ್‌ಗಳ ಸಂಪರ್ಕ ಮತ್ತು 18 ಲಕ್ಷ ಸಂದೇಶಗಳನ್ನು ಸ್ಥಗಿತಗೊಳಿಸಿದೆ ಎಂದು ಸಚಿವರು ತಿಳಿಸಿದ್ದಾರೆ.

ವಂಚನೆ ಎಸಗುವವರು ವಿದೇಶಗಳಿಂದ ಭಾರತದ ಮೊಬೈಲ್ ಕೋಡ್ ಸಂಖ್ಯೆ ಬಳಸಿಯೇ ಗ್ರಾಹಕರ ಮೊಬೈಲ್‌ಗಳಿಗೆ ಕರೆ ಮಾಡುತ್ತಾರೆ. ತಂತ್ರಾಂಶ ಅಳವಡಿಕೆಯಿಂದಾಗಿ ಇಂತಹ ಕರೆಗಳಿಗೆ ತಡೆ ಬಿದ್ದಿದೆ ಎಂದು ಹೇಳಿದ್ದಾರೆ.

ಆತ್ಮನಿರ್ಭರ ಭಾರತಕ್ಕೆ ಸರ್ಕಾರ ಒತ್ತು ನೀಡಲಿದೆ. ಹಾಗಾಗಿ, ಮುಂದಿನ ವರ್ಷದ ಏಪ್ರಿಲ್‌ನೊಳಗೆ ಬಿಎಸ್‌ಎನ್‌ಎಲ್‌ನ 4ಜಿ ಮತ್ತು ಮೇ ತಿಂಗಳಿನೊಳಗೆ 5ಜಿ ಸೇವೆ ಒದಗಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ ಎಂದು ವಿವರಿಸಿದ್ದಾರೆ.

4ಜಿ ಸೇವೆ ಸಂಬಂಧ ದೇಶದಾದ್ಯಂತ 50 ಸಾವಿರ ಟವರ್‌ಗಳ ನಿರ್ಮಾಣ ಪೂರ್ಣಗೊಂಡಿದೆ. 1 ಲಕ್ಷ ಬೇಸ್ ಸ್ಟೇಷನ್‌ಗಳ ನಿರ್ಮಾಣ ಪ್ರಗತಿಯಲ್ಲಿದೆ. ಮುಂದಿನ ವರ್ಷದ ಏಪ್ರಿಲ್– ಮೇ ತಿಂಗಳ ವೇಳೆಗೆ ಈ ಸ್ಟೇಷನ್‌ಗಳ ನಿರ್ಮಾಣ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಬಿಎಸ್‌ಎನ್‌ಎಲ್ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ದೂರಸಂಪರ್ಕ ಕ್ಷೇತ್ರದಲ್ಲಿ ಇದನ್ನು ಮುಂಚೂಣಿ ಸ್ಥಾನಕ್ಕೇರಿಸಲು ಕ್ರಮವಹಿಸಲಾಗುವುದು. ಮಾರುಕಟ್ಟೆಯ ಮೌಲ್ಯ ಮತ್ತು ಚಂದಾದಾರರ ಸಂಖ್ಯೆ ಹೆಚ್ಚಳಕ್ಕೆ ಅಗತ್ಯವಿರುವ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ದೇಶದಲ್ಲಿ 4ಜಿ ಸೇವೆಯಿಂದ ದೂರ ಉಳಿದಿರುವ 37 ಸಾವಿರ ಗ್ರಾಮಗಳಿವೆ. ಮುಂದಿನ ವರ್ಷದ ಮಾರ್ಚ್–ಏಪ್ರಿಲ್ ವೇಳೆಗೆ ಈ ಹಳ್ಳಿಗಳಿಗೆ ಸೇವೆ ಒದಗಿಸುತ್ತೇವೆ. ಇದಕ್ಕಾಗಿ 27 ಸಾವಿರ ಬೇಸ್ ಟ್ರಾನ್ಸಿವರ್ ಸ್ಟೇಷನ್‌ಗಳ (ಬಿಟಿಎಸ್) ಅಗತ್ಯವಿದೆ. ಈ ಪೈಕಿ 10 ಸಾವಿರ ಸ್ಟೇಷನ್‌ಗಳ ನಿರ್ಮಾಣ ಪೂರ್ಣಗೊಂಡಿದೆ ಎಂದು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಟ್‌ಕಾಯಿನ್ ಮೌಲ್ಯ 80 ಸಾವಿರ ಡಾಲರ್‌ಗೆ ಏರಿಕೆ

ಲಂಡನ್ (ಎಎಫ್‌ಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ ಬೆನ್ನಲ್ಲೇ ಬಿಟ್‌ಕಾಯಿನ್ ಮೌಲ್ಯವು ಭಾನುವಾರದ ವಹಿವಾಟಿನಲ್ಲಿ ಭಾರಿ ಏರಿಕೆಯಾಗಿದ್ದು, ಮೊದಲ ಬಾರಿಗೆ 80 ಸಾವಿರ ಅಮೆರಿಕನ್ ಡಾಲರ್‌ಗೆ (₹67.50 ಲಕ್ಷ) ತಲುಪಿದೆ.

ಜಾಗತಿಕ ಮಟ್ಟದಲ್ಲಿ ಅಮೆರಿಕವನ್ನು ಕ್ರಿಪ್ಟೊಕರೆನ್ಸಿಗಳ ರಾಜಧಾನಿಯನ್ನಾಗಿ ಮಾಡುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಇದಕ್ಕಾಗಿ ವರ್ಲ್ಡ್ ಲಿಬರ್ಟಿ ಫೈನಾನ್ಶಿಯಲ್ ಹೆಸರಿನ ಡಿಜಿಟಲ್ ಕರೆನ್ಸಿ ವೇದಿಕೆಯನ್ನೂ ಆರಂಭಿಸಿದ್ದಾರೆ.

ಚುನಾವಣಾ ಪ್ರಚಾರದ ವೇಳೆ ಕ್ರಿಪ್ಟೊಕರೆನ್ಸಿ ಸ್ನೇಹಿ ನೀತಿ ಜಾರಿಗೊಳಿಸುವುದಾಗಿ ಅವರು ಪ್ರಕಟಿಸಿದ್ದರು. ಅಲ್ಲದೆ, ರೆಸ್ಟೋರೆಂಟ್‌ವೊಂದರಲ್ಲಿ ಬಿಟ್‌ಕಾಯಿನ್ ನೀಡಿ ಬರ್ಗರ್ ಖರೀದಿಸಿದ್ದರು. ಟ್ರಂಪ್ ಗೆಲುವು ಸಾಧಿಸಿರುವುದರಿಂದ ಹೂಡಿಕೆದಾರರು ಬಿಟ್‌ಕಾಯಿನ್‌ಗಳಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ನಿವೃತ್ತಿ ವಯಸ್ಸು ನಿಗದಿ: ಏರ್ ಇಂಡಿಯಾ ಪೈಲಟ್‌ಗಳ ಆಕ್ಷೇಪ

ಮುಂಬೈ (ಪಿಟಿಐ): ವಿಸ್ತಾರಾ ಕಂಪನಿಯು ಏರ್ ಇಂಡಿಯಾ ವಿಮಾನಯಾನ ಕಂಪನಿ ಜೊತೆಗೆ ವಿಲೀನವಾಗುತ್ತಿದೆ. ಈ ನಡುವೆಯೇ ಟಾಟಾ ಸಮೂಹಕ್ಕೆ ಸೇರಿದ ಈ ಎರಡು ಕಂಪನಿಯ ಪೈಲಟ್‌ಗಳ ನಿವೃತ್ತಿ ವಯಸ್ಸಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವಯೋಮಿತಿ ಬಗ್ಗೆ ಏರ್ ಇಂಡಿಯಾದ ಕೆಲವು ಪೈಲಟ್‌ಗಳು ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

1950ರಿಂದ ಕೇಂದ್ರ ಸರ್ಕಾರದ ಒಡೆತನದಲ್ಲಿದ್ದ ಏರ್ ಇಂಡಿಯಾವು, 2022ರಲ್ಲಿ ಟಾಟಾ ಸಮೂಹದ ತೆಕ್ಕೆಗೆ ಸೇರಿತು. ಈ ಪೈಲಟ್‌ಗಳ ನಿವೃತ್ತಿ ವಯಸ್ಸು 58ಕ್ಕೆ ನಿಗದಿಯಾಗಿದೆ. ವಿಸ್ತಾರಾ ಪೈಲಟ್‌ಗಳ ವಯೋನಿವೃತ್ತಿಯನ್ನು 60 ವರ್ಷಕ್ಕೆ ನಿಗದಿಪಡಿಸಲಾಗಿದೆ ಎಂದು ಹೇಳಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036



ರಷ್ಯಾದ ಮಾಸ್ಕೊ ವಲಯದ ಗ್ರಾಮವೊಂದರ ಮೇಲೆ ನಡೆದ ಡ್ರೋನ್ ದಾಳಿಗೆ ಕಾರು ಹಾನಿಗೊಂಡಿದೆ —ಎಎಫ್‌ಪಿ ಚಿತ್ರ

ಮಾಸ್ಕೊ ಮೇಲೆ ಉಕ್ರೇನ್ ಡ್ರೋನ್ ದಾಳಿ

ಮಾಸ್ಕೊ (ರಾಯಿಟರ್ಸ್): ರಷ್ಯಾ ರಾಜಧಾನಿ ಮಾಸ್ಕೊ ಮೇಲೆ ಉಕ್ರೇನ್ ಪಡೆಗಳು ಕನಿಷ್ಠ 34 ಡ್ರೋನ್‌ಗಳನ್ನು ಬಳಸಿ ಭಾನುವಾರ ದಾಳಿ ನಡೆಸಿವೆ. ರಷ್ಯಾ ವಿರುದ್ಧ 2022ರಲ್ಲಿ ಸಮರ ಆರಂಭವಾದ ನಂತರದಲ್ಲಿ, ಮಾಸ್ಕೊ ಮೇಲೆ ನಡೆದಿರುವ ಅತಿದೊಡ್ಡ ಡ್ರೋನ್ ದಾಳಿ ಇದಾಗಿದೆ.

ದಾಳಿಯ ಪರಿಣಾಮವಾಗಿ, ಮಾಸ್ಕೊದ ಮೂರು ಪ್ರಮುಖ ವಿಮಾನ ನಿಲ್ದಾಣಗಳಿಂದ ವಿಮಾನ ಸಂಚಾರವನ್ನು ಬೇರೆಡೆ ತಿರುಗಿಸಲಾಗಿತ್ತು. ದಾಳಿಯಲ್ಲಿ ಒಬ್ಬ ವ್ಯಕ್ತಿಗೆ ಗಾಯಗಳಾಗಿವೆ.


ರಷ್ಯಾದ ರಕ್ಷಣಾ ವ್ಯವಸ್ಥೆಯು ದೇಶದ ಪಶ್ಚಿಮ ಭಾಗದ ಇತರ ಪ್ರದೇಶಗಳ ಮೇಲೆ ಭಾನುವಾರ ನಡೆದ ದಾಳಿಯ ಭಾಗವಾಗಿದ್ದ 36 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

‘ಉಕ್ರೇನ್ ಆಡಳಿತವು ವಿಮಾನ ಮಾದರಿಯ ಡ್ರೋನ್‌ಗಳನ್ನು ಬಳಸಿ ಭಯೋತ್ಪಾದಕ ದಾಳಿ ಎಸಗಲು ನಡೆಸಿದ ಯತ್ನವನ್ನು ವಿಫಲಗೊಳಿಸಲಾಗಿದೆ’ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಮಾಸ್ಕೊ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳ ಒಟ್ಟು ಜನಸಂಖ್ಯೆ 2.1 ಕೋಟಿಯಷ್ಟಿದೆ.

ರಷ್ಯಾ ಕಡೆಯಿಂದ 145 ಡ್ರೋನ್‌ಗಳನ್ನು ಬಳಸಿ ತನ್ನ ಮೇಲೆ ದಾಳಿ ನಡೆಸಲಾಗಿದೆ ಎಂದು ಉಕ್ರೇನ್ ಹೇಳಿದೆ. ಅಲ್ಲದೆ, ದೇಶದ ವಾಯು ರಕ್ಷಣಾ ವ್ಯವಸ್ಥೆಯು 62 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದೂ ತಿಳಿಸಿದೆ.

ಅರಿಜೋನಾ: ಟ್ರಂಪ್‌ಗೆ ಜಯ

‘ನಿರ್ಣಾಯಕ ರಾಜ್ಯ’ಗಳಲ್ಲಿ ರಿಪಬ್ಲಿಕನ್ ಮೇಲುಗೈ



ವಾಷಿಂಗ್ಟನ್ (ಪಿಟಿಐ): ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅರಿಜೋನಾ ರಾಜ್ಯದಲ್ಲೂ ಗೆಲುವು ಪಡೆದಿದ್ದಾರೆ. ಈ ಮೂಲಕ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶ ನಿರ್ಧರಿಸುವಲ್ಲಿ ‘ನಿರ್ಣಾಯಕ’ ಎನಿಸಿರುವ ಎಲ್ಲ ಏಳು ರಾಜ್ಯಗಳಲ್ಲೂ ಜಯಭೇರಿ ಸಾಧಿಸಿದ್ದಾರೆ.

ಅಮೆರಿಕದಲ್ಲಿ 50 ರಾಜ್ಯಗಳಿವೆಯಾದರೂ ಏಳು ರಾಜ್ಯಗಳಾದ ಅರಿಜೋನಾ, ಪೆನ್ಸಿಲ್ವೇನಿಯಾ, ನಾರ್ತ್ ಕೆರೊಲಿನಾ, ನೆವಾಡಾ, ಜಾರ್ಜಿಯಾ, ಮಿಷಿಗನ್ ಮತ್ತು ವಿಸ್ಕಾನ್‌ಸಿನ್‌ನ ಮತಗಳು ನಿರ್ಣಾಯಕವಾಗಿವೆ.

ಅರಿಜೋನಾ ರಾಜ್ಯದ ಗೆಲುವಿನೊಂದಿಗೆ ಟ್ರಂಪ್, 312 ಎಲೆಕ್ಟರ್‌ಗಳ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹಾಲಿ ಉಪಾಧ್ಯಕ್ಷೆ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರಿಗೆ 226 ಎಲೆಕ್ಟರ್‌ಗಳ ಬೆಂಬಲ ದೊರೆತಿದೆ. ಅರಿಜೋನಾದಲ್ಲಿ 11 ಎಲೆಕ್ಟರಲ್ ಕಾಲೇಜ್ ಮತಗಳು ಇವೆ. ಅಧ್ಯಕ್ಷರಾಗಿ ಆಯ್ಕೆಯಾಗಲು ಒಟ್ಟು 538 ಎಲೆಕ್ಟರ್‌ಗಳ ಪೈಕಿ 270 ಎಲೆಕ್ಟರ್‌ಗಳ ಬೆಂಬಲದ ಅಗತ್ಯವಿತ್ತು.

ಟ್ರಂಪ್ ನೇತೃತ್ವದ ರಿಪಬ್ಲಿಕನ್ ಪಕ್ಷವು ಸೆನೆಟ್‌ನಲ್ಲಿ 52 ಸ್ಥಾನಗಳನ್ನು ಹಾಗೂ ಡೆಮಾಕ್ರಟಿಕ್ ಪಕ್ಷ 47 ಸ್ಥಾನಗಳನ್ನು ಹೊಂದಿವೆ.

2020ರಲ್ಲಿ ಅರಿಜೋನಾ ರಾಜ್ಯವನ್ನು ಜೋ ಬೈಡನ್ ಗೆದ್ದಿದ್ದರು. ಮಾತ್ರವಲ್ಲ, ಬಿಲ್ ಕ್ಲಿಂಟನ್ ಬಳಿಕ (1996) ಈ ರಾಜ್ಯವನ್ನು ಗೆದ್ದ ಡೆಮಾಕ್ರಟಿಕ್ ಪಕ್ಷದ ಮೊದಲ ಅಭ್ಯರ್ಥಿ ಎನಿಸಿಕೊಂಡಿದ್ದರು.

ಕಳೆದ ಚುನಾವಣೆಯಲ್ಲಿ ಟ್ರಂಪ್ ಅವರು ಏಳು ‘ನಿರ್ಣಾಯಕ’ ರಾಜ್ಯಗಳಲ್ಲಿ ನಾರ್ತ್ ಕೆರೊಲಿನಾದಲ್ಲಿ ಮಾತ್ರ ಗೆಲುವು ಪಡೆದಿದ್ದರು. ಇತರ ಆರು ರಾಜ್ಯಗಳಲ್ಲಿ ಬೈಡನ್ ಜಯ ಸಾಧಿಸಿದ್ದರು. ಕಳೆದ ಬಾರಿ ಡೆಮಾಕ್ರಟಿಕ್ ಪಕ್ಷ ತನ್ನದಾಗಿಸಿಕೊಂಡಿದ್ದ ಎಲ್ಲ ಆರೂ ರಾಜ್ಯಗಳನ್ನು ಟ್ರಂಪ್ ಈ ಬಾರಿ ತಮ್ಮ ಹಿಡಿತಕ್ಕೆ ಪಡೆದುಕೊಂಡಿದ್ದಾರೆ.

ಟ್ರಂಪ್ ಅವರು ಅಮೆರಿಕದ 47ನೇ ಅಧ್ಯಕ್ಷರಾಗಿ ಮುಂದಿನ ವರ್ಷ ಜನವರಿ 20ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

13ರಂದು ಜೋ ಬೈಡನ್ ಟ್ರಂಪ್ ಭೇಟಿ

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ನ.13ರಂದು ಶ್ವೇತಭವನದಲ್ಲಿ ಆಯೋಜಿಸಿರುವ ಸಭೆಗೆ ಬರುವಂತೆ ತಮ್ಮ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ಅವರನ್ನು ಆಹ್ವಾನಿಸಿದ್ದಾರೆ. ಅಧಿಕಾರ ಹಸ್ತಾಂತರ ಪ್ರಕ್ರಿಯೆಯು ಈ ಭೇಟಿಯೊಂದಿಗೆ ಔಪಚಾರಿಕವಾಗಿ ಆರಂಭವಾಗಲಿದೆ.

‘ಬೈಡನ್ ಮತ್ತು ಟ್ರಂಪ್ ಅವರು ಶ್ವೇತಭವನದ ಓವಲ್ ಕಚೇರಿಯಲ್ಲಿ (ಅಧ್ಯಕ್ಷರ ಕಚೇರಿ) ನ.13ರಂದು ಬೆಳಿಗ್ಗೆ 11ಕ್ಕೆ ಭೇಟಿಯಾಗಲಿದ್ದಾರೆ’ ಎಂದು ಶ್ವೇತಭವನದ ವಕ್ತಾರೆ ಕರೀನ್ ಜಾನ್ ಪಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಲಿ ಅಧ್ಯಕ್ಷರು ಮತ್ತು ಚುನಾಯಿತ ಅಧ್ಯಕ್ಷರ ನಡುವಿನ ಸಭೆ ಔಪಚಾರಿಕ ಆಗಿದ್ದು, ಈ ಸಂಪ್ರದಾಯ ಹಲವು ದಶಕಗಳಿಂದ ನಡೆದುಕೊಂಡು ಬಂದಿದೆ. ಈ ಭೇಟಿಯ ವೇಳೆ ಹಾಲಿ ಅಧ್ಯಕ್ಷರು, ಚುನಾಯಿತ ಅಧ್ಯಕ್ಷರಿಗೆ ದೇಶದ ಪ್ರಮುಖ ಕಾರ್ಯಸೂಚಿಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ.





ಬೆಂಗಳೂರಿನಲ್ಲಿ ಭಾನುವಾರ ನಡೆದ ನೆಟ್ಟಕಲ್ಲಪ್ಪ ರಾಷ್ಟ್ರಮಟ್ಟದ ಈಜು ಕೂಟದ 3ನೇ ಆವೃತ್ತಿಯಲ್ಲಿ ಮಹಿಳೆಯರ 200ಮೀ. ಮೆಡ್ಲೆ ವಿಭಾಗದಲ್ಲಿ ಡಾಲ್ಫಿನ್ ಅಕ್ವೆಟಿಕ್ಸ್‌ನ ಧಿನಿಧಿ ದೇಸಿಂಗು (ಎಡಚಿತ್ರ). ಪುರುಷರ 50 ಮೀಟರ್ ಬ್ರೆಸ್ಟ್ ಸ್ಟ್ರೋಕ್ ನಲ್ಲಿ ಗುರಿಯತ್ತ ಮುನ್ನುಗ್ಗಿದ ಡಾಲ್ಫಿನ್ ಅಕ್ವೆಟಿಕ್ಸ್‌ನ ವಿದಿತ್ ಶಂಕರ್ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನೆಟ್ಟಕಲ್ಲಪ್ಪ ರಾಷ್ಟ್ರಮಟ್ಟದ ಈಜು ಕೂಟ: ಮಿಂಚಿದ ಆಕಾಶ್ ಮಣಿ, ವಿದಿತ್ ಶಂಕರ್, ಅನೀಶ್ ಗೌಡ

ಒಲಿಂಪಿಯನ್ ಧಿನಿಧಿ ಚಿನ್ನದ ಬೇಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ಧಿನಿಧಿ ದೇಸಿಂಗು ಮತ್ತು ಬಸವನಗುಡಿ ಈಜುಕೇಂದ್ರ ಆಕಾಶ ಮಣಿ ಅವರು ನೆಟ್ಟಕಲ್ಲಪ್ಪ ರಾಷ್ಟ್ರೀಯ ಈಜು ಕೂಟದ 3ನೇ ಆವೃತ್ತಿಯಲ್ಲಿ ಮಿಂಚಿನ ಸಂಚಲನ ಮೂಡಿಸಿದರು.

ಕೂಟದ ಎರಡನೇ ಮತ್ತು ಕೊನೆಯ ದಿನವಾದ ಭಾನುವಾರ ಈಜುಕೂಟವನ್ನು ನೋಡಲು ಸೇರಿದ್ದ ಪ್ರೇಕ್ಷಕರ ಪ್ರಮುಖ ಆಕರ್ಷಣೆ ಧಿನಿಧಿ ಅಗಿದ್ದರು. 14 ವರ್ಷದ ಧಿನಿಧಿ ಅವರು ಈಚೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಅಲ್ಲದೇ ಒಲಿಂಪಿಕ್ಸ್ ಈಜಿನಲ್ಲಿ ಭಾಗವಹಿಸಿದ ಅತಿ ಕಿರಿಯ ಕ್ರೀಡಾಪಟುವೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ (ಎನ್‌ಎಸಿ)ನಲ್ಲಿ ನಡೆದ ಸ್ಪರ್ಧೆಗಳಲ್ಲಿಯೂ ಅವರು ಚಿನ್ನದ ಮಿಂಚು ಹರಿಸಿದರು. ಬಾಲಕಿಯರ ಎರಡನೇ ಗುಂಪಿನಲ್ಲಿ 200 ಮೀಟರ್ಸ್ ಮೆಡ್ಲೆಯಲ್ಲಿ ಡಾಲ್ಫಿನ್ ಈಜುಕೇಂದ್ರದ ಧಿನಿಧಿ ಅವರು ಪ್ರಥಮರಾದರು. 100 ಮೀ ಫ್ರೀಸ್ಟೈಲ್‌ನಲ್ಲಿಯೂ ಅವರು ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಪುರುಷರ ವಿಭಾಗದಲ್ಲಿ ಆಕಾಶ್ ಮಣಿ ಅಮೋಘ ಸಾಧನೆ ಮಾಡಿದರು. ಸ್ಕಿನ್ಸ್ ವಿಭಾಗದ 50 ಮೀ ಫ್ರೀಸ್ಟೈಲ್‌ನಲ್ಲಿ ಅವರು ಮೊದಲಿಗರಾದರು. 100 ಮೀ ಫ್ರೀಸ್ಟೈಲ್‌ನಲ್ಲಿಯೂ ಅವರು ಪ್ರಥಮರಾದರು. ಡಾಲ್ಫಿನ್‌ನ ವಿದಿತ್ ಶಂಕರ್ ಅವರೂ ಎರಡು ಮತ್ತು ಅನೀಶ್ ಗೌಡ ಕೂಡ ಚಿನ್ನದ ಸಾಧನೆ ಮಾಡಿದರು.

ಎರಡು ದಿನ ನಡೆದ ಕೂಟದಲ್ಲಿ ಸುಮಾರು 300 ಈಜುಪಟುಗಳು ಸ್ಪರ್ಧಿಸಿದ್ದರು. ಒಟ್ಟು ₹10 ಲಕ್ಷ ನಗದು ಬಹುಮಾನ ನೀಡಲಾಯಿತು.

ಫಲಿತಾಂಶಗಳು: ಪುರುಷರು: ಓಪನ್; ಸ್ಕಿನ್ಸ್: 50 ಮೀ ಬ್ರೆಸ್ಟ್‌ಸ್ಟ್ರೋಕ್: ಎಸ್. ವಿದಿತ್ ಶಂಕರ್ (ಡಾಲ್ಫಿನ್ ಅಕ್ವೆಟಿಕ್ಸ್ ; ಸಮಯ: 28.46ಸೆ)–1, ಸೂರ್ಯ ಜೊಯಪ್ಪಾ –2, ಎಲ್. ಮಣಿಕಾಂತ (ಇಬ್ಬರೂ ಬಸವನಗುಡಿ ಅಕ್ವೆಟಿಕ್ ಸೆಂಟರ್)–3. ಸ್ಕಿನ್ಸ್: 50 ಮೀ ಫ್ರೀಸ್ಟೈಲ್: ಆಕಾಶ್ ಮಣಿ (ಬಿಎಸಿ; 24.25ಸೆ)–1, ಚಿಂತನ್ ಎಸ್ ಶೆಟ್ಟಿ (ಲಕ್ಷ್ಯನ್ ಅಕಾಡೆಮಿ ಆಫ್ ಸ್ಪೋರ್ಟ್ಸ್)–2, ಝೇವಿಯರ್ ಡಿ ಸೋಜಾ (ಜೈನ್ ವಿವಿ)–3.

ಸೀನಿಯರ್ಸ್: 100 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಶಂಕರ್ (ಡಾಲ್ಫಿನ್; 1ನಿ, 05.57ಸೆ)–1, ಆದಿತ್ಯ ದುಬೆ (ಜಿಎಸ್‌ಸಿ)–2, ಎಲ್. ಮಣಿಕಾಂತ (ಬಿಎಸಿ)–3. 400 ಮೀ ಫ್ರೀಸ್ಟೈಲ್: ಅನೀಶ್ ಎಸ್ ಗೌಡ (ಬಿಎಸಿ; 4ನಿ,14.24ಸೆ)–1, ಶಿವಾಂಕ ವಿಶ್ವನಾಥ್ (ಬಿಎಸಿ)–2, ನಿತಿಕ್ ನಥೆಲಾ (ಎಸ್‌ಆರ್‌ಎಂ ವಿವಿ)–3. 100 ಮೀ ಫ್ರೀಸ್ಟೈಲ್: ಆಕಾಶ್ ಮಣಿ (ಬಿಎಸಿ; 53.66ಸೆ)–1, ಝೇವಿಯರ್ ಡಿಸೋಜಾ (ಜೈನ್ ವಿವಿ)–2, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)–3.

ಬಾಲಕರು: ಗುಂಪು 1: 100 ಮೀ ಬ್ರೆಸ್ಟ್‌ಸ್ಟ್ರೋಕ್: ಶಿವರಾಜು ಆಯುಷ್ ಮಗನಹಳ್ಳಿ (ಡಾಲ್ಫಿನ್; 1ನಿ.09.01ಸೆ)–1, ಸೂರ್ಯ ಜೊಯಾಪ್ಪ (ಬಿಎಸಿ)–2, ವಿಶಾಗ್ನ್ ಸರವಣನ್ (ಬಿಎಸಿ)–3. 100 ಮೀ ಫ್ರೀಸ್ಟೈಲ್: ಸಿಂತನ್ ಎಸ್ ಶೆಟ್ಟಿ (ಲಕ್ಷ್ಯನ್ ಅಕಾಡೆಮಿ; 53.86ಸೆ)–1, ದಕ್ಷಣ್ (ಬಿಎಸಿ)–2, ಎಸ್. ದರ್ಶನ್ (ಬಿಎಸಿ)–3.

ಗುಂಪು 2: 200 ಮೀ ಮೆಡ್ಲೆ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್ ; 2ನಿ,19.91ಸೆ)–1, ಸಮರ್ಥ್ ಗೌಡ ಬಿ.ಎಸ್ (ಬಿಎಸಿ)–2, ಎಸ್. ಶರಣ್ (ಮತ್ಸ್ಯ ಇನ್‌ಕಾರ್ಪೋರೇಷನ್)–3. 100 ಮೀ ಬ್ರೆಸ್ಟ್‌ಸ್ಟ್ರೋಕ್: ಯಶ್ ಎಚ್ ಪಾಲ್ (ಬಿಎಸಿ; 1ನಿ.11.0ಸೆ)–1, ಸಿಂಗ್ ಶ್ರೀಜನ್ ದಿಯೊಲ್ (ಮತ್ಸ್ಯ)–2, ಆಗಸ್ತ್ಯ ಮಂಜುನಾಥ್ (ಏಕಲವ್ಯ ಸ್ಪೋರ್ಟ್ಸ್ ಅಕಾಡೆಮಿ)–3. 200 ಮೀ ಫ್ರೀಸ್ಟೈಲ್: ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 2ನಿ.01.29ಸೆ)–1, ಸಮರ್ಥ್ ಗೌಡ ಬಿಎಸ್ (ಬಿಎಸಿ)–2, ಎಸ್. ಶರತ್ (ಮತ್ಸ್ಯ)–3. 100 ಮೀ ಫ್ರೀಸ್ಟೈಲ್: ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 56.70ಸೆ)–1, ಎಸ್. ಶರಣ್ (ಮತ್ಸ್ಯ)–2, ರಿಷಿತ್ ರಂಗನ್ (ಬಿಎಸಿ)–3.

ಮಹಿಳೆಯರು: 50 ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಜಿಎಸ್‌ಸಿ; 34.13ಸೆ)–1, ಎ.ಕೆ. ಲಿನೇಶಾ (ಜಿಎಸ್‌ಸಿ)–2, ಎಸ್. ಲಕ್ಷ್ಯ (ಇನ್‌ಸ್ಪಾಯರ್ ಇನ್ಸಟಿಟ್ಯೂಟ್ ಆಫ್ ಸ್ಪೋರ್ಟ್ಸ್)–3.

ಸ್ಕಿನ್ಸ್: 50 ಮೀ ಫ್ರೀಸ್ಟೈಲ್: ಆರ್. ಶಾಲಿನಿ ದೀಕ್ಷಿತ್ (ಡಾಲ್ಫಿನ್ ; 27.68ಸೆ)–1, ರಿಷಿಕಾ ಯು ಮಾಂಗ್ಲೆ (ಬಿಎಸಿ; 29.27ಸೆ)–2, ಕೆ. ಧೃತಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್; 30.2ಸೆ)–3.

ಸೀನಿಯರ್ಸ್: 100 ಮೀ ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಜಿಎಸ್‌ಸಿ; 1ನಿ,18.21ಸೆ)–1, ಎಸ್. ಲಕ್ಷ್ಯ (ಇನ್‌ಸ್ಪಾಯರ್)–2, ಯಶ್ವಿ ಪ್ರದೀಪ್ ಕರಾಟ್ (ಜಿಎಸ್‌ಸಿ)–3.

400 ಮೀ ಫ್ರೀಸ್ಟೈಲ್: ಅನುಮತಿ ಚೌಗುಲೆ (ಬಿಎಸಿ; 4ನಿ,53.37ಸೆ)–1, ತಿಥಿಕ್ಷಾ ಹನುಮಂತರಾಜು (ಜಿಎಸ್‌ಸಿ)–2, ಕೆ.ಆರ್. ಧೃತಿ (ಜಿಎಸ್‌ಸಿ)–3.

100 ಮೀ ಫ್ರೀಸ್ಟೈಲ್: ಶ್ರುಂಗಿ ರಾಜೇಶ್ ಬಾಂದೇಕರ್ (ಜೈನ್ ವಿವಿ; 1ನಿ.02.71ಸೆ)–1, ನೈಶಾ ಶೆಟ್ಟಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್; 1ನಿ.03.25ಸೆ)–2, ಕೆ.ಆರ್. ಧೃತಿ (ಜಿಎಸ್‌ಸಿ; 1ನಿ.05.41ಸೆ)–3

ಬಾಲಕಿಯರು: ಗುಂಪು 1: 100 ಮೀ ಬ್ರೆಸ್ಟ್‌ಸ್ಟ್ರೋಕ್: ಎ.ಕೆ. ಲಿನೇಶಾ (ಜಿಎಸ್‌ಸಿ; 1ನಿ.18.16ಸೆ)–1,ಎ.ಎಸ್. ಸಮನ್ವಿ (ಬಿಎಸಿ)–2, ಹಿಯಾ ಮನಚಂದಾ (ಡಾಲ್ಫಿನ್)–3.

100 ಮೀ ಫ್ರೀಸ್ಟೈಲ್: ಎ.ಕೆ. ಲಿನೇಶಾ (ಜಿಎಸ್‌ಸಿ; 1ನಿ.01.70ಸೆ)–1, ವಿಹಿತಾನಯನಾ (ಬಿಎಸಿ)–2, ಆರ್. ಶಾಲಿನಿ ದೀಕ್ಷಿತ್ (ಡಾಲ್ಫಿನ್)–3.

ಗುಂಪು 2: 200 ಮೀ ಮೆಡ್ಲೆ: ಧಿನಿಧಿ ದೇಸಿಂಗು (ಡಾಲ್ಫಿನ್; 2ನಿ, 35.06ಸೆ)–1, ತಿಸ್ಯೆಯಾ ಸೋನಾರ್ (ಮತ್ಸ್ಯ)–2, ತ್ರಿಷಾ ಸಿಂಧು ಎಸ್ (ಜಿಎಸ್‌ಸಿ)–3

100 ಮೀ ಬ್ರೆಸ್ಟ್‌ಸ್ಟ್ರೋಕ್: ತಿಸ್ಯೆಯಾ ಸೋನಾರ್ (ಮತ್ಸ್ಯ; 1ನಿ, 23.19ಸೆ)–1, ಮಾನ್ಯಾ ಆರ್. ವಾಧ್ವಾ (ಪಿಎಂಎಸ್‌ಸಿ)–2, ಪ್ರತೀಕ್ಷಾ ಎನ್ ಗೌಡ (ಡಿಕೆವಿ ಅಕ್ವೆಟಿಕ್ ಸೆಂಟರ್)–3.

200 ಮೀ ಫ್ರೀಸ್ಟೈಲ್: ತಿಸ್ಯೆಯಾ ಸೋನಾರ್ (ಮತ್ಸ್ಯ; 2ನಿ, 18.36ಸೆ)–1, ತ್ರಿಷಾ ಸಿಂಧು ಎಸ್ (ಜಿಎಸ್‌ಸಿ)–2, ಶಾಮನಿ ಎಚ್ ಗೌಡ (ಜಿಎಸ್‌ಸಿ)–3

100 ಮೀ ಫ್ರೀಸ್ಟೈಲ್: ಧಿನಿಧಿ ದೇಸಿಂಗು (ಡಾಲ್ಫಿನ್; 59.35ಸೆ)–1, ತಿಸ್ಯೆಯಾ ಸೋನಾರ್ (ಮತ್ಸ್ಯ)–2, ಚರಿತಾ ಫಣೀಂದ್ರನಾಥ್ (ಎಲೈಟ್ ಅಕ್ವೆಟಿಕ್ ಸೆಂಟರ್)–3.

ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಗೆಲುವಿನ ಸನಿಹ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಬಲಂಗೀರ್‌ನಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಒಡಿಶಾ ಎದುರಿನ ಪಂದ್ಯದಲ್ಲಿ ಗೆಲುವಿನ ಹೊಸ್ತಿಲಿಗೆ ಬಂದು ನಿಂತಿದೆ.

ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 389 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಒಡಿಶಾ ತಂಡವು 62.3 ಓವರ್‌ಗಳಲ್ಲಿ 185 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಕರ್ನಾಟಕದ ಎಲ್. ಮನ್ವಂತ್ ಕುಮಾರ್ (46ಕ್ಕೆ6) ಒಡಿಶಾ ತಂಡದ ವಿಕೆಟ್‌ಗಳ ಪತನಕ್ಕೆ ಕಾರಣರಾದರು. ಇದರೊಂದಿಗೆ ಕರ್ನಾಟಕವು ಒಡಿಶಾ ಮೇಲೆ ಫಾಲೋ ಆನ್ ಹೇರಿತು.

ಸಾವನ್ ಪೆಹಾರಿಯಾ (ಔಟಾಗದೆ 91) ಮತ್ತು ಸುಜಲ್ ಸಿಂಗ್ (ಔಟಾಗದೆ 72) ಅವರ ಬ್ಯಾಟಿಂಗ್ ಬಲದಿಂದ ಒಡಿಶಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 274 ರನ್ ಗಳಿಸಿದೆ. 70 ರನ್‌ಗಳ ಮುನ್ನಡೆ ಪಡೆದಿದೆ. ಇದರಿಂದಾಗಿ ಕರ್ನಾಟಕ ತಂಡವು ಬೆಳಗಿನ ಅವಧಿಯಲ್ಲಿ ಒಡಿಶಾದ ಇನ್ನುಳಿದ ವಿಕೆಟ್‌ಗಳನ್ನು ಉರುಳಿಸಿ ಲಭಿಸುವ ಸಾಧಾರಣ ಮೊತ್ತದ ಗುರಿ ಮುಟ್ಟಿ ಜಯಿಸುವ ನಿರೀಕ್ಷೆಯಲ್ಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ 389. ಒಡಿಶಾ 62.3 ಓವರ್‌ಗಳಲ್ಲಿ 185 (ಸಾಯಿದೀಪ್ ಮಹಾಪಾತ್ರ 58, ಮೊನಿಷ್ ರೆಡ್ಡಿ ವೈಆರ್. 48ಕ್ಕೆ4, ಮನ್ವಂತ್ ಕುಮಾರ್ 46ಕ್ಕೆ6) ಒಡಿಶಾ (ಫಾಲೋ ಆನ್); 75 ಓವರ್‌ಗಳಲ್ಲಿ 6ಕ್ಕೆ274 (ಓಂ 45, ಸಾವನ್ ಪೆಹಾರಿಯಾ ಔಟಾಗದೇ 91, ಸಂಬಿತ್ ಬರಾಲಾ 36, ಸುಜಲ್ ಸಿಂಗ್ ಔಟಾಗದೇ 72, ಮನ್ವಂತ್ ಕುಮಾರ್ 41ಕ್ಕೆ2, ಪಾರಸ್ ಗುರುಭಕ್ಷ ಆರ್ಯ 65ಕ್ಕೆ2)

ಯಶವರ್ಧನ್ ಅಜೇಯ 428 ರನ್

ಯಶವರ್ಧನ್ ದಲಾಲ್ (ಔಟಾಗದೇ 428; 465ಎ, 4x46, 6x12) ಮತ್ತು ಅರ್ಷ್ ರಂಗ (151;311ಎ) ಅವರ ಬ್ಯಾಟಿಂಗ್ ಬಲದಿಂದ ಹರಿಯಾಣ ತಂಡ, ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ವಿರುದ್ಧ ಎಂಟು ವಿಕೆಟ್‌ಗೆ 742 ರನ್ ಪೇರಿಸಿದೆ.

ಇದಕ್ಕೆ ಉತ್ತರವಾಗಿ ಮುಂಬೈ ತಂಡ 53.1 ಓವರ್‌ಗಳಲ್ಲಿ 162 ರನ್‌ಗೆ ಕುಸಿಯಿತು. ಹರಿಯಾಣ ಫಾಲೋಆನ್ ಹೇರಿದ ಪರಿಣಾಮ ಎರಡನೇ ಇನಿಂಗ್ಸ್‌ನಲ್ಲಿ ಮುಂಬೈ ತಂಡವು 25 ಓವರ್‌ಗಳಲ್ಲಿ 3 ವಿಕೆಟ್‌ಗೆ 38 ರನ್ ಗಳಿಸಿ ಇನಿಂಗ್ಸ್ ಸೋಲಿನ ಭೀತಿಯಲ್ಲಿದೆ.

ಕರ್ನಾಟಕ ತಂಡದಲ್ಲಿ ಅನ್ವಯ್ ದ್ರಾವಿಡ್

ಬೆಂಗಳೂರು: ವಿಕೆಟ್‌ಕೀಪರ್ ಅನ್ವಯ್ ದ್ರಾವಿಡ್ ಅವರನ್ನು ವಿಜಯ್ ಮರ್ಚಂಟ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕದ ಸಂಭವನೀಯರ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಅನ್ವಯ್ ಅವರು ಭಾರತ ತಂಡದ ಮಾಜಿ ನಾಯಕ ಮತ್ತು ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರ ಮಗ.

ಆಯ್ಕೆ ಸಮಿತಿಯು ಶನಿವಾರ ಪ್ರಕಟಿಸಿರುವ ಸಂಭವನೀಯರ 35 ಆಟಗಾರರ ಪಟ್ಟಿಯಲ್ಲಿ ಅನ್ವಯ್ ಸೇರಿದಂತೆ ಮೂವರು ವಿಕೆಟ್‌ಕೀಪರ್‌ಗಳಿದ್ದಾರೆ. ಆದಿತ್ಯ ಝಾ ಮತ್ತು ಜಾಯ್ ಜೇಮ್ಸ್ ಅವರೇ ಆ ವಿಕೆಟ್‌ಕೀಪರ್‌ಗಳು.

ಅನ್ವಯ್ ಅವರು 14 ವರ್ಷದೊಳಗಿನವರ ರಾಜ್ಯ ತಂಡದ ನಾಯಕತ್ವ ವಹಿಸಿದ್ದಾರೆ. ಹೋದ ವರ್ಷ ಅಂತರ ವಲಯ ಟೂರ್ನಿಯಲ್ಲಿ ಬೆಂಗಳೂರು ವಲಯ ಪ್ರತಿನಿಧಿಸಿದ್ದ ಅನ್ವಯ್ ಅಜೇಯ ದ್ವಿಶತಕ ಗಳಿಸಿದ್ದರು.

ಅನ್ವಯ್ ಅವರ ಅಣ್ಣ ಸಮಿತ್ ದ್ರಾವಿಡ್ ಅವರು ಕೂಚ್ ಬಿಹಾರ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ವಿಜಯ್ ಮರ್ಚ್ ಟ್ರೋಫಿಯಲ್ಲಿ ಆಡಲಿರುವ ರಾಜ್ಯ ತಂಡಕ್ಕೆ ಮಾಜಿ ಆಟಗಾರರಾದ ಕುನಾಲ್ ಕಪೂರ್ ಮತ್ತು ಆದಿತ್ಯ ಬಿ ಸಾಗರ್ ಅವರು ಕ್ರಮವಾಗಿ ಮುಖ್ಯ ಕೋಚ್ ಮತ್ತು ಬೌಲಿಂಗ್ ಕೋಚ್ ಆಗಿದ್ದಾರೆ.

ಎಸ್‌ಜೆಎಫ್ ಸಮನ್ವಯಕಾರನ ಬಂಧನ

ಕೆನಡಾ: ದೇಗುಲ ಬಳಿ ಹಿಂಸಾಚಾರ • ಬ್ರಾಂಪ್ಟನ್ ಪೊಲೀಸರ ಕಾರ್ಯಾಚರಣೆ

ಒಟ್ಟಾವ (ಪಿಟಿಐ): ಕೆನಡಾದ ಬ್ರಾಂಪ್ಟನ್‌ನಲ್ಲಿ ಹಿಂದೂ ಸಭಾ ಮಂದಿರದಲ್ಲಿ ನಡೆದಿದ್ದ ಹಲ್ಲೆ ಹಾಗೂ ಹಿಂಸಾತ್ಮಕ ಪ್ರತಿಭಟನೆ ಪ್ರಕರಣಕ್ಕೆ ಸಂಬಂಧಿಸಿ ಸಿಖ್ ಫಾರ್ ಜಸ್ಟಿಸ್ (ಎಸ್‌ಜೆಎಫ್) ಸಂಘಟನೆಯ ಕೆನಡಾ ಸಮನ್ವಯಕಾರ ಇಂದರ್‌ಜಿತ್ ಗೋಸಾಲ್ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬ್ರಾಂಪ್ಟನ್ ನಿವಾಸಿಯಾದ 35 ವರ್ಷದ ಗೋಸಲ್‌ನನ್ನು ನವೆಂಬರ್ 8ರಂದು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ವಿಭಾಗೀಯ ಅಪರಾಧ ತನಿಖಾ ದಳ ಹಾಗೂ ಎಸ್‌ಐಟಿ ಜಂಟಿ ಕಾರ್ಯಾಚರಣೆ ನಡೆಸಿ ಗೋಸಾಲ್‌ನನ್ನು ಬಂಧಿಸಿವೆ ಎಂಬ ಪೊಲೀಸರ ಹೇಳಿಕೆ ಉಲ್ಲೇಖಿಸಿ ಟೊರಾಂಟೊ ಸ್ಟಾರ್ ವರದಿ ಮಾಡಿದೆ.

ಅಮೆರಿಕ ಮೂಲದ ಸಿಖ್ ಫಾರ್ ಜಸ್ಟಿಸ್ ಸಂಘಟನೆಯನ್ನು ಭಾರತದಲ್ಲಿ ನಿಷೇಧಿಸಲಾಗಿದೆ.

ನವೆಂಬರ್ 3ರಂದು ಬ್ರಾಂಪ್ಟನ್‌ನ ಹಿಂದೂ ಸಭಾ ಮಂದಿರ ಆವರಣದಲ್ಲಿ ಖಾಲಿಸ್ತಾನ ಪರ ಪ್ರತಿಭಟನೆ ನಡೆದಿತ್ತು. ಈ ವೇಳೆ, ಪ್ರತಿಭಟನಕಾರರು ಹಾಗೂ ದೇವಸ್ಥಾನದಲ್ಲಿರುವವರ ಮಧ್ಯೆ ಸಂಘರ್ಷ ನಡೆದಿತ್ತಲ್ಲದೇ, ಬಡಿಗೆಗಳಿಂದ ಹೊಡೆದಾಡಿದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

ಇದರ ಬೆನ್ನಲ್ಲೇ, ಪೀಲ್ ಪ್ರಾದೇಶಿಕ ಪೊಲೀಸರು ತನಿಖೆ ಆರಂಭಿಸಿದ್ದರು.



ಹಿಂದೂ– ಸಿಖ್ ಸಂಘಟನೆಗಳು ದೆಹಲಿಯಲ್ಲಿರುವ 'ಕೆನಡಿಯನ್ ಹೈ ಕಮಿಷನ್' ಕಚೇರಿ ಬಳಿ ಭಾನುವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ವೇಳೆ ಪ್ರತಿಭಟನಕಾರರು ಬ್ಯಾರಿಕೇಡ್‌ಗಳ ಮೇಲೆ ಹತ್ತಿ ತ್ರಿವರ್ಣ ಧ್ವಜ ಹಾರಿಸಿದರು ಪಿಟಿಐ ಚಿತ್ರ

'ಕೆನಡಿಯನ್ ಹೈ ಕಮಿಷನ್' ಕಚೇರಿ ಬಳಿ ಪ್ರತಿಭಟನೆ

ನವದೆಹಲಿ (ಪಿಟಿಐ): ಕೆನಡಾದಲ್ಲಿ ಹಿಂದೂ ದೇವಾಲಯಗಳ ಮೇಲಿನ ದಾಳಿಯನ್ನು ಖಂಡಿಸಿ, ಹಿಂದೂ– ಸಿಖ್ ಸಂಘಟನೆಗಳ ಕಾರ್ಯಕರ್ತರು ಕೆನಡಿಯನ್ ಹೈ ಕಮಿಷನ್ ಕಚೇರಿ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರು ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದು, ಬ್ಯಾರಿಕೇಡ್‌ಗಳ ಮೇಲೆ ಹತ್ತಿದರು.

ಪ್ರತಿಭಟನೆಯಿಂದಾಗಿ, ಕೆನಡಿಯನ್ ಹೈ ಕಮಿಷನ್ ಕಚೇರಿಯ ಬಳಿ ಭದ್ರತೆ ಹೆಚ್ಚಿಸಲಾಗಿತ್ತು. 'ಹಿಂದೂ– ಸಿಖ್ ಜಾಗತಿಕ ವೇದಿಕೆ'ಯ ಸದಸ್ಯರು ಇಲ್ಲಿನ ಚಾಣಕ್ಯಪುರಿಯಲ್ಲಿರುವ 'ಕೆನಡಿಯನ್ ಹೈ ಕಮಿಷನ್' ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಕಾನೂನು ಸುವ್ಯವಸ್ಥೆ ಕಾಪಾಡಲು ಸ್ಥಳದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಆದರೂ, ಕೆಲವು ಕಾರ್ಯಕರ್ತರು ಬ್ಯಾರಿಕೇಡ್‌ಗಳ ಮೇಲೆ ಹತ್ತಿ ಒಳನುಗ್ಗಲು ಪ್ರಯತ್ನಿಸಿದರು.

ಉಗ್ರರೊಂದಿಗೆ ಗುಂಡಿನ ಚಕಮಕಿ ಅಧಿಕಾರಿ ಹುತಾತ್ಮ

ಜಮ್ಮು: ಜಮ್ಮು ಮತ್ತು ಕಾಶ್ಮೀರದ ಕಿಶ್ತ್‌ವಾಡಾ ಜಿಲ್ಲೆಯ ದಡ್ಡ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಜೂನಿಯರ್ ಕಮಿಷನ್ಡ್ ಆಫೀಸರ್ (ಜೆಸಿಒ) ನಾಯಬ್ ಸುಬೇದಾರ್ ರಾಕೇಶ್ ಕುಮಾರ್ ಅವರು ಭಾನುವಾರ ಹುತಾತ್ಮರಾಗಿದ್ದಾರೆ.

ಗ್ರಾಮ ರಕ್ಷಣಾ ಪಡೆಯ (ವಿಡಿಜಿ) ಇಬ್ಬರು ಸಿಬ್ಬಂದಿಯನ್ನು ಉಗ್ರರು ಇತ್ತೀಚೆಗೆ ಅಪಹರಿಸಿ, ನಂತರ ಹತ್ಯೆ ಮಾಡಿದ್ದರು. ಈ ಘಟನೆ ಬಳಿಕ ಉಗ್ರರಿಗಾಗಿ ಸೇನೆಯು ಶೋಧ ಕಾರ್ಯ ಕೈಗೊಂಡಿತ್ತು. ಈ ಕಾರ್ಯಾಚರಣೆಯ ಭಾಗವಾಗಿಯೇ ಭಾನುವಾರ ರಾಕೇಶ್ ಮತ್ತು ತಂಡವು ಅರಣ್ಯ ಪ್ರದೇಶಕ್ಕೆ ತೆರಳಿತ್ತು. ಗುಂಡಿನ ಚಕಮಕಿಯಲ್ಲಿ ಮೂವರು ಸೈನಿಕರಿಗೆ ಗಂಭೀರ ಗಾಯಗಳಾಗಿವೆ.

ಬೆಳಿಗ್ಗೆ 11ರ ಸುಮಾರಿಗೆ ಗುಂಡಿನ ಚಕಮಕಿ ಆರಂಭಗೊಂಡಿತ್ತು. ಪೊಲೀಸರು ಹಾಗೂ ಸೇನೆಯು ಜಂಟಿ ಕಾರ್ಯಾಚರಣೆ ಕೈಗೊಂಡಿತ್ತು. ಗ್ರಾಮ ರಕ್ಷಣಾ ಪಡೆಯ ಇಬ್ಬರು ಸಿಬ್ಬಂದಿ ಹುತಾತ್ಮರಾದ ಕೆಲವೇ ಕಿ.ಮೀ ದೂರದಲ್ಲಿಯೇ ಭಾನುವಾರವೂ ಗುಂಡಿನ ಚಕಮಕಿ ನಡೆದಿದೆ.

ಕಾರ್ಯಾಚರಣೆ ಕುರಿತು ಸೇನೆಯ ವೈಟ್ ಕ್ನೈಟ್ ಕಾರ್ಪ್ಸ್ ತನ್ನ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದೆ.

ಸ್ಟಾರ್ಮರ್ ಆತಿಥ್ಯದ ದೀಪಾವಳಿಯಲ್ಲಿ ಮದ್ಯ, ಮಾಂಸಕ್ಕೆ ಹಿಂದೂಗಳ ಆಕ್ಷೇಪ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಲಂಡನ್ನಿನಲ್ಲಿ ದೀಪಾವಳಿ ಹಬ್ಬಕ್ಕೆ ಸಂಬಂಧಿಸಿದ ಕಾರ್ಯಕ್ರಮದ ಆತಿಥ್ಯ ಮೊದಲು ಸೂಕ್ತ ಸಮಾಲೋಚನೆ ನಡೆಸಿರಲಿಲ್ಲ ಎಂದು ಅಲ್ಲಿನ ಹಿಂದೂಗಳ ಪೈಕಿ ಕೆಲವರು ಸಾಮಾಜಿಕ ಜಾಲತಾಣಗಳ ಮೂಲಕ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಆತಿಥ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಮಾಂಸಾಹಾರ ಮತ್ತು ಮದ್ಯವನ್ನು ನೀಡಲಾಗಿತ್ತು ಎನ್ನಲಾಗಿದೆ.

ಹಿಂದೂಗಳ ಸಂಘಟನೆಯಾದ 'ಇನ್‌ಸೈಟ್ ಯುಕೆ', ಹಿಂದೂ ಹಬ್ಬದ ಸಾಂಸ್ಕೃತಿಕ ಆಯಾಮವನ್ನು ಅರ್ಥ ಮಾಡಿಕೊಳ್ಳದೆ ಇರುವುದನ್ನು ಪ್ರಶ್ನಿಸಿದೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೊದಲು ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಮಾಲೋಚನೆ ನಡೆಸುವ ಅಗತ್ಯವಿದೆ ಎಂದು ಇತರ ಕೆಲವರು ಹೇಳಿದ್ದಾರೆ.

ಮುಖ್ಯಾಂಶಗಳು

- ಸಮಾಲೋಚನೆ ಇಲ್ಲದೆ ದೀಪಾವಳಿ ಕಾರ್ಯಕ್ರಮ: ಹಿಂದೂಗಳ ಆಕ್ಷೇಪ
- ಸಾಂಸ್ಕೃತಿಕ ಆಯಾಮ ಅರ್ಥ ಮಾಡಿಕೊಂಡಿಲ್ಲ; ಆರೋಪ

'ದೀಪಾವಳಿ ಎಂಬುದು ಸಂಭ್ರಮಿಸುವ ಸಂದರ್ಭ ಮಾತ್ರವೇ ಅಲ್ಲ. ಅದು ಬಹಳ ಆಳವಾದ ಧಾರ್ಮಿಕ ಅರ್ಥವನ್ನೂ ಹೊಂದಿದೆ. ಪವಿತ್ರವಾದ ದೀಪಾವಳಿ ಹಬ್ಬವು ಪರಿಶುದ್ಧಿ ಮತ್ತು ಭಕ್ತಿಗೆ ಒತ್ತು ನೀಡುತ್ತದೆ. ಹೀಗಾಗಿ, ಸಾಂಪ್ರದಾಯಿಕವಾಗಿ ಅಲ್ಲಿ ಸಸ್ಯಾಹಾರ ಇರಬೇಕು, ಮದ್ಯ ಇರಲೇಬಾರದು' ಎಂದು 'ಇನ್‌ಸೈಟ್ ಯುಕೆ' ಹೇಳಿದೆ.

'ಪ್ರಧಾನಿಯ ಆತಿಥ್ಯದಲ್ಲಿ ನಡೆದ ದೀಪಾವಳಿ ಕಾರ್ಯಕ್ರಮದಲ್ಲಿ ನೀಡಿದ ಆಹಾರವು, ದೀಪಾವಳಿ ಜೊತೆ ಬೆಸೆದುಕೊಂಡಿರುವ ಧಾರ್ಮಿಕ ಸಂಪ್ರದಾಯದ ಬಗ್ಗೆ ಅರಿವಿನ ಕೊರತೆಯನ್ನು ಅಥವಾ ಗೌರವದ ಕೊರತೆಯನ್ನು ತೋರಿಸುತ್ತದೆ. ಸಾಂಸ್ಕೃತಿಕ ಸೂಕ್ಷ್ಮಗ್ರಾಹಿತ್ವದ ದೃಷ್ಟಿಯಿಂದ, ಒಳಗೊಳ್ಳುವಿಕೆಯ ದೃಷ್ಟಿಯಿಂದ ಹಿಂದೂ ಸಮುದಾಯದ ಸಂಘಟನೆಗಳು ಮತ್ತು ಧಾರ್ಮಿಕ ನಾಯಕರ ಜೊತೆ ಸಮಾಲೋಚನೆ ನಡೆಸಲಾಗಿತ್ತೇ ಎಂಬ ಪ್ರಶ್ನೆಯನ್ನು ಎತ್ತುತ್ತದೆ' ಎಂದು ಅದು ಹೇಳಿದೆ.

ಅಕ್ಟೋಬರ್ 29ರಂದು ನಡೆದ ಈ ಕಾರ್ಯಕ್ರಮದಲ್ಲಿ ನೀಡಲಾದ ಆಹಾರದ ಬಗ್ಗೆ ಪ್ರಧಾನಿ ಕಾರ್ಯಾಲಯದಿಂದ ಪ್ರತಿಕ್ರಿಯೆ ಬಂದಿಲ್ಲ. ಆದರೆ ಈ ಕಾರ್ಯಕ್ರಮವು ವಿಭಿನ್ನ ಸಮುದಾಯಗಳನ್ನು ಒಳಗೊಂಡಿತ್ತು, ಸಿಖ್ಖರು ಆಚರಿಸುವ 'ಬಂದಿ ಛೋಡ್ ದಿವಸ್' ಕೂಡ ಇದರ ಭಾಗವಾಗಿತ್ತು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಉಗ್ರ ದಲ್ಲಾ ಕೆನಡಾದಲ್ಲಿ ಬಂಧನ?

ಒಂದನೇ ಪುಟದಿಂದ...

ದಲ್ಲಾ ವಿರುದ್ಧದ ಆರೋಪಗಳು: ಗಡಿ ಮೂಲಕ ನಡೆಯುತ್ತಿದ್ದ ಮಾದಕವಸ್ತುಗಳು ಹಾಗೂ ಶಸ್ತ್ರಾಸ್ತ್ರ ಕಳ್ಳಸಾಗಣೆಯಲ್ಲಿ ಅರ್ಶ್ ದಲ್ಲಾ ಪಾತ್ರ ಇದೆ ಎಂದು ಕೇಂದ್ರ ಗೃಹ ಸಚಿವಾಲಯವು ಇತ್ತೀಚೆಗೆ ಹೊರಡಿಸಿದ್ದ ಅಧಿಸೂಚನೆಯಲ್ಲಿ ಉಲ್ಲೇಖಿಸಿದೆ.

ನಿರ್ದಿಷ್ಟ ವ್ಯಕ್ತಿಗಳ ಹತ್ಯೆ, ಉಗ್ರರಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಸುಲಿಗೆ, ಕೋಮು ಸೌಹಾರ್ದ ಕದಡಲು ಯತ್ನ ಸೇರಿದಂತೆ ಈತನ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದು, ಎನ್‌ಐಎ ತನಿಖೆ ನಡೆಸುತ್ತಿದೆ.

ದಲ್ಲಾ ಗ್ಯಾಂಗ್‌ನ ಇಬ್ಬರು ಶೂಟರ್‌ಗಳ ಬಂಧನ

ಒಂದನೇ ಪುಟದಿಂದ...

'ದುಷ್ಕೃತ್ಯಗಳಲ್ಲಿ ನೆರವು ನೀಡಿದ ಆರೋಪದಡಿ, ಬಂಧಿತರ ಸಹಚರನೂ ಆದ ನವಜೋತ್ ಸಿಂಗ್ ಸಹೋದರ ಬಲ್ವೀರ್ ಸಿಂಗ್ ಅಲಿಯಾಸ್ ಕಾಲು ಎಂಬಾತನನ್ನು ಬಂಧಿಸಲಾಗಿದೆ' ಫರೀದ್‌ಕೋಟ್‌ನ ಎಸ್‌ಪಿ ಪ್ರಗ್ಯಾ ಜೈನ್ ತಿಳಿಸಿದ್ದಾರೆ.

'ಬಂಧಿತರಿಂದ ಎರಡು ಅತ್ಯಾಧುನಿಕ ಪಿಸ್ತೂಲ್‌ಗಳು ಹಾಗೂ ಏಳು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

'ಸಿಖ್ ಹೋರಾಟಗಾರ ಗುರ್‌ಪ್ರೀತ್ ಸಿಂಗ್ ಹರಿ ನೌ ಅವರು 'ಹರಿ ನೌ ಟಾಕ್ಸ್' ಎಂಬ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದರು. ಇವರು ಅಕ್ಟೋಬರ್ 9ರಂದು ತಮ್ಮ ಗ್ರಾಮದಿಂದ ಬೈಕ್‌ನಲ್ಲಿ ವಾಪಸಾಗುತ್ತಿದ್ದ ವೇಳೆ, ಫರೀದ್‌ಕೋಟ್‌ನಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಅರ್ಶ್ ದಲ್ಲಾ, ಹರಿ ನೌ ಅವರ ಹತ್ಯೆಯ ಸಂಚು ರೂಪಿಸಿದ್ದ. ಹರಿ ನೌ ಅವರನ್ನು ಹತ್ಯೆಗೈಯುವ ಹೊಣೆಯನ್ನು ನವಜೋತ್‌ಸಿಂಗ್‌ಗೆ ವಹಿಸಿದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಸ್‌ಪಿ ಜೈನ್ ತಿಳಿಸಿದ್ದಾರೆ.

'ಹರಿ ನೌ ಅವರ ಹತ್ಯೆ ನಂತರ, ಆರೋಪಿಗಳು ಅಡಗಿಕೊಳ್ಳಲು ಅರ್ಶ್ ದಲ್ಲಾ ವ್ಯವಸ್ಥೆ ಮಾಡಿದ್ದ ಎಂಬುದು ಸಹ ತನಿಖೆಯಿಂದ ಗೊತ್ತಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿದ್ದೀಕಿ ಹತ್ಯೆ: ಶೂಟರ್ ಸೇರಿ ನಾಲ್ವರ ಬಂಧನ

ಮುಂಬೈ(ಪಿಟಿಐ): ಮಾಜಿ ಸಚಿವ ಹಾಗೂ ಎನ್‌ಸಿಪಿ (ಅಜಿತ್ ಪವಾರ್ ಬಣ) ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮುಂಬೈ ಪೊಲೀಸರು ಶೂಟರ್ ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳನ್ನು ಉತ್ತರ ಪ್ರದೇಶದಲ್ಲಿ ಭಾನುವಾರ ಬಂಧಿಸಿದ್ದಾರೆ.

ಅನುರಾಗ್ ಕಶ್ಯಪ್, ಜ್ಞಾನಪ್ರಕಾಶ ತ್ರಿಪಾಠಿ, ಆಕಾಶ್ ಶ್ರೀವಾಸ್ತವ ಹಾಗೂ ಅಖಿಲೇಂದ್ರ ಪ್ರತಾಪ್ ಸಿಂಗ್ ಬಂಧಿತ ಇತರರು.

ಉತ್ತರ ಪ್ರದೇಶದ ಎಸ್‌ಟಿಎಫ್ ಹಾಗೂ ಮುಂಬೈ ಕ್ರೈಂ ಬ್ರ್ಯಾಂಚ್ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ, ಬಹರಾಯಿಚ್ ಜಿಲ್ಲೆ ನಾನ್ಪಾರಾದಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಉತ್ತರ ಪ್ರದೇಶ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ/ಎಸ್‌ಟಿಎಫ್) ಅಮಿತಾಭ್ ಯಶ್ ಲಖನೌದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬಂಧಿತ ನಾಲ್ವರು ಶಿವಕುಮಾರ್‌ಗೆ ಆಶ್ರಯ ನೀಡಿದ್ದರು. ನೇಪಾಳಕ್ಕೆ ಪರಾರಿಯಾಗಲು ಯತ್ನಿಸಿದ್ದ ಆತನಿಗೆ ನೆರವು ನೀಡಿದ್ದರು ಎಂದು ಎಡಿಜಿಪಿ ಯಶ್ ತಿಳಿಸಿದ್ದಾರೆ.

51ನೆಯ ಮುಖ್ಯ ನ್ಯಾಯಮೂರ್ತಿಯಾಗಿ ಪದಗ್ರಹಣ

ಸಿಜೆಐ ಆಗಿ ಖನ್ನಾ ಪ್ರಮಾಣ ಇಂದು

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಸುಪ್ರೀಂ ಕೋರ್ಟ್‌ನ 51ನೆಯ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಚುನಾವಣಾ ಬಾಂಡ್ ಯೋಜನೆ ರದ್ದುಪಡಿಸಿದ ತೀರ್ಪು, ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕ್ರಮವನ್ನು ಎತ್ತಿಹಿಡಿದ ತೀರ್ಪು ಸೇರಿದಂತೆ ಸುಪ್ರೀಂ ಕೋರ್ಟ್ ನೀಡಿದ ಹಲವು ಮಹತ್ವದ ತೀರ್ಪುಗಳಲ್ಲಿ ಖನ್ನಾ ಅವರ ಪಾಲು ಕೂಡ ಇದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಖನ್ನಾ ಅವರಿಗೆ ರಾಷ್ಟ್ರಪತಿ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯುವ ಸಮಾರಂಭದಲ್ಲಿ ಪ್ರಮಾಣ ವಚನ ಬೋಧಿಸಲಿದ್ದಾರೆ. ಡಿ.ವೈ. ಚಂದ್ರಚೂಡ್ ಅವರು ಸಿಜೆಐ ಹುದ್ದೆಯಿಂದ ಭಾನುವಾರ ನಿವೃತ್ತರಾಗಿದ್ದಾರೆ. ಖನ್ನಾ ಅವರು 2025ರ ಮೇ 13ರವರೆಗೆ ಸಿಜೆಐ ಆಗಿರಲಿದ್ದಾರೆ.



ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಡಿ.ವೈ. ಚಂದ್ರಚೂಡ್ ಪಿಟಿಐ ಚಿತ್ರ

ಖನ್ನಾ ಅವರು 2019ರಿಂದ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಖನ್ನಾ ಅವರು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ದೇವರಾಜ್ ಖನ್ನಾ ಅವರ ಮಗ. ಅಷ್ಟೇ ಅಲ್ಲ, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಎಚ್.ಆರ್. ಖನ್ನಾ ಅವರ ಸಂಬಂಧಿ ಕೂಡ ಹೌದು. ಸಂಜೀವ್ ಖನ್ನಾ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆಗಿ ನೇಮಕ ಆಗುವ ಮೊದಲು ವಕೀಲರಾಗಿದ್ದರು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಕಟವಾದ, ಕುಖ್ಯಾತ ಎಡಿಎಂ ಜಬಲ್ಪುರ ಪ್ರಕರಣದಲ್ಲಿ ಭಿನ್ನಮತದ ತೀರ್ಪು ಬರೆದ ನ್ಯಾಯಮೂರ್ತಿ ಎಚ್. ಆರ್. ಖನ್ನಾ ಅವರು, 1976ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು. ಇದು ಆಗ ಭಾರಿ ಸುದ್ದಿಯಾಗಿತ್ತು.

ಎಡಿಎಂ ಜಬಲ್ಪುರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಬಹುಮತದ ತೀರ್ಪು, ದೇಶದ ನ್ಯಾಯಾಂಗದ ಇತಿಹಾಸದಲ್ಲಿ 'ಕಪ್ಪು ಚುಕ್ಕೆ' ಎಂದೇ ಪರಿಗಣಿತವಾಗಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಬಹುದು ಎಂಬುದನ್ನು ಕೋರ್ಟ್ ಬಹುಮತದ ತೀರ್ಪಿನಲ್ಲಿ ಎತ್ತಿಹಿಡಿದಿತ್ತು. ಆದರೆ ನ್ಯಾಯಮೂರ್ತಿ ಎಚ್.ಆರ್. ಖನ್ನಾ, ಈ ಪ್ರಕರಣದಲ್ಲಿ ಭಿನ್ನಮತದ ತೀರ್ಪು ನೀಡಿದ್ದರು.

ದೇಶದಲ್ಲಿ ಚುನಾವಣೆಗಳಲ್ಲಿ ಬಳಕೆಯಾಗುವ ವಿದ್ಯುನ್ಮಾನ ಮತ ಯಂತ್ರಗಳಲ್ಲಿನ ಮತಗಳ ದಾಖಲೆಯನ್ನು ತಿರುಚಲಾಗುತ್ತದೆ ಎಂಬ ಅನುಮಾನಕ್ಕೆ ಆಧಾರವಿಲ್ಲ, ಮತ್ತೆ ಮತಪತ್ರಗಳ ಬಳಕೆ ಜಾರಿಗೆ ಬರಬೇಕು ಎಂಬ ಕೋರಿಕೆಯನ್ನು ಒಪ್ಪಲಾಗದು ಎಂಬ ತೀರ್ಪು ನೀಡಿದ ಪೀಠದ ನೇತೃತ್ವವನ್ನು ನ್ಯಾಯಮೂರ್ತಿ ಸಂಜೀವ್ ಖನ್ನಾ ವಹಿಸಿದ್ದರು.

ವರ್ಷಾಂತ್ಯದ ಸಡಗರ ಸತ್ಕಾರಗಳು

2024ನೇ ವರ್ಷ ಅಂತ್ಯವಾಗಲು ದಿನಗಣನೆ ಶುರುವಾಗಿದೆ. ಬಹಳ ಮಂದಿ ಪಾರ್ಟಿ ಆಚರಣೆಯ ಮೂಡ್‌ಗೆ ತೆರಳಲು ಯೋಜನೆ ರೂಪಿಸುತ್ತಿದ್ದಾರೆ. ವರ್ಷಾಂತ್ಯದ ಆಚರಣೆಯ ಸಮಯ ಹತ್ತಿರ ಬರುತ್ತಿರುವುದು ನಿಜ. ಪಾರ್ಟಿ ಆಚರಿಸಲು ಅತಿಥಿಗಳನ್ನು ಮನೆಗೆ ಆಹ್ವಾನಿಸುವುದು ಸಹಜ. ಆದರೆ, ಮನೆಗೆ ಬಂದ ಅತಿಥಿಗಳು ದೀರ್ಘ-ಕಾಲದವರೆಗೆ ನೆನಪಿನಲ್ಲಿಟ್ಟುಕೊಳ್ಳುವ ಭಕ್ಷ್ಯಗಳನ್ನು ಮಾಡುವುದಕ್ಕಿಂತ ಉತ್ತಮ ಮಾರ್ಗ ಯಾವುದು? ಎಂದು ಯೋಚಿಸಿದರೆ, ಕರುನಾಡ ಸವಿಯೂಟ ಸೀಸನ್ –3ಕ್ಕಿಂತ ಮತ್ತಿನ್ನಾವುದು ಎನಿಸುತ್ತದೆ.

ವಿಶಿಷ್ಟ ಶೈಲಿ ಪಾಕಪದ್ಧತಿಗಳನ್ನು ಫ್ರೀಡಂ ಆರೋಗ್ಯಕರ ಅಡುಗೆ ಎಣ್ಣೆ ಪ್ರಸ್ತುತಪಡಿಸುತ್ತಿರುವ ಈ ಪ್ರದರ್ಶನಕ್ಕೆ ಶ್ರೀ ಕೃಷ್ಣ ಶುದ್ಧ ಹಸುವಿನ ತುಪ್ಪ ಸಹಯೋಗ ನೀಡುತ್ತಲಿದೆ. ಪ್ರಸಿದ್ಧ ಟಿವಿ ನಿರೂಪಕ ಮತ್ತು ಬಾಣಸಿಗ ಒಗ್ಗರಣೆ ಡಬ್ಬಿ ಮುರಳಿ ಅವರು ಈ ಸೀಸನ್‌ನಲ್ಲಿ ಎರಡು ನಾನ್– ವೆಜ್ ರೆಸಿಪಿಗಳನ್ನು ನಿಮ್ಮ ಮುಂದೆ ಪ್ರದರ್ಶಿಸಲಿದ್ದಾರೆ.

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 3 Powered by Sri Krishna




ಮುರಳಿ ಮತ್ತು ಸುಚಿತ್ರಾ



ಪ್ರಾನ್ಸ್ ಪುಳಿಮುಂಚಿ

ಬೇಕಾದ ಪದಾರ್ಥಗಳು:
ಪ್ರಾನ್ಸ್ ಅರ್ಧ ಕಿ.ಲೋ., ಎಣ್ಣೆ ನಾಲ್ಕು ಚಮಚ, ಜಜ್ಜಿದ ಬೆಳ್ಳುಳ್ಳಿ ಒಂದು ಚಮಚ, ಉಪ್ಪು ರುಚಿಗೆ ತಕ್ಕಷ್ಟು. ಮಸಾಲ ಪದಾರ್ಥಗಳಲ್ಲಿ 8 ರಿಂದ 10 ಕೆಂಪು ಒಣಮೆಣಸಿನಕಾಯಿ, ಸಣ್ಣ ನಿಂಬೆ ಗಾತ್ರದಷ್ಟು ಹುಣಿಸೆಹಣ್ಣು, ನಾಲ್ಕು ಹಸಿಮೆಣಸಿನಕಾಯಿ, ಜೀರಿಗೆ ಒಂದು ಚಮಚ, ಸಾಸಿವೆ ಅರ್ಧ ಚಮಚ, ಬೆಳ್ಳುಳ್ಳಿ ಎಸಳು 7 ಮತ್ತು ಅರ್ಧ ಚಮಚ ಅರಿಶಿನ.



ಮಾಡುವ ವಿಧಾನ: ಮಸಾಲ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ಪ್ಯಾನ್ ಮೇಲೆ ನಾಲ್ಕು ಚಮಚ ಎಣ್ಣೆ ಹಾಕಿ ಬಿಸಿಯಾದ ಮೇಲೆ ಜಜ್ಜಿಟ್ಟ ಬೆಳ್ಳುಳ್ಳಿ ಪೇಸ್ಟ್ ಹಾಕಿ ಬಾಡಿಸಿ. ನಂತರ ಪ್ರಾನ್ಸ್ ಸೇರಿಸಿ. ಬೇಕಿದ್ದಲ್ಲಿ ಪ್ರಾನ್ಸ್ ಅನ್ನು ಉಪ್ಪು–ಅರಿಶಿನ ಹಾಕಿ ಮ್ಯಾರಿನೇಟ್ ಮಾಡಿಟ್ಟುಕೊಳ್ಳಬಹುದು. ಮ್ಯಾರಿನೇಟ್ ಆಗಿರುವ ಪ್ರಾನ್ಸ್ ಅನ್ನು ಎಣ್ಣೆಗೆ ಹಾಕಿ ಕಡಿಮೆ ಉರಿಯಲ್ಲಿ 10 ನಿಮಿಷ ಫ್ರೈ ಮಾಡಿ. ನೀರಿನಂಶ ಹೋಗುವವರೆಗೆ ಉರಿಯಿರಿ. ನಂತರ ರುಬ್ಬಿಟ್ಟ ಮಸಾಲೆ ಹಾಕಿ ಚೆನ್ನಾಗಿ ಕಲಸಿ. ನಿಮಗೆ ಬೇಕಾದಷ್ಟು ಪ್ರಮಾಣದ ನೀರು ಬೆರೆಸಿ. ರುಚಿಗೆ ತಕ್ಕಷ್ಟು ಉಪ್ಪನ್ನು ಸೇರಿಸಿ, ಕಡಿಮೆ ಉರಿಯಲ್ಲಿ ಐದಾರು ನಿಮಿಷ ಬೇಯಿಸಿದರೆ ಘಮಘಮಿಸುವ ಪ್ರಾನ್ಸ್ ಪುಳಿಮುಂಚಿ ತಯಾರು.

ಸಾವೋಜಿ ಮಟನ್ ಖಾರ ಬೋಟಿ

ಬೇಕಾದ ಪದಾರ್ಥಗಳು:
ಒಂದು ಕೆ.ಜಿ. ಮಟನ್ (ಬೋಟಿ ಕಟ್), ಒಂದೂವರೆ ಚಮಚ ಉಪ್ಪು, ಒಂದು ಚಮಚ ಅರಿಶಿನ, ಎಣ್ಣೆ ಎರಡು ಚಮಚ, ಒಂದು ಚಮಚ ತುಪ್ಪ.

ಮಾಡುವ ವಿಧಾನ: ಕುಕ್ಕರ್‌ನಲ್ಲಿ ಮಾಂಸದ ತುಂಡುಗಳು, ಅರಿಶಿನ, ಉಪ್ಪು ಹಾಗೂ ತುಪ್ಪ ಹಾಕಿ (ಮಟನ್‌ನಲ್ಲಿ ಕೊಬ್ಬು ಜಾಸ್ತಿ ಇದ್ದಲ್ಲಿ ತುಪ್ಪ ಬೇಡ) ಚೆನ್ನಾಗಿ ಕಲಸಿ. ಗಮನವಿರಲಿ ನೀರು ಬೆರೆಸುವುದು ಬೇಡ. ಕುಕ್ಕರ್ ಮುಚ್ಚಳ ಮುಚ್ಚಿ ಒಂದು ವಿಸಿಲ್ ಬರುವವರೆಗೆ ಕೂಗಿಸಿ. ಸಣ್ಣ ಉರಿಯಲ್ಲಿ ಮತ್ತೆರಡು–ಮೂರು ವಿಸಿಲ್ ಬರುವವರೆಗೆ ಬೇಯಿಸಿ. ಮಾಂಸ ಹದವಾಗಿ ಬೇಯುವಂತೆ ನೋಡಿಕೊಳ್ಳಿ. ಬೆಂದ ಮಾಂಸ ಡ್ರೈ ಆಗಬೇಕಾದಲ್ಲಿ ಒಂದು ಕಡಾಯಿ ತೆಗೆದುಕೊಂಡು, ಮಾಂಸದ ತುಂಡುಗಳನ್ನು ಸಾರದೊಂದಿಗೆ ಹಾಕಿ ಕಡಿಮೆ ಉರಿಯಲ್ಲಿ ಮತ್ತಷ್ಟು ಬೇಯಿಸಿ. ಮಾಂಸದಲ್ಲಿರುವ ತುಪ್ಪ ಅಥವಾ ಕೊಬ್ಬು ಬೇರ್ಪಡೆ ಆಗುವವರೆಗೆ ಬೇಯಿಸಿದ್ದಲ್ಲಿ ಸಾವೋಜಿ ಮಟನ್ ಖಾರ ಬೋಟಿ ಬ್ಯಾಟಿಂಗ್‌ಗೆ ರೆಡಿ. ಮಟನ್ ಡ್ರೈ ಅನ್ನು 15 ದಿನಗಳ ಕಾಲ ಫ್ರಿಡ್ಜ್‌ನಲ್ಲಿಟ್ಟು ನಿಮಗೆ ಬೇಕೆನಿಸಿದಾಗ ಫ್ರೈ ಮಾಡಿಕೊಂಡು ತಿನ್ನಬಹುದು.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

LPG Partner: Indane | Hygiene Partner: EXO | Special Partner: KSDA | Associate Sponsors: PHILIPS, Preethi, SSP HING, Vencobb | Rice Partner: INDIA GATE | Supported by: Sujay

ವರುಣ್ ಚಕ್ರವರ್ತಿಗೆ ಐದು ವಿಕೆಟ್ • ಗಮನ ಸೆಳೆದ ಭಾರತದ ಮರುಹೋರಾಟ

ದಕ್ಷಿಣ ಆಫ್ರಿಕಾಕ್ಕೆ ಸ್ಟಬ್ಸ್ ಗೆಲುವಿನ ಕಾಣಿಕೆ

ಗೆಬರ್ಹಾ, (ಪಿಟಿಐ): ದಕ್ಷಿಣ ಆಫ್ರಿಕಾದ ನೆಲದಲ್ಲಿ ಸ್ಪಿನ್ ಮೋಡಿ ಪ್ರದರ್ಶಿಸಿದ ವರುಣ್ ಚಕ್ರವರ್ತಿ ಐದು ವಿಕೆಟ್ ಗೊಂಚಲು ಗಳಿಸಿದರು. ಆದರೆ ಈ ಸಾಧನೆಯಿಂದಾಗಿ ಭಾರತಕ್ಕೆ ಒಲಿಯಬೇಕಿದ್ದ ಗೆಲುವನ್ನು ಆತಿಥೇಯ ತಂಡದ ಟ್ರಿಸ್ಟನ್ ಸ್ಟಬ್ಸ್ ಮತ್ತು ಜೆರಾಲ್ಡ್ ಕೋಟ್ಜಿಯಾ ಕಸಿದುಕೊಂಡರು.

ಭಾರತ ತಂಡವು ಒಡ್ಡಿದ್ದ 124 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆತಿಥೇಯ ತಂಡವು ಒಂದು ಹಂತದಲ್ಲಿ ಸೋಲಿನ ಭೀತಿ ಎದುರಿಸಿತ್ತು. ಸ್ಪಿನ್ನರ್ ವರುಣ್ ಚಕ್ರವರ್ತಿ (17ಕ್ಕೆ5) ಅದಕ್ಕೆ ಕಾರಣರಾಗಿದ್ದರು. ಯುವ ಬ್ಯಾಟರ್ ಸ್ಟಬ್ಸ್ (ಔಟಾಗದೇ 47; 41ಎ, 4X7) ನಿರೀಕ್ಷೆ ಹುಸಿಗೊಳಿಸಲಿಲ್ಲ. ಅವರಿಗೆ ಜೆರಾಲ್ಡ್ (ಔಟಾಗದೇ 19, 9ಎ, 4X2, 6X1) ಉತ್ತಮ ಆಟದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು 3 ವಿಕೆಟ್‌ಗಳ ರೋಚಕ ಜಯಗಳಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ವರುಣ್ ಸ್ಪಿನ್ ದಾಳಿಯಿಂದಾಗಿ ಆತಿಥೇಯ ತಂಡವು 15.4 ಓವರ್‌ಗಳಲ್ಲಿ 86 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ಗೆಲುವಿಗೆ ಬೇಕಾಗಿದ್ದ ಬಾಕಿ ರನ್‌ಗಳನ್ನು ಗಳಿಸುವ ಹೊಣೆ ಹೊತ್ತು ನಿಂತಿದ್ದ ಸ್ಟಬ್ಸ್ ಮತ್ತು ಜೆರಾಲ್ಡ್ ಮುರಿಯದ



ಟ್ರಿಸ್ಟನ್ ಸ್ಟಬ್ಸ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರಗಳು

8ನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿದರು. ಇದರೊಂದಿಗೆ ಭಾರತದ ಬೌಲರ್‌ಗಳ ದಿಟ್ಟ ಹೋರಾಟಕ್ಕೆ ತೆರೆಬಿತ್ತು. ದಕ್ಷಿಣ ಆಫ್ರಿಕಾ ತಂಡವು 19 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 128 ರನ್ ಗಳಿಸಿ ಗೆದ್ದಿತು.



ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತದ ಸ್ಪಿನ್ನರ್ ವರುಣ್ ಚಕ್ರವರ್ತಿ

ಬ್ಯಾಟರ್‌ಗಳ ವೈಫಲ್ಯ: ಈ ಸರಣಿಯ ಮೊದಲ ಪಂದ್ಯದಲ್ಲಿ ಮಿಂಚಿದ್ದ ಭಾರತದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಇಲ್ಲಿ ವಿಫಲರಾದರು. ಅದರಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 124 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅದಕ್ಕೆ ತಕ್ಕಂತೆ ಬೌಲರ್‌ಗಳು ದಾಳಿ ನಡೆಸಿದರು. ಆತಿಥೇಯ ಬಳಗದ ಐವರು ಬೌಲರ್‌ಗಳು ತಲಾ ಒಂದು ವಿಕೆಟ್ ಗಳಿಸಿದರು.

ಸರಣಿಯ ಮೊದಲ ಪಂದ್ಯದಲ್ಲಿ ಅಬ್ಬರದ ಶತಕ ಬಾರಿಸಿದ್ದ ಸಂಜು ಸ್ಯಾಮ್ಸನ್ ಅವರನ್ನು ಮೊದಲ ಓವರ್‌ನಲ್ಲಿಯೇ ಮಾರ್ಕೊ ಯಾನ್ಸೆನ್ ಕ್ಲೀನ್ ಬೌಲ್ಡ್ ಮಾಡಿದರು. ಅಭಿಷೇಕ್ ಶರ್ಮಾ, ನಾಯಕ ಸೂರ್ಯಕುಮಾರ್ ಯಾದವ್ ತಲಾ 4 ರನ್ ಗಳಿಸಿ ನಿರ್ಗಮಿಸಿದರು. ತಿಲಕ್ ವರ್ಮಾ (20; 20ಎ) ಮತ್ತು ಅಕ್ಷರ್ ಪಟೇಲ್ (27; 21ಎ) ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಹಾರ್ದಿಕ್ ಪಾಂಡ್ಯ ಅಜೇಯ 39 ರನ್ (45ಎ) ಗಳಿಸಿದರು. 1 ಸಿಕ್ಸರ್ ಮತ್ತು 4 ಬೌಂಡರಿ ಇದ್ದವು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ124 (ತಿಲಕ್ ವರ್ಮಾ 20, ಅಕ್ಷರ್ ಪಟೇಲ್ 27, ಹಾರ್ದಿಕ್ ಪಾಂಡ್ಯ ಔಟಾಗದೇ 39, ಮಾರ್ಕೊ ಯಾನ್ಸೆನ್ 25ಕ್ಕೆ1, ಗೆರಾಲ್ಡ್ ಕೋಜಿ 25ಕ್ಕೆ1, ಸೈಮಲೇನ್ 20ಕ್ಕೆ1, ಏಡನ್ ಮರ್ಕರಂ 4ಕ್ಕೆ1, ಪೀಟರ್ 20ಕ್ಕೆ1) ದಕ್ಷಿಣ ಆಫ್ರಿಕಾ: 19 ಓವರ್‌ಗಳಲ್ಲಿ 7ಕ್ಕೆ128 (ರೀಜಾ ಹೆನ್ರಿಕ್ಸ್ 24, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 47, ಜೆರಾಲ್ಡ್ ಕೋಟ್ಜಿಯಾ ಔಟಾಗದೇ 19, ವರುಣ್ ಚಕ್ರವರ್ತಿ 17ಕ್ಕೆ5, ರವಿ ಬಿಷ್ಣೋಯಿ 21ಕ್ಕೆ1)
ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 3 ವಿಕೆಟ್‌ಗಳ ಜಯ, ಸರಣಿ 1–1.
ಪಂದ್ಯದ ಆಟಗಾರ: ಟ್ರಿಸ್ಟನ್ ಸ್ಟಬ್ಸ್

ಟೇಬಲ್ ಟೆನಿಸ್: ಆಕಾಶ್, ಖುಷಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕಾಶ್ ಕೆ.ಜೆ ಮತ್ತು ಖುಷಿ ವಿ. ಅವರು ಭಾನುವಾರ ಡಾ.ಎಂ.ಎಸ್. ರಾಮಯ್ಯ ಸ್ಮಾರಕ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ದೊಡ್ಡಬಳ್ಳಾಪುರದ ಹಿಲ್‌ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯಲ್ಲಿ ಆಕಾಶ್ 4–0 (12–10, 11-5, 11-8, 11-4)ಯಿಂದ ಅಭಿನವ್ ಕೆ. ಮೂರ್ತಿ ಅವರನ್ನು ನೇರ ಗೇಮ್‌ಗಳಿಂದ ಮಣಿಸಿ ಕಿರೀಟ ಮುಡಿಗೇರಿಸಿಕೊಂಡರು.



ಪ್ರಶಸ್ತಿ ಪತ್ರದೊಂದಿಗೆ ಆಕಾಶ್ ಕೆ.ಜೆ. ಮತ್ತು ಖುಷಿ ವಿ.

ಸೆಮಿಫೈನಲ್‌ನಲ್ಲಿ ಅಕಾಶ್ 4–1ರಿಂದ ಅನಿರ್ಬನ್ ರಾಯ್ ಚೌಧರಿ ವಿರುದ್ಧ; ಅಭಿನವ್ 4–3ರಿಂದ ಸಂಜಯ್ ಮಾಧವನ್ ಅವರನ್ನು ಸೋಲಿಸಿದ್ದರು.

ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಖುಷಿ 4–2 (8-11, 5-11, 11-5, 11-7, 11-8, 12-10)ರಿಂದ ವೇದಾ ಲಕ್ಷ್ಮಿ ಡಿ.ಕೆ. ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಖುಷಿ 4–2ರಿಂದ ತೃಪ್ತಿ ಪುರೋಹಿತ್ ಎದುರು; ವೇದಾಲಕ್ಷ್ಮಿ 4–1ರಿಂದ ಸಹನಾ ಎಚ್. ಮೂರ್ತಿ ಎದುರು ಜಯ ಸಾಧಿಸಿದ್ದರು.



ಇಂದಿನಿಂದ ಮಹಿಳಾ ಹಾಕಿ ಏಷ್ಯನ್ ಚಾಂಪಿಯನ್ಸ್

ಭಾರತಕ್ಕೆ ಪ್ರಶಸ್ತಿ ಉಳಿಸಿಕೊಳ್ಳುವ ಸವಾಲು

ರಾಜಗಿರ್, ಒಡಿಶಾ (ಪಿಟಿಐ): ಮುಂದಿನ ಒಲಿಂಪಿಕ್ ಕೂಟದ ಪ್ರವೇಶದ ಮೇಲೆ ಕಣ್ಣಿಟ್ಟಿರುವ ಭಾರತ ಮಹಿಳಾ ಹಾಕಿ ತಂಡವು ಸೋಮವಾರ ಇಲ್ಲಿ ಆರಂಭವಾಗಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ. ಹಾಲಿ ಚಾಂಪಿಯನ್ ಭಾರತ ತಂಡವು ತವರಿನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿದೆ.

ಆತಿಥೇಯ ತಂಡವು ರ‍್ಯಾಂಕಿಂಗ್‌ನಲ್ಲಿ ತನಗಿಂತಲೂ ಕೆಳಗಿರುವ ಮಲೇಷ್ಯಾ ತಂಡವನ್ನು ಮೊದಲ ಪಂದ್ಯದಲ್ಲಿ ಎದುರಿಸಲಿದೆ. ಭಾರತ ತಂಡವು ಈವರೆಗೆ ಏಳು ಆವೃತ್ತಿಗಳಲ್ಲಿ ಆಡಿದೆ. ಅದರಲ್ಲಿ 2016 (ಸಿಂಗಪುರ) ಮತ್ತು 2023 (ರಾಂಚಿ) ಚಾಂಪಿಯನ್ ಆಗಿತ್ತು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಭಾರತ ಐತಿಹಾಸಿಕ ಸಾಧನೆ ಮಾಡಿತ್ತು. ಆದರೆ ಕಳೆದ ಕೆಲವು ತಿಂಗಳುಗಳಿಂದ ಸೋಲುಗಳನ್ನೇ ಹೆಚ್ಚು ಅನುಭವಿಸಿದೆ. ಅದರಿಂದಾಗಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿಲ್ಲ. ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ 16 ಪಂದ್ಯಗಳ ಪೈಕಿ 13ರಲ್ಲಿ ಸೋತಿದೆ. ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಮತ್ತೆ ಗೆಲುವಿನ ಹಾದಿಗೆ ಮರಳುವ ಛಲದಲ್ಲಿ ತಂಡವಿದೆ.



ತಾಲೀಮು ನಡೆಸಿದ ಭಾರತ ಹಾಕಿ ತಂಡದ ಆಟಗಾರ್ತಿಯರು

ಈ ಬಾರಿ ಕಣಕ್ಕಿಳಿಯಲಿರುವ ಸಲೀಮಾ ಟೆಟೆ ನಾಯಕತ್ವದ ತಂಡದಲ್ಲಿ ಯುವ ಮತ್ತು ಅನುಭವಿ ಆಟಗಾರ್ತಿಯರು ಇದ್ದಾರೆ. ಸ್ಟ್ರೈಕರ್ ನವನೀತ್ ಕೌರ್ ಉಪನಾಯಕಿಯಾಗಿದ್ದಾರೆ. ಟೂರ್ನಿಯಲ್ಲಿ ಭಾರತಕ್ಕೆ ಬಹಳ ಕಠಿಣ ಸ್ಪರ್ಧೆ ಎದುರಾಗಲಿದೆ. ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ತಂಡ ಚೀನಾ, ಜಪಾನ್, ಕೊರಿಯಾ ಮತ್ತು ಥಾಯ್ಲೆಂಡ್ ತಂಡಗಳ ಸವಾಲನ್ನು ಸಲೀಮಾ ಬಳಗವು ಎದುರಿಸಲಿದೆ.

ರಕ್ಷಣಾ ವಿಭಾಗದಲ್ಲಿ ಉದಿತಾ ಜ್ಯೋತಿ, ಇಶಿಕಾ ಚೌಧರಿ, ಸುಶೀಲಾ ಚಾನು ವೈಷ್ಣವಿ ವಿಠ್ಠಲ್ ಫಾಲ್ಕೆ ಇದ್ದಾರೆ. ಮಿಡ್ ಫೀಲ್ಡ್ ವಿಭಾಗದಲ್ಲಿ ಸಲೀಮಾ, ನೇಹಾ, ಶರ್ಮಿಳಾ ದೇವಿ, ಮನೀಷಾ ಚೌಹಾಣ್, ಸುನೆಲಿತಾ ಟೊಪ್ಪೊ, ಲಾಲ್‌ರೆಮಸಿಯಾಮಿ ಇದ್ದಾರೆ. ಫಾರ್ವರ್ಡ್ ವಿಭಾಗದಲ್ಲಿ ನವನೀತ್ ಕೌರ್, ಸಂಗೀತಾಕುಮಾರಿ, ದೀಪಿಕಾ, ಪ್ರೀತಿ ದುಬೆ, ಡಂಗ್ ಡಂಗ್ ಬ್ಯೂಟಿ ಅವರ ಮೇಲೆ ಭರವಸೆ ಇದೆ. ಅನುಭವಿ ಗೋಲ್‌ಕೀಪರ್ ಸವಿತಾ ಅವರ ಮುಂದೆ ಗುರುತರ ಜವಾಬ್ದಾರಿ ಇದೆ.

‘ಇತ್ತೀಚಿನ ವೈಫಲ್ಯಗಳಿಂದ ಪಾಠ ಕಲಿತಿರುವ ತಂಡವು ವಿಶ್ವಕಪ್ ಮತ್ತು ಒಲಿಂಪಿಕ್ಸ್ ದೃಷ್ಟಿಯಲ್ಲಿಟ್ಟುಕೊಂಡು ಹೊಸ ಪಯಣಕ್ಕೆ ಅಣಿಯಾಗಿದೆ. ಅದರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿ ಮಹತ್ವದ್ದಾಗಿದೆ’ ಎಂದು ಮುಖ್ಯ ಕೋಚ್ ಹರೇಂದ್ರ ಸಿಂಗ್ ತಿಳಿಸಿದ್ದಾರೆ.

ಟೂರ್ನಿಯಲ್ಲಿ ಭಾರತ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಚೀನಾ ಕೂಡ ತೀವ್ರ ಪೈಪೋಟಿ ನೀಡುವ ಸಾಧ್ಯತೆ ಇದೆ. ಈ ಹಿಂದೆ ದಕ್ಷಿಣ ಕೊರಿಯಾ ಮೂರು ಬಾರಿ ಪ್ರಶಸ್ತಿ ಗೆದ್ದರೆ ಜಪಾನ್ ವನಿತೆಯರು ಎರಡು ಸಲ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಇಂದಿನ ಪಂದ್ಯಗಳು

ಪಂದ್ಯ	ಸಮಯ
ಜಪಾನ್ Vs ದಕ್ಷಿಣ ಕೊರಿಯಾ	ಮಧ್ಯಾಹ್ನ 12.15
ಚೀನಾ Vs ಥಾಯ್ಲೆಂಡ್	ಮಧ್ಯಾಹ್ನ 2.30
ಭಾರತ Vs ಮಲೇಷ್ಯಾ	ಸಂಜೆ 4.45

ಲೈವ್ ನೇರಪ್ರಸಾರ ಸೋನಿ ಸ್ಪೋರ್ಟ್ಸ್

ಕ್ರಿಕೆಟ್: ಆಸ್ಟ್ರೇಲಿಯಾ ತಂಡಕ್ಕೆ ನೇಥನ್ ಮ್ಯಾಕ್‌ಸ್ವೀನಿ

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದ ಯುವ ಬ್ಯಾಟರ್ ನೇಥನ್ ಮ್ಯಾಕ್ ಸ್ವೀನಿ ಅವರು ಭಾರತ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆರಂಭಿಕ ಬ್ಯಾಟರ್ ಆಗಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.



ನೇಥನ್ ಮ್ಯಾಕ್‌ಸ್ವೀನಿ

ಭಾನುವಾರ ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಿಸಿರುವ ತಂಡದಲ್ಲಿ ಮ್ಯಾಕ್ ಸ್ಥಾನ ಪಡೆದಿದ್ದಾರೆ. ಅವರು ಉಸ್ಮಾನ್ ಖ್ವಾಜಾ ಜೊತೆಗೆ ಇನಿಂಗ್ಸ್ ಆರಂಭಿಸಲಿದ್ದಾರೆ. ಇದೇ 22ರಿಂದ ಪರ್ತ್‌ನಲ್ಲಿ ಮೊದಲ ಪಂದ್ಯ ಆರಂಭವಾಗಲಿದೆ.

ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೊಲ್ಯಾಂಡ್, ಅಲೆಕ್ಸ್ ಕ್ಯಾರಿ, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಮಿಚೆಲ್ ಮಾರ್ಷ್, ನೇಥನ್ ಮ್ಯಾಕ್‌ಸ್ವೀನಿ, ಸ್ಟೀವನ್ ಸ್ಮಿತ್, ಮಿಚೆಲ್ ಸ್ಟಾರ್ಕ್.

ಆಸ್ಟ್ರೇಲಿಯಾದಲ್ಲಿ 22 ವರ್ಷಗಳ ಬಳಿಕ ಏಕದಿನ ಸರಣಿ ಗೆದ್ದ ಪಾಕ್

ಪರ್ತ್, ಆಸ್ಟ್ರೇಲಿಯಾ (ಎಎಫ್‌ಪಿ): ಸಾಂಘಿಕ ಆಟವಾಡಿದ ಪಾಕಿಸ್ತಾನ ತಂಡವು ಭಾನುವಾರ ಏಕದಿನ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಆತಿಥೇಯ ಆಸ್ಟ್ರೇಲಿಯಾವನ್ನು ಮಣಿಸಿತು. ಈ ಮೂಲಕ ಪಾಕ್ ತಂಡ 22 ವರ್ಷಗಳ ಬಳಿಕ ಆಸ್ಟ್ರೇಲಿಯಾದಲ್ಲಿ ಏಕದಿನ ಸರಣಿ ಗೆದ್ದಿತು.

ಮೊದಲ ಪಂದ್ಯವನ್ನು ಆಸ್ಟ್ರೇಲಿಯಾ ಗೆದ್ದರೆ, ನಂತರದ ಎರಡು ಪಂದ್ಯಗಳನ್ನು ಪಾಕಿಸ್ತಾನ ಗೆದ್ದು 2–1ರಿಂದ ಸರಣಿಯನ್ನು ವಶಮಾಡಿಕೊಂಡಿತು. 2002ರಲ್ಲಿ ಪಾಕಿಸ್ತಾನವು ಕೊನೆಯ ಬಾರಿ ಏಕದಿನ ಸರಣಿಯನ್ನು ಜಯಿಸಿತ್ತು.



ಸೈಮ್ ಅಯೂಬ್ –ಎಎಫ್‌ಪಿ ಚಿತ್ರ

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಆಸ್ಟ್ರೇಲಿಯಾ ತಂಡವು, ಶಾಹೀನ್ ಶಾ ಅಫ್ರಿದಿ, ನಸೀಂ ಶಾ ಮತ್ತು ಹ್ಯಾರಿಸ್ ರವೂಫ್ ದಾಳಿಗೆ ತತ್ತರಿಸಿ 31.5 ಓವರ್‌ಗಳಲ್ಲಿ 140 ರನ್‌ಗೆ ಕುಸಿಯಿತು.ಪಾಕಿಸ್ತಾನ 26.5 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 143 ರನ್ ಗಳಿಸಿಸಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 31.5 ಓವರ್‌ಗಳಲ್ಲಿ 140 (ಸೀನ್ ಅಬಾಟ್ 30, ಮ್ಯಾಥ್ಯೂ ಶಾರ್ಟ್ 22; ಶಾಹೀನ್ ಶಾ ಅಫ್ರಿದಿ 32ಕ್ಕೆ 3, ನಸೀಂ ಶಾ 54ಕ್ಕೆ 3, ಹ್ಯಾರಿಸ್ ರವೂಫ್ 24ಕ್ಕೆ 2). ಪಾಕಿಸ್ತಾನ: 26.5 ಓವರ್‌ಗಳಲ್ಲಿ 2 ವಿಕೆಟ್‌ಗೆ 143 (ಸೈಮ್ ಅಯೂಬ್ 42, ಅಬ್ದುಲ್ಲಾ ಶಫೀಕ್ 37, ಬಾಬರ್ ಅಜಂ ಔಟಾಗದೇ 28, ಮೊಹಮ್ಮದ್ ರಿಜ್ವಾನ್ ಔಟಾಗದೇ 30; ಲ್ಯಾನ್ಸ್ ಮೋರಿಸ್ 24ಕ್ಕೆ 2).

ಅಂಚೆ ನೌಕರರ ಬ್ಯಾಡ್ಮಿಂಟನ್ ಕರ್ನಾಟಕ ತಂಡಗಳಿಗೆ ನಿರಾಸೆ

ಮೈಸೂರು: ಕರ್ನಾಟಕ ಪುರುಷ ಹಾಗೂ ಮಹಿಳೆಯರ ತಂಡಗಳು ಭಾನುವಾರ ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆರಂಭಗೊಂಡ ಅಂಚೆ ನೌಕರರ 38ನೇ ಅಖಿಲ ಭಾರತ ಬ್ಯಾಡ್ಮಿಂಟನ್ ಟೂರ್ನಿಯ ಟೀಮ್ ಚಾಂಪಿಯನ್‌ಷಿಪ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ನಿರಾಸೆ ಅನುಭವಿಸಿದವು.

ಪುರುಷರ ವಿಭಾಗದ ಪಂದ್ಯದಲ್ಲಿ ಕರ್ನಾಟಕವು 1–3ರಿಂದ ಜಾರ್ಖಂಡ್ ಎದುರು ಮಣಿಯಿತು. ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ವನಿತೆಯರು 1–2ರಿಂದ ಗುಜರಾತ್ ಎದುರು ಪರಾಭವಗೊಂಡರು. ವಿವಿಧ ರಾಜ್ಯಗಳ 20 ಪುರುಷರ ಹಾಗೂ 17 ಮಹಿಳೆಯರ ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡಿವೆ.

ಮೊದಲ ದಿನದ ಫಲಿತಾಂಶ: (ಪ್ರಿ ಕ್ವಾರ್ಟರ್ ಫೈನಲ್): ಟೀಂ ಚಾಂಪಿಯನ್‌ಷಿಪ್: ಪುರುಷರು: ಜಾರ್ಖಂಡ್ 3–0ರಿಂದ ಕಾಶ್ಮೀರ ವಿರುದ್ಧ; ಹರಿಯಾಣ 3–1ರಿಂದ ಪಶ್ಚಿಮ ಬಂಗಾಳ ವಿರುದ್ಧ; ಕೇರಳ 3–1ರಿಂದ ರಾಜಸ್ಥಾನ ಎದುರು; ಮಹಾರಾಷ್ಟ್ರ 3–0ರಿಂದ ಉತ್ತರಾಖಂಡ ವಿರುದ್ಧ; ಒಡಿಶಾ 3–2ರಿಂದ ಅಸ್ಸಾಂ ಎದುರು; ತೆಲಂಗಾಣ 3–0ರಿಂದ ಪಂಜಾಬ್ ವಿರುದ್ಧ; ತಮಿಳುನಾಡು 3–1ರಿಂದ ಹಿಮಾಚಲ ಪ್ರದೇಶ ವಿರುದ್ಧ; ಹರಿಯಾಣ 3–0ರಿಂದ ಛತ್ತೀಸ್‌ಗಢ ಎದುರು; ಗುಜರಾತ್ 3–1ರಿಂದ ದೆಹಲಿ ವಿರುದ್ಧ ಗೆಲುವು.


ಮಹಿಳೆಯರ ವಿಭಾಗ: ಗುಜರಾತ್ 2–0ರಿಂದ ಪಂಜಾಬ್ ವಿರುದ್ಧ; ಒಡಿಶಾ 2–0ರಿಂದ ಜಮ್ಮು ಕಾಶ್ಮೀರ ಎದುರು; ಹರಿಯಾಣ 2–0 ರಿಂದ ಛತ್ತೀಸ್‌ಗಢ ವಿರುದ್ಧ; ಪಶ್ಚಿಮ ಬಂಗಾಳ 2–0ರಿಂದ ಹಿಮಾಚಲ ಪ್ರದೇಶ ವಿರುದ್ಧ; ಅಸ್ಸಾಂ 2–1ರಿಂದ ದೆಹಲಿ ಎದುರು; ತಮಿಳುನಾಡು 2–0ರಿಂದ ತೆಲಂಗಾಣ ವಿರುದ್ಧ; ಮಹಾರಾಷ್ಟ್ರ 2–1ರಿಂದ ಉತ್ತರಾಖಂಡ ವಿರುದ್ಧ; ಕೇರಳ 2–0ರಿಂದ ರಾಜಸ್ಥಾನ ಎದುರು ಗೆಲುವು.

ಯು ಮುಂಬಾಗೆ ಮಣಿದ ಯೋಧಾಸ್

ನೊಯ್ಡಾ: ಅಜಿತ್ ಚೌಹಾಣ್ (8) ಮತ್ತು ರೋಹಿತ್ (8) ಅಮೋಘ ರೇಡಿಂಗ್ ಬಲದಿಂದ ಯು ಮುಂಬಾ ತಂಡವು ಇಲ್ಲಿ ಭಾನುವಾರ ಆರಂಭವಾದ ಪ್ರೊ ಕಬಡ್ಡಿ ಲೀಗ್‌ನ ಎರಡನೇ ಚರಣದ ಪಂದ್ಯದಲ್ಲಿ 35–33 ರಿಂದ ಆತಿಥೇಯ ಯು.ಪಿ. ಯೋಧಾಸ್ ತಂಡವನ್ನು ಮಣಿಸಿತು.

ಮಧ್ಯಂತರದ ವೇಳೆಗೆ ಯೋಧಾಸ್ 1 (17–16) ಅಂಕಗಳಿಂದ ಮುನ್ನಡೆ ಸಾಧಿಸಿತ್ತು. ಆದರೆ, ಉತ್ತರಾರ್ಧದಲ್ಲಿ ಮುಂಬಾ ತಂಡ ಪಾರಮ್ಯ ಮೆರೆಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 39–23ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.



ಅಮೆರಿಕದ ಕೊಕೊ ಗಾಫ್ ಶನಿವಾರ ಡಬ್ಲ್ಯುಟಿಎ ಫೈನಲ್ಸ್ ಟೆನಿಸ್ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ 3–6, 6–4, 7–6 (7/2)ರಿಂದ ಚೀನಾದ ಝೆಂಗ್ ಕಿನ್ವೆನ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.

ಅರ್ಜುನ್‌ಗೆ ಮೊದಲ ಸೋಲುಣಿಸಿದ ಅರವಿಂದ್



ಲಿಯೊನ್ ಮೆಂಡೊನ್ಸಾ

ಚೆನ್ನೈ (ಪಿಟಿಐ): ಒಂಟಿಯಾಗಿ ಅಗ್ರಸ್ಥಾನದಲ್ಲಿದ್ದ ಅರ್ಜುನ್ ಇರಿಗೇಶಿ ಅವರ ಅಜೇಯ ಓಟವನ್ನು ಸ್ವದೇಶದ ಅರವಿಂದ ಚಿದಂಬರಂ ಅಂತ್ಯಗೊಳಿಸಿದರು. ಭಾನುವಾರ ಈ ಸೋಲಿನೊಡನೆ ಅರ್ಜುನ್ ಅವರು ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಆರನೇ ಸುತ್ತಿನ ನಂತರ ಲೊವೊನ್ ಅರೋನಿಯನ್ ಜೊತೆ ಅಗ್ರಸ್ಥಾನ ಹಂಚಿಕೊಳ್ಳಬೇಕಾಯಿತು.

ಅರವಿಂದ್‌ಗೆ ಇದು ಟೂರ್ನಿಯಲ್ಲಿ ಮೊದಲ ಜಯ. ಅರ್ಜುನ್ ಮತ್ತು ಅರೋನಿಯನ್ ತಲಾ ನಾಲ್ಕು ಅಂಕ ಸಂಗ್ರಹಿಸಿದ್ದಾರೆ. ಇರಾನಿನ ಗ್ರ್ಯಾಂಡ್ ಮಾಸ್ಟರ್ ಅಮಿನ್ ತಬಾತಬೇಯಿ (3.5) ಎರಡನೇ ಸ್ಥಾನದಲ್ಲಿದ್ದಾರೆ.

2729ರ ಸರಾಸರಿ ರೇಟಿಂಗ್ ಹೊಂದಿರುವ ಈ ಟೂರ್ನಿಯಲ್ಲಿ ಈಗ ಪೈಪೋಟಿ ತೀವ್ರಗೊಂಡಿದೆ.

ಬಿಳಿ ಕಾಯಿಗಳಲ್ಲಿ ಆಡಿದ ಅರವಿಂದ್ ಕ್ವೀನ್ ಪಾನ್ ಓಪನಿಂಗ್ ಆಯ್ಕೆ ಮಾಡಿದರು. ಆದರೆ 16 ಮತ್ತು 17ನೇ ನಡೆಯಲ್ಲಿ ಅರ್ಜುನ್ ಅವರ ತಪ್ಪಿನಿಂದಾಗಿ ಅರವಿಂದ್‌ಗೆ ಮೇಲುಗೈ ಲಭಿಸಿತು. 48ನೇ ನಡೆಯಲ್ಲಿ ಅರವಿಂದ್ ಜಯಗಳಿಸಿದರು. ಈ ಹಿಂದಿನ ಎಲ್ಲ ಪಂದ್ಯಗಳನ್ನು ಅವರು ಡ್ರಾ ಮಾಡಿಕೊಂಡಿದ್ದರು.

ದಿನದ ಇತರ ಮೂರು ಪಂದ್ಯಗಳು ಡ್ರಾ ಆದವು. ಅಮೆರಿಕದ ಅರೋನಿಯನ್, 70 ನಡೆಗಳ ನಂತರ ವಿದಿತ್ ಗುಜರಾತಿ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು. ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್-ಲಗ್ರಾವ್, ಇನ್ನೊಂದು ಪಂದ್ಯದಲ್ಲಿ ಸರ್ಬಿಯಾದ ಅಲೆಕ್ಸಿ ಸರನ ಜೊತೆ ಪಾಯಿಂಟ್ ಹಂಚಿಕೊಂಡರು. ತಬಾತಬೇಯಿ ಅವರಿಗೆ ಸ್ವದೇಶದ ಪರ್ಹಾಮ್ ಮಘಸೂಡ್ಲೂ ಅವರ ರಕ್ಷಣಾಕೋಟೆ ಭೇದಿಸಲಾಗಲಿಲ್ಲ.

ಚಾಲೆಂಜರ್ಸ್ ವಿಭಾಗದಲ್ಲಿ ವಿ.ಪ್ರಣವ್ ಆರನೇ ಸುತ್ತಿನ ಡ್ರಾ ಹೊರತಾಗಿಯೂ ಅಗ್ರಸ್ಥಾನದಲ್ಲಿ ಮುಂದುವರಿದರು. ಇದು ಅವರಿಗೆ ಸತತ ಎರಡನೇ ಡ್ರಾ. ಅವರು ಐದು ಪಾಯಿಂಟ್ಸ್ ಗಳಿಸಿದ್ದಾರೆ. 39 ನಡೆಗಳ ನಂತರ ಪ್ರಾಣೇಶ್ ಅವರ ಡ್ರಾ ಕೊಡುಗೆಗೆ ಪ್ರಣವ್ ಸಮ್ಮತಿಸಿದರು.

ರೌನಕ್ ಸಾಧ್ವಾನಿ ಅವರು ಡಿ.ಹಾರಿಕಾ ಜೊತೆ ಡ್ರಾ ಮಾಡಿಕೊಂಡರೆ, ಜಿಎಂ ಅಭಿಮನ್ಯು ಪುರಾಣಿಕ್, ಆರ್.ವೈಶಾಲಿ ವಿರುದ್ಧ ಗೆಲುವು ಪಡೆದರು. ಲಿಯೊನ್ ಲೂಕ್ ಮೆಂಡೊನ್ಸಾ, ಕಾರ್ತಿಕೇಯನ್ ಮುರಳಿ ಜೊತೆ ಡ್ರಾ ಮಾಡಿಕೊಂಡರು. ಗೋವಾದ ಲಿಯೊನ್ ನಾಲ್ಕೂವರೆ ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದ್ದಾರೆ.

ಅಬ್‌ಸ್ಟ್ಯಾಕಲ್ ಕೋರ್ಸ್ ರೇಸ್ ಸಂಜಯ್‌ಗೆ ಪ್ರಶಸ್ತಿ

ಬೆಂಗಳೂರು: ಆಗ್ರಾದ ಸಂಜಯ್ ನೇಗಿ ಮತ್ತು ಸಿಂಗಪುರದ ಐ ಪಿಂಗ್ ಯೋ, ಟಿವಿಎಸ್ ಅಪಾಚೆ ಸ್ಪಾರ್ಟನ್ ಆಶ್ರಯದಲ್ಲಿ ಭಾನುವಾರ ನಡೆದ ಅಬ್‌ಸ್ಟ್ಯಾಕಲ್ ಕೋರ್ಸ್ ರೇಸ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸ್ಪರ್ಧಾತ್ಮಕ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಸಂಜಯ್ 25 ನಿಮಿಷ 25 ಸೆಕೆಂಡ್‌ನಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಗಳಿಸಿದರೆ, ಬೆಂಗಳೂರಿನ ಯಧುಕೃಷ್ಣನ್ ಎಂ (29:49) ಮತ್ತು ಚೆನ್ನೈನ ಎ.ಬಿ. ವಿಕ್ಟರ್ (31:09) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಪಿಂಗ್ 37 ನಿಮಿಷ 24 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ದೆಹಲಿಯ ಏಕ್ತಾ ರಾವತ್ (38:36) ಎರಡನೇ ಸ್ಥಾನ ಪಡೆದರೆ, ಅಮೆರಿಕದ ಮಿಸ್ಟಿ ಮೊಕ್ರೊಸ್ (39:26) ಮೂರನೇ ಸ್ಥಾನ ಪಡೆದರು.

ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ಸ್ಪರ್ಧಿಗಳು ನಗದು ಬಹುಮಾನಗಳೊಂದಿಗೆ ಟಿವಿಎಸ್ ಅಪಾಚೆ ಆರ್‌ಟಿಆರ್ 200 ಬೈಕ್ ಬಹುಮಾನ ಪಡೆದರು. ಬೆಂಗಳೂರಿನ ಎಂಬೆಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್‌ನಲ್ಲಿ ನಡೆದ ರೇಸ್‌ನಲ್ಲಿ 12 ದೇಶಗಳಿಂದ 2000ಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ಈ ರೇಸ್ 20 ಅಡೆತಡೆ ಒಳಗೊಂಡಂತೆ 5 ಕಿ.ಮೀ. ದೂರವಿತ್ತು.

